


ರಾಧಸ್

ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ

ಸಪ್ಟೆಂಬರ

೨.೨.೭೮

ಎರಡನೆಯ ವರುಷದ ಮೂರನೆಯ ಪುಷ್ಪ

ರಾಧಸ್

(ಕಲಾಮಿಲನ)

ಗಣಪತಿರಾವ್ ಪಾಂಡೇಶ್ವರ ಕೃತ

ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ

ಪ್ರಕಾಶಕರು :
ಎಂ. ಎಚ್. ರಾವ್
ಸರ್ವೋದಯ
ಸಾಹಿತ್ಯಮಾಲೆ, ಹುಬ್ಬಳ್ಳಿ

*

ಮುದ್ರಕರು :
ಶ್ರೀ ಎಸ್. ವ್ಹಿ. ಶ್ರೇಷ್ಠಿ
ರಾಯಲ್ ಪ್ರಿಂಟಿಂಗ್ ಪ್ರೆಸ್,
ದುರ್ಗದಬೈಲು, ಹುಬ್ಬಳ್ಳಿ

*

ಮೊದಲನೆಯ ಆವೃತ್ತಿ
೧೫, ಫೆಬ್ರುವರಿ
೧೯೫೦

*

ಬೆಲೆ : ೧—೦—೦

ಮುನ್ನುಡಿ ರೂಪದ ಆತ್ಮನಿವೇದನೆ

ಕಳೆದ ಮೇ ತಿಂಗಳಲ್ಲಿ ಉತ್ತರ ಕನ್ನಡದ ಶಿರಸಿಯಲ್ಲಿ ಅಖಿಲ ಭಾರತ ಅಡಿಕೆ ಮಹಾ ಮಂಡಳದ ತೃತೀಯ ವಾರ್ಷಿಕಾಧಿವೇಶನದೊಟ್ಟಿಗೆ ಪ್ರಥಮ ಕರ್ನಾಟಕ ಯಕ್ಷಗಾನ ಪರಿಷತ್ತು ಜರುಗಿತು. ಆ ಪರಿಷತ್ತಿನ ನನ್ನ ಅಧ್ಯಕ್ಷ ಭಾಷಣವು ದ್ವಿತೀಯ ಮುದ್ರಣವನ್ನು ಕಾದುಕೊಂಡಿತ್ತು. ಅದನ್ನೂ,ಅದರೊಂದಿಗೆ ನನ್ನ ಮತ್ತಿತರ ಕೆಲವು ಪ್ರಕಟಿತ ಲೇಖನಗಳನ್ನೂ ಒಟ್ಟಯಿಸಿ,'ಸರ್ವೋದಯ 'ಗ್ರಂಥಮಾಲೆಯವರು ಪ್ರಕಟಿಸ ಬಯಸಿದರು. ಅದರ ಫಲವೇ ಈ ಚಿಕ್ಕ ಪುಸ್ತಕ.

ಈ ಯಕ್ಷಗಾನ ಪರಿಷತ್ತಿನ ಅಧ್ಯಕ್ಷತೆ ಅನಿರೀಕ್ಷಿತವಾಗಿ ನನಗೆ ಬಂದಿತು. ಪರಿಷತ್ತು ಕೂಡಲು ನಾಲ್ಕೈದು ದಿನಗಳ ಮುಂಚೆಯಷ್ಟೇ ನನಗೆ ಆಮಂತ್ರಣ ಬಂದಿತು. ತಾರಿನಮೇಲೆ ತಾರು ಮಾಡಿ, ಅಧ್ಯಕ್ಷತೆ ಸ್ವೀಕರಿಸಲು ಒತ್ತಾಯಿಸಿದರು. ಹೀಗಾಗಿ, ಈ ಭಾಷಣವನ್ನು ಕೇವಲ ಒಂದೆರಡು ದಿನಗಳಲ್ಲೇ ಬರೆದು ಮುಗಿಸಬೇಕಾಯಿತು.

ನನ್ನ ಜನ್ಮಸ್ಥಳ (ಬ್ರಹ್ಮಾವರ)ಕ್ಕೆ ಹತ್ತೆಂಟು ಮೈಲು ದೂರದಲ್ಲಿರುವ ಮಂದರ್ತಿ, ಅಮೃತೇಶ್ವರಿ, ಪೆರಡೂರು, ಸುರಾಲು , 'ಹಾಲಾಡಿ ಹಾರಾಡಿ, ಸೌಕೂರು, ಮಾರಣಕಟ್ಟೆ ಮೊದಲಾದ ಊರುಗಳು ದಶಾವತಾರ ಮೇಳಗಳ ಉಗಮಸ್ಥಾನಗಳು. ಶ್ರೀಮಂತರಾಗಿದ್ದ ನನ್ನ ತಂದೆಯವರು ವರ್ಷಂಪ್ರತಿ ಯಕ್ಷಗಾನ ಮೇಳದವರನ್ನು ಕರೆಯಿಸಿ ಆಟ ಆಡಿಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ನಟರಿಗೆಲ್ಲ ಸಾರ್ವಭೌಮನಂತಿದ್ದ ದಿವಂಗತ ಉಪ್ಪುರಳ್ಳಿ ಶೇಷ ಮತ್ತು ಅನರ ತಮ್ಮ (ಮೃದಂಗವಾದನಪಟು) ವರ್ಷಂಪ್ರತಿ ನಮ್ಮಲ್ಲಿ ನನ್ನ ಅಣ್ಣನ ಅತಿಥಿಗಳಾಗಿ ಹಲವು ದಿನ ಕಳೆದು ಬಿಡುತ್ತಿದ್ದರು. ಆಗಿನ ಕಾಲದ ಭಾಗವತರಲ್ಲಿ ಪ್ರಸಿದ್ಧರಾಗಿದ್ದ

ಮರ್ತಪ್ಪ (ಕಿಣಿ) ಭಾಗವತರು ನಮ್ಮ ಆಶ್ರಯದಲ್ಲಿದ್ದ ಒಂದು ಮನೆತನದ ಅಳಿಯಂದಿರಾಗಿದ್ದುದರಿಂದ ಅವರು ಮಾವನ ಮನೆಗೆ ಬಂದಾಗಲೆಲ್ಲ ನಮ್ಮಲ್ಲಿಗೆ ಬಂದೇ ಬರುತ್ತಿದ್ದರು. ಆಗ್ಗೆ ನನಗೆ ೧೬ ವರ್ಷ ವಯಸ್ಸು. ಅಂದಿನಿಂದದಲೇ ನಾನು ಕವಿತ್ವ ರಚಿಸತೊಡಗಿದವನಿದ್ದು, ಆಗಲೇ (೧೯೨೫) ನನ್ನ ಮೊತ್ತಮೊದಲ ಪುಟ್ಟ ಕಾವ್ಯ "ವಿವೇಕಾನಂದ ಚರಿತಂ" ಎಂಬ ಪುಸ್ತಕವು ಪ್ರಕಟವಾಗಿದ್ದಿತು. ಉಡುಪಿಯ, 'ಸತ್ಯಾಗ್ರಹಿ' ಕುಮಟೆಯ 'ಕಾನಡಾ ಧುರೀಣ' ಮಂಗಳೂರಿನ, ಕಂಠೀರವ, ಪತ್ರಿಕೆಗಳಲ್ಲಿ ನನ್ನ ಕೆಲವು ಪದ್ಯಗಳೂ ಲೇಖನಗಳೂ ಪ್ರಕಟವಾಗುತ್ತಿದ್ದುವು ಹೀಗಾಗಿ, ಯಕ್ಷಗಾನಕಲಾವಿದರಿಗೆ ನನ್ನ ಬಗ್ಗೆ ಪ್ರೇಮಾದರಗಳುಂಟಾಗಿದ್ದುವು. ೧೯೨೮ರಲ್ಲಿ ಕುಂದಾಪುರ ತಾಲೂಕಿನ ಶಂಕರನಾರಾಯಣ ಎಂಬಲ್ಲಿ, ದಿವಂಗತ ದೇಶಭಕ್ತ ಹೊಸಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ "ದಕ್ಷಿಣ ಕನ್ನಡಜಿಲ್ಲಾ ಪ್ರಥಮ ಯಕ್ಷಗಾನ ಪರಿಷತ್ತು" ಸೇರಿತು ಆ ಪರಿಷತ್ತಿಗೆ ಹೈಸ್ಕೂಲು ವಿದ್ಯಾರ್ಥಿಯಾಗಿದ್ದನಾನು ಈಗ ಪ್ರಸಿದ್ಧ ಕಲಾವಿದ ಕಾದಂಬರಿಕಾರರಾಗಿರುವ ಶ್ರೀ॥ ಶಿವರಾಮ ಕಾರಂತರೊಂದಿಗೆ ಹೋಗಿದ್ದೆನು. ಆ ಸಮ್ಮೇಳನದವರು ಏರ್ಪಡಿಸಿದ್ದ ಯಕ್ಷಗಾನ ಪ್ರಬಂಧ ಸ್ಪರ್ಧೆಗೆ ಇತರ ಸಾಹಿತಿಗಳಂತೆ ನಾನೂ ಒಂದು ಪ್ರಬಂಧ ಕಳುಹಿಸಿದ್ದೆನು ಆಗಿನ ಕಾಲದ ಅರ್ಥಗಾರರಲ್ಲಿ ಪ್ರಸಿದ್ಧರಾಗಿದ್ದ ಆಯುರ್ವೇದ ಕವಿ ಭೂಷಣ ವೆಂಕಪ್ಪ ಶೆಟ್ಟರ ಪ್ರಬಂಧಕ್ಕೆ ಪಾರಿತೋಷಕ ಸಿಕ್ಕಿತು.

ಹೀಗೆ, ಚಿಕ್ಕಂದಿನಿಂದಲೂ ನನಗೆ ಯಕ್ಷಗಾನ ನಾಟಕ ಕಲೆಯ ಬಗ್ಗೆ ಪ್ರೀತಿಬಹಳ. ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ನಟಶಿರೋಮಣಿ ಶ್ರೀ॥ ಕೆರೆಮನೆ ಶಿವರಾಮ ಹೆಗಡೆಯವರ ಇಡಗುಂಜಿ ಮೇಳದವರು ೧೯೪೮ನೇ ನವಂಬರದಲ್ಲಿ ಕಲಘಟಗಿಯಲ್ಲಿ ನಾಲ್ಕಾರು ಆಟ ಆಡಿದರು. ಈ ಕಲೆಯ ಬಗ್ಗೆ ನನಗಿರುವ ಉತ್ಕಟಾಭಿಮಾನವನ್ನು ಪ್ರತ್ಯಕ್ಷ ಬಲ್ಲವರಾಗಿರುವ ಅವರು ಕಲಘಟಗಿಯ ಆಟಗಳಿಗೆ ನನ್ನನ್ನು ಒಯ್ದರಲ್ಲದೆ, ಇದರ ಕುರಿತು ಈ ಕಡೆಯ ಜನರಲ್ಲಿ ಪ್ರಸಾರಮಾಡುವಂತೆ ಕೆಲವು ಲೇಖನಗಳನ್ನು ಬರೆಯಲು ಒತ್ತಾಯಿಸಿದರು. ಆ ಒತ್ತಾಯದ ಮೇರೆಗೆ ಇಲ್ಲಿಯ 'ಲೋಕಮತ'ಪತ್ರಿಕೆಯಲ್ಲಿ ಆಗಲೇ ಪ್ರಕಟಿಸಿದ್ದ ಕೆಲವು ಲೇಖನಗಳನ್ನು

ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಕಳೆದ ಆಗೆಸ್ಟಿನಲ್ಲಿ ಮುಂಬಯಿಯ "ಭಾರತ ಜ್ಯೋತಿ" ಆಂಗ್ಲ ವಾರ ಪತ್ರಿಕೆಯಲ್ಲಿಯೂ ಈ ಕುರಿತು ಒಂದು ಲೇಖನವನ್ನು ಬರೆದು ಅನ್ಯಪ್ರಾಂತೀಯರಿಗೂ ಇದರ ಪರಿಚಯ ಮಾಡಿಕೊಡಲು ಯತ್ನಿಸಿದ್ದೆನು.

ಇದು ನನ್ನ ಮೊತ್ತಮೊದಲ ಗದ್ಯಕೃತಿ. ಇದರಲ್ಲಿ ಕತೆಕಾದಂಬರಿಗಳ ಕಲ್ಪನಾ ವಿಲಾಸಕ್ಕೆಡೆ ಇಲ್ಲ. ನಾನು ಕತೆಗಾರನೂ ಅಲ್ಲ, ಕಾದಂಬರಿಗಾರನೂ ಅಲ್ಲ. ಈಗ್ಗೆ ೨೨ ವರ್ಷಗಳಹಿಂದೆ ಮಂಗಳೂರಿನ "ಉದಯ ಭಾರತ" ಎಂಬ ಮಾಸಪತ್ರಿಕೆಯಲ್ಲಿ ನನ್ನ ಕೆಲವು ಪುಟ್ಟಕತೆಗಳು ಪ್ರಕಟವಾಗಿವೆ. ಮುಂದೆ ನಾನು ಕತೆಕಾದಂಬರಿಗಳ ಗೋಜಿಗೇ ಹೋಗಲಿಲ್ಲ. ಭಾವಸ್ಫುರಣವಾದಂತೆ ಸಣ್ಣ ಪುಟ್ಟ ತುಂಡುಗಬ್ಬಗಳನ್ನಷ್ಟು ಬರೆದಿರುತ್ತೇನೆ. ಪತ್ರಿಕಾ ಸಂಪಾದಕ ವೃತ್ತಿಯಲ್ಲಿದ್ದಾಗ. ಮತ್ತು ಈಗಲೂ, ಆಗಾಗ ಅಂತಃಸ್ಫೂರ್ತಿಯಾದಾಗ ನನಗೆ ಒಪ್ಪಿಗೆಯಾದ ವಿಷಯಗಳ ಕುರಿತು ಲೇಖನಗಳನ್ನು ಬರೆಯುತ್ತಿರುವೆನು. ಹಾಗೆ ಬರೆದ ಲೇಖನಗಳಲ್ಲಿ ಪ್ರಕಟವಾದವುಗಳನ್ನು ಆದಷ್ಟು ಬೇಗನೇ ಪುಸ್ತಕರೂಪದಲ್ಲಿ ಜನತೆಯ ಕೈಗೆ ಕೊಡಲು ಆಶೆಯಾಗಿದೆ. ಅಲ್ಪಜ್ಞನಾದ ನನ್ನ ಈ ಕೃತಿಯನ್ನು ಕನ್ನಡದ ಓದುಗರು ಪ್ರೀತಿಯಿಂದ ಸ್ವೀಕರಿಸುವರೆಂದು ನಂಬಿದ್ದೇನೆ. ಇದಕ್ಕೆ ಉಚಿತವಾದ ಮುಖಚಿತ್ರ ಒದಗಿಸಿ, ಪ್ರಕಟನೆಗೆ ಮುಂಬಂದ ಈ ಗ್ರಂಥಮಾಲೆಯಸಂಪಾದಕರಾದ ನನ್ನ ಮಿತ್ರ ಶ್ರೀ॥ ಹರಿದಾಸರಿಗೆ ಒಳ್ಳೆಯದಾಗಲೆಂದು ಹಾರೈಸುತ್ತೇನೆ.

ಹುಬ್ಬಳ್ಳಿ.
೧೦-೨-೫೦

ಇತಿ
ಜಿ. ಆರ್. ಪಾಂಡೇಶ್ವರ

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೧೦	೧೨	ಸ್ಥಂಭ	ಸ್ತಂಭ
೨೩	೭	ಶೊಕ	ಶೋಕ
೩೬	೫	ಕಾಟಕ	ನಾಟಕ
೪೯	೨೭	ಶಾಸ್ತ್ರಪೂರಿತ ವಿಖ್ಯಾತ	ಶಾಸ್ತ್ರಪೂರಿತ ಸಭಾವಿಖ್ಯಾತ
೫೦	೪	ಕುಸುಮೇಶ್ವೇತಂ	ಕುಸುಮಶ್ವೇತಂ
೫೩	೧೪	ನಿಯೋಜಿತವಾಗಿವೆಯೇ	ನಿಯೋಜಿತವಾಗಿವೆಯೋ
೫೪	೪	ರಿತ್ಯೈತರ್	ರಿತ್ಯೇತರ್
೫೬	೧೦	ಅವಟ್ಟ	ಅಳಿವಟ್ಟ
೫೭	೯	ಕೀಳ್ಮೆಯಾಗಲೀ	ಕೀಳ್ಮೆಯಾಗಲೀ ನೂತನ-ಪುರಾತನವೆಂಬ ಕಾಲಭೇದವಾಗಲೀ
೫೭	೧೩	ಅಲ್ಲಲ್ಲಿ	ಅಲ್ಲೆಲ್ಲ
೫೭	೨೧	ಕರುಡ	ಕುರುಡ
೫೯	೧೧	ಅಲಂಕಾರಿಕರು	ಆಲಂಕಾರಿಕರು
೬೦	೧೨	ಕಾರ್ಯಪ್ರಾಪ್ತಿ	ಕಾರ್ಯವ್ಯಾಪ್ತಿ
೬೧	೧	ಬದುಕಿ	ಬದುಕು
೬೧	೬	ಈರ್ಷೆ	ಈರ್ಷ್ಯೆ
೬೨	೨೫	ಅಲಂಕಾರಗಳನ್ನು	ಅಲಂಕಾರಗಳಲ್ಲಿ
೬೩	೫	ಮಧ	ಮದ
೬೪	೬	ದ್ರುಷ್ಟಿ	ದೃಷ್ಟಿ
೬೪	೧೫	ಡಂಭ	ದಂಭ
೬೪	೧೮	ಶ್ರುತ್ಯ	ಶ್ರಿತ್ಯ
೬೪	೧೮	ಲೋಹಾ	ಮೋಹಾ
೬೪	೧೯	ಶ್ರವರ್ತಂತೆ	ಪ್ರವರ್ತಂತೆ
೬೪	೨೧	ವಾದಗಳಿಂದ	ಮದಗಳಿಂದ
೬೫	೧೮	ಧ್ಯೇಯಾಥಂತೆ	ಧ್ಯೇಯಾಂಧತೆ
೬೯	೫	ವ್ಯಂದದ	ವೃಂದದ

ಅನುಕ್ರಮ

"ಯಕ್ಕಲಗಾಣ"

ತಾಳಮನಿತ್ತು ಸಮ್ಮನಿಸದೊತ್ತುವ ಪಂಚಮನುಣ್ಚರಕ್ಕಣಂ
ಮೇಳತೆಯಿಲ್ಲ ಬೀಣೆಯಸರಂ ಬಿಡದಿಲ್ಲಿಯೆನಿಪ್ಪತಾಯೆಯಿಂ।
ದಾಣತಿಮಾಡಿ ಸಾಳಗದ ದೇಸಿಯಗೀತಮ ನಂದುಪಾಡುವಿಂ
ಪಾಣನನುರ್ವರಾಧಿಪತಿ ಲೀಲೆಯಿನೆಕ್ಕಲಗಾಣನೊರ್ವನಂ॥
ಕೇಳುತಮಿರ್ದಂ.

(ಚಂದ್ರಪ್ರಭ ಪುರಾಣ ಆ. ೭, ಪ. ೯೬)

ಓದಲೇ ಬೇಕಾದ ಗ್ರಂಥಗಳು

೧) **ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕತೆಗಳು** ಬೆಲೆ: ೧—೦—೦
ಓ'ಹೆನ್ರಿ, ವೆಲ್ಸ್, ಪೋಯೆ ಮೊದಲಾದ ಜಗತ್ತಿನ ವಿವಿಧ ರಾಷ್ಟ್ರಗಳ ಲೇಖಕರ ೧೩ ಚಿಕ್ಕ ಕಥೆಗಳು. ಉತ್ತಮ ಮತ್ತು ಆದರ್ಶ ಕತೆಗಳು. ಪ್ರತಿಯೊಂದು ಕಥೆಯು ಒಂದೊಂದು ವೈಶಿಷ್ಟ್ಯದಿಂದ ಕೂಡಿದೆ. ೮೦ ಪುಟಗಳು

೨) **ಬದುಕಿನದಾರಿ** (ಕಾದಂಬರಿ) ಬೆಲೆ: ೧—೮—೦
ಹುಬ್ಬಳ್ಳಿಯ ಒಂದು ದೇಸಾಯೀ ಕುಟುಂಬದ ಕಥೆ. ಸುಂದರ ಕಾದಂಬರಿ. ಉತ್ತರ ಕರ್ನಾಟಕದ ಜನಜೀವನದ ಒಂದು ಮಾದರಿ. ೧೫೦ ಪುಟಗಳು

೩) **ಮರುಭೂಮಿಯ ಅರಬರು** (ರಾಜಕಾರಣ) ಬೆಲೆ: ೧—೮—೦
ಎಲ್ಲ ಅರಬ ರಾಷ್ಟ್ರಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಲೋಚಿತ ಕೃತಿ. ವ್ಯಂಗ್ಯ ಚಿತ್ರಗಳು ಮತ್ತು ನಕ್ಷೆಗಳಿಂದ ತುಂಬಿದೆ. ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತ. ೯೬ ಪುಟಗಳು

೪) **ಸಂದಾದೀಪದ ನಂದಿನಿ** ಬೆಲೆ: ೧—೪—೦
ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಜೀವನ ಚರಿತ್ರೆ. ಇದರಲ್ಲಿ ಕಾಂಗ್ರೆಸ್ ಇತಿಹಾಸ, ನೆಹರೂ ಮನೆತನದ ವಿವರ ಮೊದಲಾದವುಗಳು ಇವೆ. ೮೪ಪುಟಗಳು

೫) **ಅವರು ಯುದ್ಧಕ್ಕೆ ಹೋಗಲಿಲ್ಲ** ಬೆಲೆ: ೧—೦—೦
ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನಕ್ಕೆ ಸಂಬಂಧಿಸಿದ ಕಥೆಗಳು. ೮೦ಪುಟಗಳು

೬) **ಬಾಳಿನ ಗಿಡ** (ಕಾದಂಬರಿ) ಬೆಲೆ: ೨-೧೨—೦
ನಿವೃತ್ತ ಶಾಲಾ ಉಪಾಧ್ಯಾಯರು ಪಡಭೂಮಿಗೆ ತೆರಳಿ ಅದನ್ನು ಕೃಷಿ ಮಾಡಿದ ಸರಸ ಕಾದಂಬರಿ. ರಾಷ್ಟ್ರ ಕವಿ ಶ್ರೀ ಗೋವಿಂದ ಪೈಗಳವರ ವಿದ್ವತ್ಪೂರ್ಣ ಮುನ್ನುಡಿ. ಅತ್ಯಂತ ಮನೋಹರವಾದ ಕಾದಂಬರಿ. ೨೧೨ ಪುಟಗಳು

ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ

ಉತ್ತಮ ಕಲೆಯ ಉಗಮ ಸ್ಥಾನ

ಸೌಂದರ್ಯಸಾಧನೆ ಮತ್ತು ಸತ್ಯೋಪಾಸನೆಗಳೇ ಕಲೆಗಳ ಅಂತಿಮೋದ್ದೇಶ. ಸೌಂದರ್ಯದಲ್ಲಿ ಅಂತಸ್ಸೌಂದರ್ಯ ಮತ್ತು ಬಹಿಸ್ಸೌಂದರ್ಯ ಎಂಬ ಇತ್ತೆರ ಇದೆ. ಬಹಿಸ್ಸೌಂದರ್ಯವೆಂದರೆ ದೇಹದ ಸೌಂದರ್ಯ. ಅಂತಸ್ಸೌಂದರ್ಯವೆಂದರೆ, ಮನಸ್ಸಿನ ಸೌಂದರ್ಯ.

ಸೌಂದರ್ಯವು ಆನಂದಕ್ಕೆ ಆಶ್ರಯವಾಗುವುದು. ಆನಂದವೆಂದರೆ ದುಃಖವಿಲ್ಲದ ಪರಿಸ್ಥಿತಿ. ಹೂವು ಅರಳುವುದರಿಂದ ತನ್ನ ಆನಂದವನ್ನು ವ್ಯಕ್ತಪಡಿಸುತ್ತದೆ. ರಸ ತುಂಬಿದಾಗಲೇ ಮೊಗ್ಗೆಯು ಅರಳುತ್ತದೆ.

ಹಾಗೆಯೇ ಮನಸ್ಸಿನಲ್ಲಿ ಸೊಗದುಂಬಿದಾಗ ಮುಖವು ಅರಳುವುದು; ಕಣ್ಣಿನಲ್ಲಿ ಕಾಂತಿ ಮಿನುಗುವುದು. ಮನಸ್ಸಿನ ಆನಂದವೇ ಶುಚಿತ್ವ. ಅದು ಅತ್ಯಂತ ಮಧುರವಾದ ಭೂಮಿಕೆಯುಳ್ಳದಾಗಿದೆ.

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರ ಎಂಬೀ ಷಡೂರ್ಮಿ(ಷಡ್ವೈರಿ)ಗಳಿಂದ ಅಲ್ಲೋಲ ಕಲ್ಲೋಲವಾಗಿ ಕದಡಿದ ಮನದಲ್ಲಿ ಸೌಂದರ್ಯದ ಶಾಂತ ಪ್ರಸನ್ನಭಾವವು ಹುಟ್ಟಲಾರದು. ಮನಸ್ಸಿನಲ್ಲಿ ಹುಟ್ಟಿದ ಭಾವಗಳ ಅಲೆಗಳು ಮೊಗದಲ್ಲಿ ಕೂಡಲೆ ಪ್ರತಿಬಿಂಬಿತವಾಗುವುವು. ಅಂತಹ ಪ್ರತಿಬಿಂಬವು ಮೊತ್ತಮೊದಲು ಕಣ್ಣುಗಳಲ್ಲಿ ತೋರಿಬರುವುದು.

ಒದವಿರ್ದ ಚಿತ್ತದಿಂ ತೋ-।
ರ್ಪುದು ಭಾವಂ, ಭಾವದಿಂದ ರಸಮುದಯಿಸುಗುಂ ॥
ವದನಮದಂ ಪ್ರಕಟಿಪುದಾ।
ವದನದೆ ರಸಮಿಂತಿ ದೆಂದು ತಿಳಿಗೆ ರಸಜ್ಞರ್ ॥

(ರಸರತ್ನಾಕರ, ೩ ನೇ ಸೂತ್ರ)

ಎಂಬುದಾಗಿ ಕವಿ ಸಾಳ್ವನು ಎಲ್ಲ ಭಾವಾನುಭಾವಗಳಿಗೂ ಮೊಗವೇ ಕನ್ನಡಿಯಾಗಿದೆಂದು ಸಾರಿದ್ದಾನೆ.

" Face is the index of the mind "
ಎಂಬುದಾಗಿ ಆಂಗ್ಲ ಗಾದೆಯೊಂದಿದೆಯಲ್ಲವೇ ?

ಒಳಗಿನ ಸೌಂದರ್ಯಾಸೌಂದರ್ಯಗಳು ಮುಖದಲ್ಲಿ ಎದ್ದು ಕಾಣುತ್ತವೆ; ಅಂದ ಮೇಲೆ, ಹೊರಗಣ ಸೌಂದರ್ಯಕ್ಕೆಲ್ಲ ಒಳಗಿನ ಸೌಂದರ್ಯವೇ ಆಧಾರ ಎಂದಂತಾಯಿತು. ಪ್ರಸನ್ನಚಿತ್ತರ ಮುಖವು ಅರಳಿದ ಕೆಂದಾವರೆಯಂತೆ ನಗೆಯಿಂದ ತುಂಬಿರುತ್ತದೆ. ಅವರು ಕಣ್ದೆರೆದರೆ ಪೂರ್ಣಚಂದ್ರೋದಯವಾದಂತೆ, ಶಾಂತ ರಸದ ಹೊನಲು ಹರಿವುದು.

ಆ ಶಾಂತತೆಯಲ್ಲಿ, ನೀರಿನಲ್ಲಿ ಮಿಂಚಿದ್ದಂತೆ, ದಿವ್ಯಪ್ರಕಾಶವು ತುಂಬಿರುತ್ತದೆ. ಅದೇ ತೇಜಸ್ಸು, ಆ ತೇಜಸ್ಸಿಗೆ ವೀರ್ಯವೆನ್ನುವೆವು. ವೀರ್ಯ ಧಾರಣವೇ ಬ್ರಹ್ಮಚರ್ಯೆ.

ತೇಜೋಧಾರಿಗಳಾದವರು ಸತ್ಯದ ಉಪಾಸಕರಾಗಿರುವರು. ಅವರು ನಡೆದು ಬಂದರೆ, ಪ್ರಜ್ವಲಿಸುವ ದೀಪಸ್ಥಂಭವು ಚಲಿಸಿದಂತೆ ತೋರುವುದು; ಸತ್ಯದ ದಿವ್ಯಧ್ವಜವು ಸಜೀವವಾಗಿ ನಡೆದುಬಂದಂತೆ ಭಾಸವಾಗುವುದು.

ಷಡ್ವೈರಿಗಳನ್ನು ಗೆದ್ದ ಸಾಧು-ಸತ್ಪುರುಷರು ತೇಜೋನಿಧಿಗಳಾಗಿ ಬೆಳಗುವರು. ಸರ್ವ ಪ್ರಂಪಚವೂ ಅವರ ತೇಜಸ್ಸಿಗೆ ತಲೆತಗ್ಗಿಸುವುದು. ಎಲ್ಲರ ಮೇಲೂ ಅವರ ಪ್ರಭುತ್ವವು ಸ್ಥಾಪಿತವಾಗುವುದು.

"Truth is beauty
beauty is truth "
" ಸತ್ಯವೇ ಸೌಂದರ್ಯ
ಸೌಂದರ್ಯವೇ ಸತ್ಯ "

ಎಂಬುದಾಗಿ ಆಂಗ್ಲ ಕವಿ ಕೀಟ್ಸನು ಮನೋಹರವಾದ ಶೈಲಿಯಲ್ಲಿ ಸಿದ್ಧಾಂತಿಸಿದ್ದಾನೆ. ತೇಜಸ್ಸನ್ನು ಕಾದುಕೊಂಡವರು ಹುಟ್ಟಾ ಕುರೂಪಿಗಳಿದ್ದರೂ ರೂಪವಂತರಾಗಿ ತೋರುವರು.

ದೇಹಕ್ಕೆ ಕರ್ಮಪ್ರಪಂಚದ ಕೊಳೆ ತಗಲದೇ ಇರುವುದಿಲ್ಲ. ಅದನ್ನು ದಿನಂಪ್ರತಿ ಜಳಕಮಾಡಿ ತೊಳೆದುಕೊಳ್ಳಬೇಕು. ಆಹಾರದಲ್ಲಿ ಮಿತವಾಗಿಯೂ ಹಿತವಾಗಿಯೂ ಇದ್ದರೆ, ರೋಗಾದ್ಯುಪದ್ರವಗಳು ಬಾಧಿಸುವುದಿಲ್ಲ.

ನಿರೋಗಿಯಾದವನ ರಸರಕ್ತಗಳು ವೃದ್ಧಿಗೊಂಡು ಮುಖದಲ್ಲಿ ಮನೋಹರವಾದ ಕಾಂತಿಯುಂಟಾಗುವದು. ಮುಖದ ಕಾಂತಿಗೆ ಮನಸ್ಸಿನ ಶುಚಿತ್ವದ ಕಾಂತಿಯೂ ಕೂಡಿಕೊಂಡರೆ, ಬಂಗಾರಕ್ಕೆ ಪರಿಮಳ ಉಂಟಾದಂತೆ ಸತ್ಯ ಸೌಂದರ್ಯಗಳ ಸಮ್ಮಿಲನವಾಗುವುದು.

ಈ ಸಮ್ಮಿಲನವನ್ನು ಸಾಧಿಸಿದವರ ಕಲೆಯು ಅಜರಾಮರವಾಗಿ ಬಾಳುವುದು; ಲೋಕಕ್ಕೆಲ್ಲ ಮಹಾನಂದವನ್ನುಂಟುಮಾಡವುದು.

ಕಲೆಯ ಸೌಂದರ್ಯವನ್ನು ಸಾಧಿಸುವದೆಂದರೆ, ತೇಜಸ್ಸನ್ನು ಹೆಚ್ಚಿಸಿಕೊಳ್ಳುವುದು. ಚುಂಬನಕ್ಕೆ ತುತ್ತಾಗದ ತುಂಬೆಸಳಿನ ಹೂವಿನಂತೆ ತೇಜಸ್ಸನ್ನು ಕಾದುಕೊಂಡು ಬರುವದು.

ಮಧುಪಾನದಲ್ಲಿ ಆಸಕ್ತವಾದ ತುಂಬಿಗಳು ತಮ್ಮ ಬಳಿಗೆ ಬರದಂತೆ, ಬಂದರೂ ತಮ್ಮ ರಸವನ್ನು ಹೀರದಂತೆ ಎಚ್ಚರಿಕೆಯಿಂದ, ಗಟ್ಟಿಮುಟ್ಟಾಗಿ ರಬೇಕು.

“ ಎಸೆಗುಂ ದೇಹಿಗೆ ಮನದೊಳ್ ।
ಬೆಸುಗೆ; ಮನಕ್ಕಿಂದ್ರಿಯಂಗಳೊಂದಿಗೆ ಕೂಟಂ॥
ಎಸೆವಿಂದ್ರಿಯಮರ್ಥದೊಳಿ।
ಕ್ಷಿಸೆ ಬಳಿಯಂ ನೆಗಳ್ಗು ಮರ್ಥ ಬೋಧೆಯೆ....”

ಎಂಬುದಾಗಿ, ಸಾಳ್ವನು ದೇಹ ಮತ್ತು ಮನಸ್ಸುಗಳೊಳಗಿನ ಸಂಬಂಧವನ್ನು ಸೂಚಿಸಿದ್ದಾನೆ.

“ A healthy mind in a healthy body ”

(ನಿರೋಗಿಯಾದ ದೇಹದಲ್ಲಿ ನಿರೋಗಿಯಾದ ಮನಸ್ಸಿರುವುದು)

ಎಂದು ಆಂಗ್ಲರಲ್ಲಿ ಆರೋಗ್ಯ-ಮನಶ್ಶಾಸ್ತ್ರಗಳ ಸೂತ್ರವೊಂದು ಬಳಕೆಯಲ್ಲಿದೆ.

ಇಂದ್ರಿಯ ವ್ಯಾಪಾರಗಳಿಗೆಲ್ಲ ಮನಸ್ಸೇ ಪುರೋಹಿತನಾಗಿರುವುದು. ಆದ್ದರಿಂದ “ಇಂದ್ರಿಯಾಣಾಂ ಮನಶ್ಚಾಸ್ಮಿ” (ಇಂದ್ರಿಯಗಳಲ್ಲೆಲ್ಲ ಮನಸ್ಸಾಗಿದ್ದೇನೆ) ಎಂಬುದಾಗಿ ಗೀತೆಯಲ್ಲಿ ಕೃಷ್ಣನು ಹೇಳಿದ್ದಾನೆ.

ಮನಸ್ಸನ್ನು ಸದರ್ಥಗಳತ್ತ ಹರಿಯಗೊಡುವುದೇ ವಿವೇಕ. ಅಂತಹ ವಿವೇಕವುಳ್ಳ ಮನಸ್ಸು ಸತ್ಕಲೆಗಳ ಸುಕ್ಷೇತ್ರವಾಗುವುದು. ಅಲ್ಲಿ ರಸೋದ್ಗಮವಾದರೆ ದಿವ್ಯಾನಂದ ಮಾನಸಗಂಗೆ ಹುಟ್ಟಿದಂತೆಯೇ ಸರಿ.

ಈ ಆನಂದವೇ ಕಲಾರೂಪವಾದ ವಿಜ್ಞಾನವಾಗುವುದು. ವೃತ್ತಿ ಇಲ್ಲದ ಆನಂದವೇ ಜ್ಞಾನ; ವೃತ್ತಿಯಿಂದ ಸಂಕ್ಷುಬ್ಧಗೊಂಡ ಜ್ಞಾನವೇ ವಿಜ್ಞಾನ.

ವಿಜ್ಞಾನವು ಬಹು ಮುಖವಾಗಿ, ದ್ವೈತಭಾವವನ್ನು ಹುಟ್ಟಿಸುವುದು ದ್ವೈತವಿಲ್ಲದಲ್ಲಿ ಸಂಗೀತ, ಶಿಲ್ಪ, ಕಾವ್ಯ ಮತ್ತು ನೃತ್ಯಾದಿ ಕಲೆಗಳಿಗೆ ಆಸ್ಪದ ವಿಲ್ಲ.

ಕರ್ತೃ ಮತ್ತು ಕ್ರಿಯೆ ಎಂಬ ದ್ವೈತದ ಯುಗ್ಮ (ಮಿಥುನ) ದಿಂದ ವಿಜ್ಞಾನವೆಂಬ (ಕಲೆ) ಕರ್ಮವು ಹುಟ್ಟಿಕೊಳ್ಳುವುದು. ಮನಸ್ಸು ಮತ್ತು ಮನಸ್ಸಿನ ಸೌಂದರ್ಯವು ಕರ್ತೃವಾಗಿಯೂ ದೇಹ ಮತ್ತು ದೇಹದ ಸೌಂದರ್ಯವು ಕ್ರಿಯೆಯಾಗಿಯೂ ಏಕತ್ರ ಸಮ್ಮಿಳಿತವಾಗಬೇಕು. ಅದರಿಂದ ಹುಟ್ಟುವ ಕಲೆಯು ಉತ್ತಮ ಕರ್ಮದ ಕಲೆಯಾಗುವುದು.

ನೃತ್ಯಾಭಿನಯದ ಮರ್ಮ

ಹೃದಯದ ಭಾವನೆ ಮತ್ತು ಮನಸ್ಸಿನ ಕಲ್ಪನೆಗಳು ಮೊತ್ತ ಮೊದಲು ಕಣ್ಣಿನಲ್ಲಿ ಹೊಳೆದು, ಮೊಗದಲ್ಲಿ ಅರಳುವುವು. ಹಾಗೆ ಅರಳಿದಾಗ ಹೊರ ಹೊಮ್ಮುವ ಭಾವನಾ ಸುಗಂಧವು ಅಂಗೋಪಾಂಗಗಳಲ್ಲಿ ಸಂಚರಿಸುವುದು. ಆ ಸಂಚಲನ ಕ್ರಿಯೆಗೆ ಅಭಿನಯವೆನ್ನಬಹುದು.

'ನಯ'ಎಂದರೆ ಭಾವ. ಅದಕ್ಕೆ "ಅಭಿ" ಎಂಬ ಉಪಸರ್ಗವು ಕೂಡುವುದರಿಂದ 'ಅಭಿನಯ' ಎಂದಾಗುವುದು. 'ಅಭಿ' ಎಂದರೆ 'ಬಳಿಗೆ' ಎಂದರ್ಥವಾಗುವುದು. ಭಾವದ ಬಳಿಗೆ ತರುವ ಕ್ರಿಯೆಯೇ ಅಭಿನಯ, ಅರ್ಥಾತ್ ಭಾವವನ್ನು ತೋರಿಸುವ ಕ್ರಿಯೆಯೇ ಅಭಿನಯ.

ಸಾಹಿತ್ಯ ದರ್ಪಣಕಾರನು ಅಭಿನಯವೆಂದರೆ ಅವಸ್ಥೆಯ ಅನುಕರಣವೆಂದೂ ಅದು ನಾಲ್ಕು ವಿಧವಾಗಿರುವುದೆಂದೂ ಸೂಚಿಸಿದ್ದಾನೆ.

"ಭವೇದಭಿನಯೋವಸ್ಥಾನುಕಾರಃ ಸ ಚತುರ್ವಿಧಃ ||
ಆಂಗಿಕೋ, ವಾಚಿಕಶ್ಚೈವ ಮಾಹಾರ್ಯಃ ಸಾತ್ವಿಕಸ್ತಥಾ ||

ಪ್ರತಿಯೊಂದು ಕ್ರಿಯೆಗೂ ನಿರುಕ್ತಕಾರನಾದ ಯಾಸ್ಕನು—

ಜಾಯತೇಽಸ್ತಿ ವರ್ಧತೆ ವಿಪರಿಣಮತೇಽಪಕ್ಷೀಯತೆ ನಶ್ಯತಿ ||

(ಹುಟ್ಟುವಿಕೆ,ಬದುಕುವಿಕೆ,ಬೆಳೆಯುವಿಕೆ, ಪರಿಣಮಿಸುವಿಕೆ, ಕ್ಷೀಣಿಸುವಿಕೆ ಮತ್ತು ಸಾಯುವಿಕೆ)

ಎಂಬೀ ಅವಸ್ಥಾಷಟ್ಕವನ್ನು ನಿರ್ಧರಿಸಿದ್ದಾನೆ.

ಈ ಆರು ಅವಸ್ಥೆಗಳನ್ನೂ ಅಭಿನಯವು ವ್ಯಕ್ತಪಡಿಸುವಂತೆ ಅನುಕರಣ ಮಾಡುವುದು, ಮನೋವಾಕ್ಕಾಯಗಳೆಂಬ ತ್ರಿಕರಣಗಳ ಮೂಲಕವಾಗಿ ಆಂಗಿಕ (ದೇಹ) ಮತ್ತು ಆಹಾರ್ಯ, ವಾಚಿಕ (ಮಾತು) ಸಾತ್ವಿಕ (ಮಾನಸಿಕ) ಈ ಚತುರ್ವಿಧಾಭಿನಯವು ರೂಪುಗೊಳ್ಳುತ್ತದೆ. ಆಹಾರ್ಯ

ವೆಂದರೆ ಉಡುಗೆ ತೊಡುಗೆ (ವಸ್ತ್ರಾಭರಣ) ವೊದಲಾದ ಅಲಂಕಾರ ವಸ್ತುಗಳು.

ಸಾತ್ವಿಕವಾದ ಅಭಿನಯವೆಂದರೆ—

ಪುಲಕಾಶ್ರು ಸ್ವೇದಸ್ತಂ ।
ಭಲಯ ಸ್ವರಭೇದ ಕಂಪನ್ವೈವರ್ಣ್ಯಂಗಳ್ ಸಾತ್ವಿಕ ಭಾವಂಗಳ್॥

(ರೋಮಾಂಚನ, ಕಣ್ಣೀರು, ಬೆವರು, ನಡುಕ, ನಿಶ್ಚಲತೆ, ಸ್ವರಭೇದ ಬಣ್ಣ ಬದಲಾಗುವುದು.)

ಎಂಬುದಾಗಿ ರಸರತ್ನಾಕರ ಕರ್ತನಾದ ಕವಿ ಸಾಳ್ವನು ವಿವರಿಸಿದ್ದಾನೆ.

ಈ ಅಭಿನಯವನ್ನು ಪುರಾತನ ಪುಣ್ಯ ಪುರುಷನಾದ ಭರತಮುನಿಯು ಸೂತ್ರಗಳಾಗಿ ಸಮುಚ್ಚಯಿಸಿ, ಒಂದು ಶಾಸ್ತ್ರವಾಗಿ ಮಾಡಿದ್ದಾನೆ. ಅದಕ್ಕೆ 'ಭರತನಾಟ್ಯ ಶಾಸ್ತ್ರ'ವೆಂಬ ಹೆಸರಿದೆಯಷ್ಟೆ. ಆತನು ಈ ಶಾಸ್ತ್ರದಲ್ಲಿ ನೃತ್ಯ ಮತ್ತು ಸಂಗೀತ ಇವೆರಡನ್ನೂ ವಿಶದವಾಗಿ ನಿರೂಪಿಸಿದ್ದಾನೆ.

ನೃತ್ಯಕ್ಕೆ ನಾಟ್ಯವೆಂದೂ ಹೆಸರಿದೆ. ನಾಟ್ಯದಲ್ಲಿ ನೃತ್ಯ ಮತ್ತು ಅಭಿನಯ ಇವೆರಡೂ ಸಮ್ಮಿಲಿತವಾಗಿರುತ್ತವೆ. ನೃತ್ಯದಲ್ಲಿ ತಾಳಬದ್ಧವಾದ ಪದಗತಿ ಮತ್ತು ಕುಣಿತ ಮಣಿತಗಳು ಅಡಕವಾಗುವುವು.

ನಾಟ್ಯದಲ್ಲಿ ಇವುಗಳಲ್ಲದೆ ವಿವಿಧ ಮುದ್ರೆಗಳನ್ನೊಳಗೊಂಡ ಅಭಿನಯಗಳೂ ಸೇರಿಕೊಂಡಿರುತ್ತವೆ. ಮೌನವಾಗಿಯೇ ಸರ್ವ ಭಾವಾನುಭಾವಗಳನ್ನೂ ತೋರ್ಪಡಿಸುವಾಗ, ಮುದ್ರೆಯೇ ಮುಖ್ಯ ಸಲಕರಣೆಯಾಗುವುದು.

ದಕ್ಷಿಣ ಕನ್ನಡ ಮತ್ತು ಮಲಬಾರು (ಕೇರಳ) ಜಿಲ್ಲೆಗಳಲ್ಲಿ ಇಂದಿಗೂ ಬಳಕೆಯಲ್ಲಿರುವ ಯಕ್ಷಗಾನ ಮತ್ತು ಕಥಕ್ಕಳಿ ನಾಟ್ಯಗಳಲ್ಲಿ ಮುದ್ರೆಗಳಿಗೆ ಮಹತ್ವದ ಸ್ಥಾನವಿದೆ. ನಾಟ್ಯ ಲಕ್ಷಣವನ್ನು ವಿವರಿಸುತ್ತ ನಾಟ್ಯಶಾಸ್ತ್ರದಲ್ಲಿ—

" ಯಥಾ ಹಸ್ತಃ ತಥಾ ದೃಷ್ಟಿಃ । ಯಥಾ ದೃಷ್ಟಿ ಸ್ತಥಾ ಮನಃ॥
ಯಥಾ ಮನಸ್ಥಥಾ ಭಾವ । ಇತ್ಯೇತನ್ನಾಟ್ಯ ಲಕ್ಷಣಂ॥

(ಎಲ್ಲಿ ಕೈಯೋ ಅಲ್ಲಿ ದೃಷ್ಟಿ; ಎಲ್ಲಿ ದೃಷ್ಟಿಯೋ ಅಲ್ಲಿ ಮನಸ್ಸು; ಎಲ್ಲಿ ಮನಸ್ಸೋ ಅಲ್ಲಿ ಭಾವ) ಎಂದಿರುವನು.

ಇದೇ ಮಾತನ್ನೇ ನಮ್ಮ ಭರತೇಶ ವೈಭವಕರನಾದ ಕವಿ ರತ್ನಾಕರ ಸಿದ್ಧನು—

" ಎತ್ತನೀಡಿತು ಹಸ್ತವತ್ತ ದೃಷ್ಟಿಗಳಲ್ಲಿ। ಚಿತ್ತವೆಲ್ಲವು ಭಾವರಸವು।
ತತ್ತತ ತಿತ್ತಿತಿ ಯಾರೆಯಾರೆ ಯೆನ। ಲತ್ತಿತ್ತಲೊಲೆದು ಹರಿದಳು॥

ಎಂಬಲ್ಲಿ ಸೂಚಿಸಿದ್ದಾನೆ.

ನೃತ್ಯಕ್ಕೆ ಭಾವವೇ ಮೂಲ ವಸ್ತು. ಭಾವಗಳಿಗೆ ಲಾಕ್ಷಣಿಕರು ರಸವೆಂದೂ ಹೇಳುತ್ತಾರೆ. ನವರಸಕ್ಕನುಗುಣವಾಗಿ ನವ ಭಾವಗಳಿರುವುವು. ಇವೇ ಸ್ಥಾಯೀ ಭಾವಗಳು. ಈ ಸ್ಥಾಯೀ ಭಾವಗಳಿಂದ ಒಟ್ಟು ೩೩ ತರದ ವಿಭಾವಾನುಭಾವಗಳು ಹುಟ್ಟುತ್ತವೆಂದು ಅಲಂಕಾರ ಶಾಸ್ತ್ರಕಾರರು ಸಾರುತ್ತಾರೆ.

"ಭಾವ ವಿಭಾವಾನುಭಾವ ಮುಂತಾದ ಕ-।
ಲಾವಿರಚನೆ ರೇಖೆ ದೋರೆ॥
ಭಾವಕರೆಲ್ಲರ ಚಿತ್ತರಂಜಿಸಲಾಡಿ। ಭಾವೆ ಹಿಂಗಡೆಗೆ ಸಾರಿದಳು ॥

ಎಂದು ರತ್ನಾಕರ ಸಿದ್ಧನು ಈ ಎಲ್ಲ ಭಾವಾನುಭಾವಗಳನ್ನೂ ಆಂಗಿಕಾದಿ ಅಭಿನಯಗಳಿಂದ ಚಿತ್ರಿಸಿ ತೋರಿಸುವುದೇ ನೃತ್ಯಕಲೆ ಎಂಬುದಾಗಿ ವಿವೇಚಿಸಿರುವನು. ಆತನು ಒಟ್ಟು ನೂರೆಂಟು ಕರಣ, ನೂರೆಂಟು ನಿಲುವು, ಅರವತ್ತುನಾಲ್ಕು ಹಸ್ತಭೇದ ಮತ್ತು ಹದಿಮೂರು ಶಿರೋಭೇದಗಳನ್ನು ಲೆಕ್ಕಿಸಿದ್ದಾನೆ.

ನೃತ್ಯ ಕಲಾಭ್ಯಾಸಿಗಳಿಗೆ ಭರತೇಶ ವೈಭವದ ನಾಟಕ ಸಂಧಿಗಳು ಅಮೂಲ್ಯವಾದ ಟಿಪ್ಪಣಿಯಂತಿವೆ ಎನ್ನಬಹುದು. ಆತನು ಹಲವು ನೃತ್ಯಗಳನ್ನು ಹೆಸರಿಸಿದ್ದಾನೆ—
ಅವುಗಳಲ್ಲಿ—

೧ ದಿಕ್ಕನ್ನಿಕಾ ನಾಟ್ಯ
೨ ಜಲ ಕನ್ನಿಕಾ ನಾಟ್ಯ
೩ ಅಮರಕಾಂತಾ ನೃತ್ಯ
೪ ನಾಗ ಕನ್ಯಾ ನೃತ್ಯ
೫ ತಾರಾಂಗನಾ ನೃತ್ಯ
೬ ದ್ಯುಮಣಿ ತಾಂಡವ ನೃತ್ಯ

೭ ಚಂದ್ರ ತಾಂಡವ ನೃತ್ಯ ೮ ಪುಷ್ಪಲತಾ ನೃತ್ಯ
೯ ಕಲ್ಪಲತಾ ನೃತ್ಯ ೧೦ ಬಾಷ್ಪ ವಿದ್ಯುಲ್ಲತಾ ನೃತ್ಯ
೧೧ ಪುಷ್ಪಕ ನೃತ್ಯ
ಎಂಬ ನೃತ್ಯಗಳು ಪ್ರಮುಖವಾಗಿವೆ.

ಅದೇ ರೀತಿ ಆತನು ಹಂಸ, ಗಿಳಿ, ಮಯೂರ ಮೊದಲಾದ ನೃತ್ಯ ಭೇದಗಳನ್ನೂ ದಶಪದ್ಮ, ಷೋಡಶ ಪದ್ಮ ಮೊದಲಾದ ಲಾಸ್ಯ ಭೇದ ಗಳನ್ನೂ ಸೂಚಿಸಿದ್ದಾನೆ.

ನೃತ್ಯದಲ್ಲಿ ಹಾವವೆಂಬ ವಿಶಿಷ್ಟ ವಿಭಾವಗಳು ಹೂವಿನಲ್ಲಿ ಪರಿಮಳ ವಿರುವಂತೆ ಅಡಕಗೊಂಡಿರುವುದನ್ನು ಲಕ್ಷಿಸಬೇಕು. ಹಾವ ಎಂದರೆ ಪ್ರೇಮ ಚೇಷ್ಟೆ ಎಂದಷ್ಟೇ ಕೆಲವರು ತಿಳಿಯುತ್ತಾರೆ.
ಭರತ ಮುನಿಯು ಹಾವವನ್ನು ವಿವರಿಸುತ್ತ—

"ಗ್ರೀವಾರೇಚಕ ಸಂಯುಕ್ತೋ ಭ್ರೂ ನೇತ್ರಾದಿ ವಿಕಾಸಕೃತ್ ।
ಭಾವಾದೇಷತ್ ಪ್ರಕಾಶೋಯಃ ಸಹಾವ ಇತಿ ಕಥ್ಯತೆ ॥

ಎಂದು ಸಾರಿದ್ದಾನೆ.

ಭರತೇಶ ವೈಭವಕಾರನು ಹಾವ ಮತ್ತು ಭಾವಗಳನ್ನು ಪ್ರಕಟಿಸುವ ವಿಧಾನವನ್ನು ಹೀಗೆ ಸೂಚಿಸಿದ್ದಾನೆ—

ಮೊಗದಲ್ಲಿ ಹಾವ, ಮನಸಿನಲ್ಲಿ ಭಾವ ಪು ।
ರ್ಬುಗಳಲ್ಲಿ ವಿಭ್ರಮ ಮತ್ತೆ ॥
ಬಗಸೆಗಣ್ಣೊಳು ವಿಲಾಸವೆಸೆಯೆ ರಸ ।
ಪೊಗುವಂತೆ ಪಾತ್ರವಾಡಿದಳು ॥

ಮುಖದ ಕಣ್ಣು, ಹುಬ್ಬುಗಳು ಹಾವವನ್ನು ಹೊರಪಡಿಸುವ ಮುಖ್ಯಾಂಗಗಳೆಂಬುದೇ ಅವನ ಅಭಿಪ್ರಾಯವಾಗಿದೆ. ಹಾವಕ್ಕೆ ಲಾಸ್ಯ ವೆಂದೂ ಕರೆಯಲಾಗುತ್ತಿದೆ.

ಭರತನಾಟ್ಯ ಶಾಸ್ತ್ರವು ನೃತ್ಯ ಭೇದಗಳನ್ನು ಸೂಚಿಸುವಲ್ಲಿ, ಮುದ್ರೆ ಗಳಿಗೆ ಬಹಳ ಮಹತ್ವವನ್ನಿತ್ತಿದೆಂಬುದನ್ನು ಮರೆಯಲಾಗದು. ಸಾತ್ವಿಕಾ ಭಿನಯವು ಭಾವಾನುಭಾವಗಳ ಪ್ರತಿಬಿಂಬವೇ ಇರುವುದರಿಂದ, ಕೈ ಮತ್ತು

ಕೈಬೆರಳುಗಳ ಚಲನವಲನ— ಕೂಟಾಕೂಟಗಳಿಂದಲೇ ಅವುಗಳನ್ನು ಹೆಚ್ಚು ವಿಶದವಾಗಿ ಸೂಚಿಸ ಬರುವುದು.

ಹಳೆಬೀಡು ಮತ್ತು ಬೇಲೂರು ದೇವಾಲಯಗಳಲ್ಲಿ ವಿವಿಧ ಮುದ್ರಿಕೆ ಮತ್ತು ನೃತ್ಯ ಭಂಗಿಗಳನ್ನು ತೋರಿಸುವ ಶಿಲ್ಪಚಾತುರ್ಯವನ್ನು ನೃತ್ಯ ಕೋವಿದರು ಅವಶ್ಯವಾಗಿ ಅಭ್ಯಾಸ ಮಾಡಬೇಕು.

ಕಟಕ ಹಸ್ತ, ಲಂಬ ಹಸ್ತ, ಲೋಲಕ ಹಸ್ತ, ಗಜ ಹಸ್ತ, ಪತಾಕ ಹಸ್ತ, ವರದ ಹಸ್ತ, ಸೂಚೀ ಹಸ್ತ, ಸಿಂಹಕರಣ, ಅರ್ಧಚಂದ್ರ ಇವೇ ಮೊದಲಾದ ವಿವಿಧ ಹಸ್ತ ಮುದ್ರಿಕೆಗಳು ಇಂದಿಗೂ ಕೇರಳ ಮತ್ತು ದಕ್ಷಿಣ ಕನ್ನಡದ ವೇಷಧಾರಿಗಳಿಂದ ಶಾಸ್ತ್ರೀಯವಾಗಿ ಅಭ್ಯಸಿಸಲ್ಪಡುತ್ತಿರುವುದು ಈ ಕಲೆಯನ್ನುಳಿಸಿಕೊಂಡು ಬಂದಿರುವುದರ ಹೆಗ್ಗುರುತಾಗಿದೆ.

ನೃತ್ಯಕಲೆಯೊಟ್ಟಿಗೆ ಸಂಗೀತವನ್ನು ಸಮ್ಮಿಳಿತಗೊಳಿಸಿರುವುದರಲ್ಲಿ ಜಾಣ್ಮೆ ಇಲ್ಲದೇ ಇಲ್ಲ. ಸಂಗೀತವು ಭಾವ ಸ್ಫುರಣಕ್ಕೆ ಅವಶ್ಯವಾದ ಹಿನ್ನೆಲೆಯೊದಗಿಸಿಕೊಡುವುದು. ಸಂಗೀತಕ್ಕೆ ತಕ್ಕ ವಾದ್ಯಗಳೂ ತಾಳಗಳೂ ಜೋಡಿಯಾಗಿರಬೇಕೆಂಬುದನ್ನು ಮರೆಯಕೂಡದು. ಭರತನಾಟ್ಯ ಶಾಸ್ತ್ರದಲ್ಲಿ ಇವುಗಳನ್ನೆಲ್ಲ ಅನುಕ್ರಮವಾಗಿ ನಿರೂಪಿಸಲು ಅವುಗಳ ಪರಸ್ಪರ ನಿಕಟವಾದ ಸಂಬಂಧವೇ ಕಾರಣವಾಗಿದೆ.

ನೃತ್ಯಕ್ಕೆ ಹಿನ್ನೆಲೆಯಾಗಿರಬೇಕಾದ ವಾದ್ಯಗಳನ್ನು ನಮ್ಮ ಭರತೇಶ ವೈಭವಕಾರನು ಕೆಳಗಿನಂತೆ ಹೆಸರಿಸಿರುವುದು ಗಣನೀಯವಾಗಿದೆ—

ಘುಳುಘುಳಿಸುವ ತಾಳ ಡೌಡೆಯಾವುಜಕೆ
　　ಮದ್ದಳೆ, ಚಿನು ಚಂಪೆಯ ಧ್ವನಿಗೆ ||
ಮೊಳಗಿನ ಧ್ವನಿಗೆ ಕುಣಿದ ಸೋಗೆ ನವಿಲಂತೆ
　　ನಲಿದು ನರ್ತಿಸಿದಳು ನೀರೆ ||
ಕಿನ್ನರಿ, ದಂಡಿಗೆ, ತಿತ್ತಿ, ಕೊಳಲು,
　　ಭಿನ್ನ ಭಿನ್ನರುಚಿಯ ಗಾನರಸಕೆ ||
ಚೆನ್ನ ಚೆನ್ನನೆ ನಾಗಸರಕೆ ನರ್ತಿಪ ನಾಗ।
　　ಕನ್ನೆಯಂತಾಡಿದಳವಳು ||

ರಿಂಚೆಯು, ಚಿನುಚಂಪೆ, ಕುಕ್ಕುರು, ತುಡುಮು, ಪಾ।
ವುಂಚೆ, ಕಿಂಕಿಣಿಗಳನೆತ್ತಿ॥
ಜೆಂಜೆಕು ತಕದಿಕ ತೋತಾಗಿ ದಿಮಿಕೆಂದು
ರಂಜನೆ ಮಿಗೆ ಕೇಳಿಸಿದರು॥
ಢಕ್ಕೆ, ನಾಟ್ಯಾನಕ, ಚಂಪೆ, ಕಿಂಕಿಣಿ, ಡಾಡೆ।
ಕುಕ್ಕುರು, ತುಡುಮು, ರಿಂಚೆಯುವಾ॥
ತಕ್ಕಿಟ ತೋಕಿಟ ತೋಂಗಿ ತೋಹಂಗಿ ತೋ।
ಧಿಕ್ಕಿಟಯೆನೆ ಕೇಳಿಸಿದರು॥

ಈ ಎಲ್ಲ ವಾದ್ಯ ಸಹಿತವಾದ ನೃತ್ಯ ಕೇಳಿಯು ನೋಟಕರ ಮುಂದೆ ವಿವಿಧ ಭಾವತರಂಗಗಳ ಮಹಾ ಸಮುದ್ರವನ್ನೇ ತಂದು ತೋರಿಸುವುದು.

ಭಾವವನ್ನು ಪ್ರತಿಬಿಂಬಿಸುವಲ್ಲಿ ಆಹಾರ್ಯ (ವಸ್ತ್ರಾಲಂಕಾರ)ವು ಕೂಡಾ ಸಲ್ಲಿಸುವ ಸಹಾಯವು ಅಪರಿಮಿತವಾಗಿದೆ. ಪಾತ್ರಕ್ಕನುಗುಣವಾದ ಉಡುಗೆ ತೊಡುಗೆ ಅನಿವಾರ್ಯವಷ್ಟೆ. ಯೋಧನ ವಸ್ತ್ರಾಲಂಕಾರ ಒಂದು ವಿಧವಾಗಿದ್ದರೆ, ಕಿರಾತ (ಬೇಟೆಗಾರ)ನದು ಮತ್ತೊಂದು ವಿಧವಾಗಿರುವುದು. ಆ ವಸ್ತ್ರಾಲಂಕಾರಗಳಿಗೂ ವಿವಿಧವೂ, ಯಥೋಚಿತವೂ ಆದ ಬಣ್ಣಗಳನ್ನು ವಿಧಿಸುವುದು ಅತ್ಯಗತ್ಯ

ಈಗಲೀಗ ವಸ್ತ್ರಾಲಂಕಾರಗಳ ಬಣ್ಣದೊಟ್ಟಿಗೆ ದೀವಿಗೆಯ ವಿವಿಧ ವರ್ಣಗಳನ್ನೂ ಹಿನ್ನೆಲೆಯಾಗಿ ಜೋಡಿಸುವ ಪರಿಪಾಠ ಉಂಟಾಗಿದೆ ರೌದ್ರದೃಶ್ಯಕ್ಕೆ ಕೆಂಬಣ್ಣದ ದೀಪ ಪ್ರಕಾಶವನ್ನು ತೋರಿದರೆ, ಶಾಂತ ಮತ್ತು ಕರುಣ ಭಾವಗಳ ದೃಶ್ಯಗಳಿಗೆ ಹಳದಿ, ನೀಲ, ಹಸುರು ಪ್ರಕಾಶವನ್ನು ಹಿನ್ನೆಲೆಯಾಗಿ ಹಬ್ಬಿಸಿ ಬಿಡುವರು.

ಹಿಂದಿನ ಕಾಲದಲ್ಲಿ ಪ್ರತಿಯೊಂದು ಭಾವಕ್ಕೂ ಒಂದೊಂದು ಅಧಿದೈವತವನ್ನು ಹೇಳಲಾಗುತ್ತಿದ್ದು, ಅವುಗಳಿಗೆ ಒಂದೊಂದು ತಾಳ ಮತ್ತು ಒಂದೊಂದು ಬಣ್ಣವನ್ನು ಸೂಚಿಸುತ್ತಿದ್ದರು.

ವಾಯುವಿಗೆ ಹಸುರು, ಚಂದ್ರನಿಗೆ ಬಿಳಿ ಹೊಳಪು, ಸೂರ್ಯನಿಗೆ ಕೆಂಪು. ರುದ್ರನಿಗೆ ಕೋಪ ಸೂಚಕವಾದ ರಕ್ತವರ್ಣ, ವರುಣನಿಗೆ ಮೂರು ನಾಲಿಗೆಯನ್ನು ಹೇಳಿದ್ದು. ಸೂರ್ಯ, ಚಂದ್ರ ಮತ್ತು ವಿದ್ಯುತ್ತಿನ ವರ್ಣ

ಗಳನ್ನು ಸೂಚಿಸಲಾಗಿದೆ. ಯಮುನಿಗೆ ಭೀಕರ ಮೌನ ಸೂಚಕವಾದ ಅಚ್ಚ ನೀಲಿಯನ್ನು ಅನ್ವಯಿಸಲಾಗಿದೆ.

ನಮ್ಮ ರಸರತ್ನಾಕರ ಕರ್ತನಾದ ಸಾಳ್ವಕವಿಯು—

ಹರಿತಂ ಶೃಂಗಾರ ವರ್ಣಂ, ಸಿತರುಚಿ
ಹಸಿತಂ, ರೌದ್ರಮಾರಕ್ತಯುಕ್ತಂ ।
ಕರುಣಂ ಶ್ಯಾಮಪ್ರಭಾಂಗಂ ಪ್ರಚುರ
ರುಚಿರ ಗೌರಂ ಸವೀರಂ ಭಯಂ ಭಾ ॥
ಸುರ ಧೂಮಾಕಾರ ಮತ್ಯದ್ಭುತಮುದು
ಕನಕಂ ಕೃಷ್ಣ ಶುಭ್ರಾನ್ವಿತಂವಿ ।
ಸ್ತರದಿಂ ಭೀಭತ್ಸವೆಂಬೀ ಪರಿಯ
ನರಿಗೆ ತನ್ಮಾರ್ಗದೊಳ್ ಸತ್ಕವೀಂದ್ರರ್ ॥

ಎಂಬುದಾಗಿ ವಿವಿಧ ಭಾವಗಳಿಗೆ ವಿವಿಧ ವರ್ಣಗಳನ್ನು ತನ್ನ ೧೭ ನೆಯ ಸೂತ್ರದಲ್ಲಿ ಸೂಚಿಸಿರುವನು.

ಭರತೇಶನ ಆಸ್ಥಾನದಲ್ಲಿ ಶುಚಿಯಾದ ಶೃಂಗಾರ ಭಾವದ ನೃತ್ಯವನ್ನ ಭಿನಯಿಸಿ ತೋರುವ ನೇತ್ರಮೋಹಿನಿ ಮತ್ತು ಚಿತ್ತಮೋಹಿನಿಯರ ವಸ್ತ್ರಾಲಂಕಾರದ ಬಣ್ಣನೆಯನ್ನಿಲ್ಲಿ ಉದಾಹರಿಸಬಹುದಾಗಿದೆ—

ಸಾಂಗತ್ಯ ॥

ಸಾಳಂಗ ರಾಗವನೆತ್ತಿ ಮದ್ದಳೆ ತಾಳ
ಮೇಳ ಶ್ರುತಿಗಳೊಂದುಗೂಡಿ॥
ಲೋಲ ನಿರಂಜನ ಸಿದ್ಧನ ಹಾಡಿದ ।
ರೋಲಾಡೆ ಸುಖದೊಳಾಸ್ಥಾನ ॥
ಸಂಜೆಗೆಂಪೊಲೆವಂತೆ ತೆ ತೊಲಗಿತು ಕಣ್ಗೆ
ಕಂಜಾಕ್ಷಿಯರು ಕಾಣಿಸಿದರು ॥
ರಂಜಿಪ ನಳಿತೋಳ್ಗಳೆತ್ತಿ ಸುವರ್ಣ ಪು- ।
ಷ್ಪಾಂಜಲಿ ಮಾಡಿದರೊಡನೆ ॥
ನಡುವಿನೊಳಿಟ್ಟ ಹಸ್ತಗಳು ಪಸರಿಸಿದ
ತೊಡೆ, ಸಾರ್ದ ಮಡಗಳಿಂದಾಗ ॥

ಮಿಡುಕದೆ ನಿಲುವಿನ ರೇಖೆ
ದೋರಿದರು ಮುಪ್ಪೊಡವಿಯಂದವ ತೋರುವಂತೆ ॥
ಪಚ್ಚೆಯ ಚಲ್ಲಣ, ಪಂಚವರ್ಣದ ಕಾಸೆ,
ಬೆಚ್ಚ ಮುತ್ತಿನ ಮೊಲೆಗಟ್ಟು ॥
ಅಚ್ಚ ಜವ್ವನೆಯರಿದ್ದರು ನೋಡುವರ ಮನ
ಹುಚ್ಚೆದ್ದು ಧರೆಗೆ ಬೀಳ್ವಂತೆ ॥
ಹೆಜ್ಜೆ ಸರಿದು ಮೆಲ್ಲನೊಲೆದರು ಕಾಲ ಹೊಂ ।
ಗೆಜ್ಜೆ ಝುಲಿರು ಝುಲಿರೆನಲು ॥
ನೋಟದೊಳಗೆ ಕೊಂದರೊಮ್ಮೆ ನೋಟಕರನು,
ನಾಟಿಸಿ ನಸು ನಗೆಯಿಂದ ॥
ಲೂಟಿ ಮಾಡಿದರು ಮೈಯೊಲೆ ದಾಟದಿಂದೆದೆ ।
ಕೋಟಿಯ ಕೊಂಡರೇನೆಂಬೆ ॥
ಒಬ್ಬರೊಬ್ಬರು ಬಲಮುರಿ ಯೆಡಮುರಿಯಾಗಿ ।
ಸಬ್ಬವದೊಳು ಚಾರಿವರಿದು ॥
ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆ ।
ಮೊಬ್ಬಳಾಡಿದಳು ರಂಗದೊಳು ॥
ತಳರ್ವಜ್ಜೆ ತಟಪುಟನಿಡುವಾಗ ವಿಟರೆದೆ ।
ತಳಹೊಳಗೊಳುತಿಹುದೊಡನೆ ॥"

ನೃತ್ಯಕಲೆಯನ್ನು ಅಭ್ಯಾಸ ಮಾಡುವವರು ವರ್ಣಸಂವರಣೆ ಕ್ರಮವನ್ನುಬಹು ಸೂಕ್ಷ್ಮವಾಗಿ ಅರಿತುಕೊಳ್ಳಬೇಕು. ಅದರಿಂದ ಅವರ ಕಲಾರಾಧನೆಯು ಮತ್ತಷ್ಟು ಪರಿಣಾಮಕಾರಿಯಾಗಿ ಸಮಗ್ರವಾದ ಸೌಂದರ್ಯವನ್ನು ಸಾಧಿಸಿದಂತಾಗುವುದು.

ನಾದಲೀಲೆ

ನಾದದಿಂದಲೇ ಭಾವಾನುಭಾವಗಳನ್ನು ಚಿತ್ರಿಸುವ ಕಲೆಯೇ ಸಂಗೀತ. ಇದರ ಕಲಾ ಕರ್ಮವು ಹೂವಿನಿಂದ ಹೊರಸೂಸುವ ಪರಿಮಳದಂತೆ ಅದೃಶ್ಯವಾಗಿರುವುದು. ನಾದವೇ ವಿಶ್ವದ ಮೂಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳಿಂದ ಹುಟ್ಟಿಸಲು ಬರದಂತಹ ಆನಂದ ವನ್ನು ನಾದವು ಹುಟ್ಟಿಸಬಲ್ಲದು.

ಶಬ್ದಾನುವಿದ್ಧ ಮೇವೇದಂ ಜಗತ್ಸರ್ವಂ ಚರಾಚರಂ॥

ಚರಾಚರವಾದ ಸೃಷ್ಟಿಯ ಜ್ಞಾನವೆಲ್ಲ ಶಬ್ದದಿಂದಲೇ ತಿಳಿಯತಕ್ಕ ದ್ದೆಂದು ಆಗಮೋಕ್ತಿ ಇದೆ. ಅದನ್ನೇ ಹಳೆಗನ್ನಡ ವ್ಯಾಕರಣ ಪಂಡಿತ ಕೇಶಿರಾಜನು–

ಶಬ್ದದಿನಾವಾವಿಂದ್ರಿಯರಸಮಂ ಶ್ರೋತ್ರದೊಳುದ್ಭಾವಿಪುದು॥

ಎಂದು ಸೂಚಿಸಿದ್ದಾನೆ. ನಾದವನ್ನು ಬ್ರಹ್ಮವೆಂದೂ, ಅದರ ರತಿಗೆ ವಾಣಿ, ವಾಗ್ದೇವಿ, ವಾಗೀಶ್ವರೀ ಎಂದೂ ಪುರಾತನ ಕಾಲದ ದೃಷ್ಟಾರರು ಹೆಸರಿಸಿದ್ದರು. ಗ್ರೀಕ್ ತತ್ವವಿದರು ಕೂಡಾ "ವಾಣಿ" ಯೇ ಸೃಷ್ಟಿಯ ಮೂಲ ವೆಂದು ಸಾರಿದ್ದಾರೆ. ಕ್ರೈಸ್ತ ವೇದವಾದ ಬೈಬಲ್ಲಿನಲ್ಲಿ,

"In the beginning was the word, and the word was with God, and the word was God

(ಸಂತ ಜಾನ್)

(ಅರ್ಥಃ—ಪ್ರಥಮದಲ್ಲಿ ವಾಣಿ (ಶಬ್ದ), ಇತ್ತು; ಶಬ್ದವು ದೇವರೊಡನಿತ್ತು; ಮತ್ತು ಶಬ್ದವೇ ದೇವರಾಗಿತ್ತು.)

ಎಂದು ಹೇಳಲ್ಪಟ್ಟಿದೆ. ಮೂಲನಾದ ಅಥವಾ ನಾದಮೂಲವೇ ಬ್ರಹ್ಮಾನಂದ. ಒಳಗೆ ತುಂಬಿದ ಆನಂದರಸವೇ ಅದೃಶ್ಯವಾದ ನಾದವಾಗಿ ಹೊರಹೊಮ್ಮುವುದು. ಅದೇ ಸಂಗೀತ.

ಬ್ರಹ್ಮಾನಂದ ರಸವ ಕರೆದರು ನಾದ! ಬ್ರಹ್ಮವೆಂಬುದು ಬಡಕಲೆಯೇ ||

ಎಂದು ಭರತೇಶ ವೈಭವಕಾರನಾದ ಕವಿ ರತ್ನಾಕರ ಸಿದ್ಧನು ಸಂಗೀತ ಕಲೆಯನ್ನು ಮನೋಹರವಾಗಿ ಬಣ್ಣಿಸಿದ್ದಾನೆ. ಆತನು ಸಂಗೀತವನ್ನು "ಮೋಹನ ಜಲಧಿ'' ಯೆಂದೂ ಪರಿಮಳ ಪರ್ವತದ (ಗಂಧಗಿರಿಯ-ಪವಮಾನ) ತಂಗಾಳಿಯೆಂದೂ ಹಿಗ್ಗಿನಿಂದ ಕರೆದಿದ್ದಾನೆ.

ಸುಪ್ರಸಿದ್ಧ ಜರ್ಮನ್ ಸಂಗೀತ ಶಾಸ್ತ್ರ ವಿಶಾರದನಾದ ಬಿತೊವೆನ್ನನು ನಾದಕಲೆಯ ಕುರಿತು ಹೇಳಿರುವ ಮಾತು ಚಿರಂತನ ಸತ್ಯವಾಗಿದೆ :

> ''Music is the mediator between the spiritual and the sensual life; it is mightier than its creator the artist."
>
> (ಸಂಗೀತವು ಆಧ್ಯಾತ್ಮಿಕ ಮತ್ತು ವೈಷಯಿಕ ಜೀವನಗಳ ನಡುವಣ ರಾಯಭಾರಿಯಾಗಿದೆ. ಸಂಗೀತವು ತನ್ನನ್ನು ಹುಟ್ಟಿಸಿದ ಕಲಾವಿದನಿಗಿಂತಲೂ ಹೆಚ್ಚು ಪ್ರಭುತ್ವವುಳ್ಳದ್ದಾಗಿದೆ.)

ಪ್ರಾಟೆಸ್ಟೆಂಟ ಮತಪ್ರವರ್ತಕನಾದ ಮಾರ್ಟಿನ್ ಲೂಥರನು :—

> ''Music is the most magnificent and delightful gift of god".
>
> (ದೇವರು ಕೊಟ್ಟ ವರಗಳಲ್ಲಿ ಸಂಗೀತವೇ ಅತ್ಯಂತ ವೈಭವ ಮತ್ತು ಆನಂದದಾಯಕವಾದ ವಸ್ತುವಾಗಿದೆ) ಎಂದಿರುವನು.

ಸಂಗೀತವು ದುಃಖವೆಂಬ ಕೊಳೆಯನ್ನು ತೊಳೆದು ತೆಗೆಯುವ ಅಮೃತದ ಧಾರೆಯುಂತಿದೆ, ಅದೊಂದು ಪುಣ್ಯದ ಪ್ರವಾಹವೆನ್ನಬಹುದು. ಸಂಗೀತಗಾರನು ಹಾಡು ನಿಲ್ಲಿಸಿದ ಮೇಲೂ ಅದರ ಮಧುರವಾದ ಅಶ್ರುತನಾದವು ಮನಸ್ಸಿನಲ್ಲಿ ಅಲೆದಾಡುತ್ತಿರುವದು.

"Music, when soft voices die, vibrates in the memory.''

ಎಂಬುದಾಗಿ ಆಂಗ್ಲ ಕವಿಪುಂಗವ ಶೆಲ್ಲಿಯು ಮನಮೋಹಕವಾದ ಮಾತನ್ನಾಡಿರುವನು.

ಒಂದೊಂದು ರಾಗ ಒಂದೊಂದು ಭಾವವನ್ನು ಪ್ರಚೋದಿಸುತ್ತದೆ. ಆ ಭಾವಗಳಿಂದ ಅರ್ಥಗಳು ಹುಟ್ಟುತ್ತವೆ. ಹಿಂದಿನ ಕಾಲದ ಸಂಗೀತ ನಿಪುಣರು ಕಾಲೋಚಿತವಾದ ರಾಗಗಳನ್ನು ಕಂಡುಹಿಡಿದಿದ್ದರು. ಉದಯ ಕಾಲದ ರಾಗವು "ಭೂಪಾಳಿ, ಧನ್ಯಾಸಿ" ಗಳೆಂದು ಗುರುತಿಸಲ್ಪಟ್ಟದ್ದರೆ, "ನೀಲಾಂಬರಿ, ದೀಪಕ" ಮೊದಲಾದ ರಾಗಗಳು ಅಸ್ತಮಯ ರಾಗಗಳೆಂದು ಸಂಕೇತಿಸಲ್ಪಟ್ಟದ್ದವು. ರಾಗದಿಂದ ಉತ್ಸಾಹ, ವೀರ, ಕರುಣ, ಶೋಕ, ರೌದ್ರ, ಶೃಂಗಾರವೇ ಮೊದಲಾದ ನವರಸಗಳನ್ನೂ ಹುಟ್ಟಿಸಿ, ಉದ್ರೇಕಿಸುವುದು ಎಲ್ಲರೂ ಅರಿತ ಮಾತೇ ಆಗಿದೆ.

ಹೀಗೆ ಬಹುಭಾವರೂಪವಾಗಿ ಹರಿಯುವ ರಸಾನಂದಕ್ಕೆಲ್ಲ ಮೂಲವಾಗಿರುವ ಸಂಗೀತ ಕಲೆಯು ಅನನ್ಯವಾದ ಉಪಾಸನೆಯಿಂದಲೇ ಕರತಲಾಮಲಕವಾಗಬೇಕು. ಪರಿಶುದ್ಧವಾದ ಆಚರಣೆಯೂ, ಸಾತ್ವಿಕವಾದ ಆಹಾರ ವಿಹಾರಗಳೂ ಈ ದಿವ್ಯ ಕಲೆಗೆ ಮೂಲ ಭೂಮಿಕೆಯಾಗಿವೆ. ಯೋಗ ಶಾಸ್ತ್ರಕಾರರು ಅಶ್ರುತ (ಕಿವಿಗೆ ಕೇಳಿಸದ) ವಾದ ನವನಾದವನ್ನು ಸೂಚಿಸಿದ್ದಾರೆ. ನಾಭಿಯೇ ನಾದೋದಯದ ಪುಣ್ಯ ಸ್ಥಳವೆಂದು ಅವರು ನಿರ್ದೇಶಿಸಿದ್ದಾರೆ. ನಮ್ಮ ಕೇಶಿರಾಜನು:—

ಅನುಕೂಲ ಪವನನಿಂ, ಜೀ। ವನಿಷ್ಟದಿಂ ನಾಭಿಮೂಲದೊಳ್
ಕಹಳೆಯ ಪಾಂ॥
ಗಿನಿವೋಲ್ ಶಬ್ದ ದ್ರವ್ಯಂ। ಜನಿಯಿಸುಗುಂ, ಶ್ವೇತಮುದರ ಕಾರ್ಯಂ॥
(ಶ. ಮ. ಪೀಠಿಕೆ)

ಎಂದಿರುವುದನ್ನು ಲಕ್ಷಿಸಬೇಕು. ಶಬ್ದವೆಂಬ ದ್ರವ್ಯ ನಾಭಿಮೂಲದಲ್ಲಿ ಹುಟ್ಟುವದೆಂದೂ, ಅದರ ಬಣ್ಣ ಅಚ್ಚ ಬಿಳಿಯೆಂದೂ ಆತನು ಸೂಚಿಸಿದ್ದಾನೆ. ಅದೇ ಪ್ರಕಾರ ರಸ ರತ್ನಾಕರ ಕರ್ತೃವಾದ ಕವಿಸಾಳ್ವನು ತನ್ನ ಗ್ರಂಥದ ೧೨ ನೆಯ ಸೂತ್ರದಲ್ಲಿ "ಸಿತರುಚಿ ಹಸಿತಂ" (ಆನಂದದ ಬಣ್ಣವು ಬಿಳಿದು) ಎಂದು ಹೇಳಿದ್ದಾನೆ. ಬಿಳಿಯ ವರ್ಣವು ಮೂಲ ವರ್ಣಗಳಲ್ಲಿ ಮೊದಲನೆಯದಾಗಿದೆ. ಅದು ಸ್ಫಟಿಕದಂತಿದೆ; ಅದರ ಹಿಂದೆ ಯಾವ ಬಣ್ಣದ ವಸ್ತುವನ್ನಿಟ್ಟರೂ, ಅದು ಆ ವಸ್ತುವಿನ ಬಣ್ಣವನ್ನು ಧರಿಸಿದಂತೆ

ತೋರುವುದು. ಆನಂದ ನಿಧಿಯಾದ ಪರಮಾತ್ಮನು ಶ್ವೇತ ವರ್ಣನೆಂದು ಹೇಳಲಾಗಿದೆ.

ಶಬ್ದ (ನಾದ) ದಿಂದ ತೋರುವ ವಸ್ತುವೇ ಅರ್ಥ. ಅರ್ಥವು ಬಹುಮುಖವಾಗಿದೆ. ಶಬ್ದವು ತಾನೇ ತಾನಾದ, ಏಕಮೇವಾದ್ವಿತೀಯವಾದ ಬ್ರಹ್ಮವಾಗಿದೆ. ಎಲ್ಲ ನೊರೆತೆರೆಗಳೂ ಮೂಲ ನೀರಿನಿಂದಲೇ ಬಹುರೂಪ ಧಾರಿಯಾಗಿ ಏಳುತ್ತಿರುವಂತೆ, ಶಬ್ದದಿಂದಲೇ ಬಹ್ವರ್ಥರೂಪಧಾರಿಗಳಾದ ವಸ್ತುಗಳಿದ್ದಂತೆ ತೋರುವುದು.

ಅರ್ಥವನ್ನು ಹುಟ್ಟಿಸದ " ತ. ನ. ನ. ನ ನ..ನ " ಎಂಬ ಬರಿಯ ನಾದದ 'ತಾನ' ವನ್ನೆ ವಿವಿಧ ದಾಟಿಯಿಂದ ಉಚ್ಚರಿಸಿ, ವಿವಿಧ ಭಾವಗಳ ತರಂಗಗಳನ್ನೇಳಿಸಬಹುದು. ಭಾವಗಳೇ ಸುಖದುಃಖಾದಿ ಸರ್ವದ್ವಂದ್ವಗಳಿಗೂ ಮೂಲಮಾತೃಕೆಯಾಗಿದೆ. ಅವೆಲ್ಲವೂ ನಾದದಿಂದಲೇ (ಸೂರ್ಯನ ರಶ್ಮಿಗಳೆಲ್ಲ ಪುನಃ ಆತನಲ್ಲಿಯೇ ಲೀನವಾಗುವಂತೆ) ಹುಟ್ಟಿ, ಆನಂತ ನಾದಗಳ ನಿಧಿ (ಸಮುದ್ರ) ಯಾದ ಆಕಾಶದಲ್ಲಿ ಲಯಗಳ್ಳೊವುವು. ಸೃಷ್ಟ್ಯಾದಿಯಿಂದಲೂ ಕೇಳಬಂದ ಅಸಂಖ್ಯಾತ ನಾದೋರ್ಮಿಗಳು ಆಕಾಶದಲ್ಲಿಯೇ ಅದೃಶ್ಯವಾಗಿ ದುಮುದುಮಿಸುತ್ತಿವೆ. ಹತ್ತು ಸಾವಿರ ಮೈಲುಗಳಾಚೆ ಆಡುತ್ತಿರುವ ಮಾತುಗಳನ್ನೀಗ ಹೇಗೆ ರೇಡಿಯೋ ಮೂಲಕ ಕೇಳಲು ಸಾಧ್ಯವಾಗಿದೆಯೋ ಹಾಗೆಯೇ ಹತ್ತು ಸಾವಿರ ವರ್ಷಗಳ ಹಿಂದೆ ಆಡಿದ್ದು, ಆಕಾಶದಲ್ಲಿ ಲೀನಗೊಂಡಿರುವ ಹಳೆಯ ಮಾತುಗಳನ್ನು ಈಗ ಕೇಳಲಿಕ್ಕೆ ಸಾಧ್ಯವಿದೆ; ಆದರೆ ಇನ್ನೂ ಅದನ್ನು ಸಾಧ್ಯಮಾಡಿ ತೋರಿಸತಕ್ಕ ಸಲಕರಣೆಯು ಸಿದ್ಧವಾಗಿಲ್ಲವಷ್ಟೆ.

ನಾದವು ಅನಾದ್ಯನಂತವಾದ ಪರವಸ್ತುವೆಂದೂ, ಆದರ ಉಪಾಸನೆಯಿಂದ ಹೊಂದುವ ವಿಜ್ಞಾನವೇ ಸಂಗೀತ ಕಲೆಯೆಂದೂ ಹೇಳಬಹುದು.

ಯಕ್ಷಗಾನ ಕಲೆ

(ಶಿರಸಿಯಲ್ಲಿ ತಾ ೧೦-೫-೪೯ನೇ ದಿನ ಕೂಡಿದ ಪ್ರಥಮ ಕರ್ನಾಟಕ ಯಕ್ಷ ಗಾನ ನಾಟಕ ಪರಿಷತ್ತಿನಲ್ಲಿ ಅಧ್ಯಕ್ಷರಾಗಿ ಮಾಡಿದ ಭಾಷಣ)

ಕನ್ನಡ ಕವಿಲೋಕಕ್ಕೆ ವಾಲ್ಮೀಕಿ ಎನಿಸಿದ ಆದಿಪಂಪನು ಬಗೆ ದುಂಬಿ ಬಣ್ಣಿಸಿದ ಬನವಾಸಿ ದೇಶಕ್ಕೆ ನಿಮ್ಮಾ ಶಿರಸಿಯು ಶಿರಸ್ಸಿನಂತಿದೆ. ಉದಾತ್ತ ವಿಚಾರಗಳಿಗೆಲ್ಲ ಮಾತೃಸ್ಥಾನವಾದ ಶಿರಸ್ಸಿನಲ್ಲಿ ಉದಾತ್ತ ಕಲೋದಯವಾಗುವಂತೆ, ಬನವಾಸಿ ಮಂಡಲದ ಈ ಶಿರಸಿಯಲ್ಲಿ ಕಲಾ ಸಿಂಧುವಾದ ಈ ಪರಿಷತ್ತು ಪ್ರಾರಂಭವಾದದ್ದು ಯಥೋಚಿತವಾಗಿದೆ. ಬನವಾಸಿ ದೇಶದ ಜಲ ಸಸ್ಯ ಸಮೃದ್ಧಿಯನ್ನೂ, ಜನತೆಯ ನಿಸ್ಪೃಹವಾದ ರಸಿಕತೆಯನ್ನೂ ಪಂಪಕವಿ ಮನವಾರೆ ಹೊಗಳಿರುವುದನ್ನಿಲ್ಲಿ ನಿಮ್ಮಲಕ್ಷ್ಯಕ್ಕೆ ತರಬಯಸುವೆನು.

ಚಂ॥—

ಸೊಗಯಿಸಿ ಬಂದ ಮಾಮರನೆ, ತಳ್ತೆಲೆವಳ್ಳಿಯೆ, ಪೂತಜಾತಿ ಸಂ।
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ॥
ನಗೆಮೊಗದೊಳ್ ಪಳಂಚಲೆಯ ಕೂಡುವ ನಲ್ಲರೆ ನೋಳ್ಪಡಾವ ಬೆ||
ಟ್ಟುಗಳೊಳಂ, ಆವ ನಂದನವನಂಗಳೊಳಂ ಬನವಾಸಿ ದೇಶದೊಳ್ ||
ಚಾಗದ, ಭೋಗದ, ಅಕ್ಕರದ, ಗೇಯದ, ಗೊಟ್ಟಿಯಲಂಪಿನಿಂಪುಗಳ್||
ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ-
ನಾಗಿಯುಮೇನೊ ತೀರ್ದಪುದೆ, ತೀರದೊಡಂ ಮರಿದುಂಬಿಯಾಗಿ, ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್||
ತೆಂಗಣಗಾಳಿ ಸೋಂಕಿದೊಡಂ, ಒಳ್ನುಡಿಗೇಳ್ದೊಡಂ, ಇಂಪನಾಳ್ದ ಗೇ-।
ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಂ, ಆದ ಕೆಂದಲಂ-।
ಪಂಗೆಡೆಗೊಂಡೊಡಂ, ಮಧುಮಹೋತ್ಸವಮಾದೊಡಂ, ಏನನೆಂಬೆನ್, ಆ।
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ||

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ, ತಗುಳ್ದೊಂದು ಗೇ|–
ಯಮುಮಾದಕ್ಕರಗೊಟ್ಟಿಯುಂ, ಚದುರರೊಳ್ಮಾತುಂ, ಕುಳಿರ್ಕೋಳ್ವ
ಜೊಂಪಮುಂ, ಏವೇಳ್ಪುದನುಳ್ಳ ಮೆಯ್ಸುಕಮುಂ ಇಂತೆನ್ನಂಕರಂ ನೋಡಿ, ನಾ
ಡೆ ಮನಂ ಗೊಂಡಿರೆ ತೆಂಕನಾಡ ಮರೆಯಲ್ಕೆ ಇನ್ನೇಂ ಮನಂ
ಬರ್ಕುಮೆ ? ||

ಸಾವಿರ ವರ್ಷಗಳ ಪೂರ್ವದಲ್ಲಿ ಪಂಪನು ಕಂಡು, ಉಂಡು, ಹಾಡಿ ಹೊಗಳಿದಾಗ ಈ ಬನವಾಸಿ ದೇಶ ಹೇಗಿದ್ದಿತೋ ಈಗಲೂ ಹಾಗೆಯೇ ಇದೆ. ನಂದನವನದಂತೆ ಗಿರಿತರುಗಳಿಂದ ಮನೋಹರವಾಗಿ ಒಪ್ಪುತ್ತಿರುವ ಈ ಸಹ್ಯಾದ್ರಿ ಸೀಮೆಯಲ್ಲಿ ಎಲ್ಲಿ ನೋಡಿದರೂ ಫಲಭರಿತವಾದ ಹಲಸು ಮಾವಿನ ಮರಗಳು, ಮಲ್ಲಿಗೆ ಸಂಪಿಗೆ ಲತಾವೃಕ್ಷಗಳು, ಪ್ರೇಮಧ್ವನಿ ಮಾಡಿ ಕರೆವ ಕೋಗಿಲೆಗಳು, ಓಂಕಾರ ನಾದದಿಂದ ಹಾಡುವ ತುಂಬಿಗಳು, ನಗೆಮೊಗದಿಂದ ಒಗೆತನಮಾಡುವ ಗಂಡಹೆಂಡಿರು, ತ್ಯಾಗ, ಭೋಗ, ಜ್ಞಾನ, ಗಾನ, ವಿನೋದಗಳಿಂದ ತುಂಬಿದ ಪ್ರೇಮಲ ಹೃದಯದ ಮನುಷ್ಯರು ! ಇಂತಹ ಚದುರರ ಈ ಸುಂದರ ಪ್ರದೇಶವು ಲಲಿತ ಕಲೆಗಳಿಗೆ ಬೀಡಾಗಿದೆಂಬುದಕ್ಕೆ ನಿಮ್ಮಿಂದಿನ ಈ ಸಮಾರಂಭವೇ ನಿದರ್ಶನವಾಗಿದೆ. ಕನ್ನಡ ನಾಡಿನಲ್ಲಿಂದಿಗೂ ಯಕ್ಷಗಾನ ನಾಟಕ ಕಲೆ ಊರ್ಜಿತ ಸ್ಥಿತಿಯಲ್ಲಿರುವುದೆಂದರೆ, ನಿಮ್ಮೀ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ಒಂದು ಕಾಲದಲ್ಲಿ ಇದರ ಅಭಿನ್ನ ಭಾಗವೇ ಆಗಿದ್ದ ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಒಂದು ಜನಾಂಗದ ಇಲ್ಲವೆ ಒಂದು ವಿಶಿಷ್ಟ ಪ್ರಾಂತ್ಯದ ಮೇಲ್ಮೆ ಕೀಳ್ಮೆಯನ್ನು ತೂಗಿ ನೋಡುವುದು ಅಲ್ಲಿ ಬಳಕೆಯಲ್ಲಿ ಇರುವ ಕಲೆಗಳ ಮೇಲ್ಮೆ ಕೀಳ್ಮೆಯಿಂದ. ಪ್ರಪಂಚದ ಎಲ್ಲ ಜನಾಂಗಗಳೂ ತಮ್ಮ ಪ್ರಾಚೀನ ಕಾಲದ ರೀತಿ ನೀತಿಗಳನ್ನು ತಮ್ಮಲ್ಲೀಗ ಅವಶೇಷವಾಗಿರುವ ಕಲಾ ಸಂಸ್ಕೃತಿಗಳ ಮೇಲಿಂದಲೇ ಗೊತ್ತು ಪಡಿಸುವವು.

ಯಕ್ಷರ ಗಾನ—ನಾಟಕ

ಸಮುದ್ರ ತೀರದ ಈ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಲಕ್ಷಾವಧಿ ಮಂದಿಗೆ ಅಲ್ಪ ವೆಚ್ಚದಿಂದಲೇ ಸಾದಾ ಸಲಕರಣೆಗಳಿಂದಲೇ ರಸಾನಂದವನ್ನೊದಗಿಸಿಕೊಡುತ್ತ ಬಂದಿರುವ ಈ ಯಕ್ಷಗಾನ ನಾಟಕ ಕಲೆಯು,

ಕನ್ನಡ ಜನಾಂಗದ ಉತ್ತಮ ವೈಶಿಷ್ಟ್ಯಗಳಲ್ಲೊಂದಾಗಿದೆ. ಇದಕ್ಕೆ ಯಕ್ಷಗಾನವೆಂಬ ಹೆಸರು ಹೇಗೆ ಬಂದಿತೆಂಬುದು ಒಂದು ದೊಡ್ಡ ಊಹಾಪೋಹದ ವಿಷಯವಾಗಿದೆ. ಇದಕ್ಕೆ ದಶಾವತಾರದ ಆಟವೆಂಬ ಹೆಸರು ಬಹಳ ಹಿಂದಿನಿಂದಲೂ ಬಂದಿರುತ್ತದೆಂಬುದನ್ನು ಮರೆಯ ಕೂಡದು. ಯಕ್ಷರು ಧನಾಧಿಪ ಕುಬೇರನ ಸೇವಕ ವರ್ಗದವರು; ಆತನ ಹೂದೋಟ, ಧನಕನಕ ವಸ್ತ್ರ ವಾಹನ ಭಂಡಾರಗಳನ್ನು ಕಾದುಕೊಂಡು ಬರುವ ಅರೆದೇವತೆಗಳೆಂದು ನಿಘಂಟುಗಳಲ್ಲಿ ಅರ್ಥವಿವರಣೆಗಳಿವೆ. ದುರ್ಗಾ ದೇವತೆಯು ಮಾನವ ಲೋಕದೊಡನೆ ಯಕ್ಷಪತ್ನಿಯರಾದ ಯಕ್ಷಿಣಿಯರ ಮೂಲಕವಾಗಿಯೇ ವ್ಯವಹರಿಸುತ್ತಿರುವಳೆಂಬ ಪುರಾಣೋಕ್ತ ಪ್ರತೀತಿಯೂ ಇದೆ. ಆದರೆ, ಆ ಯಕ್ಷರು ಹಾಡುತ್ತಿದ್ದ ಸಂಗೀತ, ಆಡುತ್ತಿದ್ದ ಆಟ-ನಾಟಕ ಹೇಗಿದ್ದಿತೆಂಬ ಬಗೆಗೆ ನಿಶ್ಚಯಾತ್ಮಕವಾದ ಜ್ಞಾನವಿನ್ನೂಪ್ರಚುರವಾಗಿರುವುದಿಲ್ಲ. ಬಹುಶಃ ಅವರು ಅಳಕಾವತಿಯ ಉದ್ಯಾನ ವನಗಳಲ್ಲಿ ಗಾನ ನೃತ್ಯ ಸಮನ್ವಿತವಾದ ಸಾಮೂಹಿಕ ಆಟಗಳನ್ನಾಡುತ್ತಿದ್ದರೆಂದೂ ಅವರ ಆಟಗಳು ಯಕ್ಷರ ಗಾನ-ನಾಟಕವೆಂದು ಕರೆಯಲ್ಪಟ್ಟುವೆಂದೂ ಊಹಿಸಿಕೊಳ್ಳಬಹುದು. ಈಗಲೂ, ಯಕ್ಷ ಯಕ್ಷಿಣಿಯರು ಏಕಾಂತವಾದ ಅರಣ್ಯ, ನದೀತೀರ, ಗಿರಿದುರ್ಗಗಳಲ್ಲಿಯೂ, ಪುಷ್ಪೋದ್ಯಾನಗಳಲ್ಲಿಯೂ, ನೀರವವಾದ ವಿಲಾಸ ಸ್ಥಾನಗಳಲ್ಲಿಯೂ ಸಂಚರಿಸುತ್ತಿರುವ ಅದೃಶ್ಯ ಜೀವಿಗಳೆಂದು ಹೇಳುವ ಪರಿಪಾಠ ಇದ್ದೇ ಇದೆಯಲ್ಲವೇ? ಅವರ ಜೀವನ ಆನಂದಮಯವಾದ ರಸಿಕ ಜೀವನ. ಈ ಯಕ್ಷಗಾನ-ನಾಟಕ ಜೀವನವು ಕೂಡಾ ಆನಂದದಿಂದ ತುಂಬಿ ತುಳುಕುವ, ನವರಸ ಭರಿತವಾದ ವಿಲಾಸ ಜೀವನ. ಆದ್ದರಿಂದಲೇ ಈ ಆಟ-ನಾಟಕಕ್ಕೆ ಯಕ್ಷರಗಾನ-ನಾಟಕವೆಂಬ ಹೆಸರು ಪ್ರಚಾರಕ್ಕೆ ಬಂದಿತೆನ್ನಬಹುದು. ಗಾಯನ ವಿದ್ಯೆಗೆ ಗಂಧರ್ವರು ಹೆಸರು ಹೊಂದಿದ್ದಂತೆ ಸಾಲಂಕೃತ ನೃತ್ಯಗೀತಾ ವಿನೋದ ವಿದ್ಯೆಗೆ ಯಕ್ಷರು ಪ್ರಸಿದ್ಧರಾಗಿರಬೇಕು. ದೇವದೇವನು ದುಷ್ಟರನ್ನು ದಂಡಿಸಿ, ಶಿಷ್ಟರನ್ನು ಪರಿಪಾಲಿಸಿ, ಧರ್ಮ ಜಾಗೃತಿ ಮಾಡುವ ಸಲುವಾಗಿ ದಶಾವತಾರ ಮಾಡಿದನೆಂದು ಆಸ್ತಿಕರು ನಂಬುತ್ತಾರಷ್ಟೆ. ಆ ಅವತಾರಗಳ ಪುಣ್ಯ ಕಥೆಗಳನ್ನು ನಟಿಸಿ ತೋರಿಸುವ ಈ ಯಕ್ಷರ ಗಾನ ನಾಟಕಕ್ಕೆ ದಶಾವತಾರ

ನಾಟಕವೆಂಬ ಹೆಸರು ನಿಜವಾಗಿಯೊ ಒಪ್ಪುತ್ತದೆ. ಇದು ಗದ್ಯ ಭಾಗವೇ ಇಲ್ಲದ ಕೇವಲ ಗಾನ ನಾಟಕವಾಗಿದೆ. ಭರತ ಖಂಡದ ಉಜ್ವಲ ಕಾವ್ಯ ಗ್ರಂಥಗಳೆಂದರೆ, ರಾಮಾಯಣ, ಭಾರತ ಮತ್ತು ಭಾಗವತಗಳು. ನಮ್ಮ ಯಕ್ಷಗಾನ ನಾಟಕದ "ಪ್ರಸಂಗ"ಗಳೆಲ್ಲವೂ ಈ ಗ್ರಂಥಾಂತರ್ಗತವಾದ ಕಥಾವಸ್ತುಗಳೇ ಆಗಿರುತ್ತವಲ್ಲವೇ ? ಆದ್ದರಿಂದ ಎಲ್ಲಿಯ ವರೆಗೆ ಭಾರತ ರಾಮಾಯಣಗಳು ಉಳಿಯುವವೋ ಅಲ್ಲಿಯ ವರೆಗೆ ಯಕ್ಷಗಾನ ನಾಟಕ ಗಳು ಉಳಿಯುವುವೆಂದು ಧಾರಾಳವಾಗಿ ಹೇಳಬಹುದು.

ನಾಟಕಗಳ ಉದ್ದೇಶ ಆನಂದ

ಯಕ್ಷಗಾನ ನಾಟಕದ ಹುಟ್ಟು ಹೇಗಾಯಿತೆಂಬ ಬಗೆಗೆ ಹಲವರು ಹಲವು ರೀತಿಯಾಗಿ ತರ್ಕಿಸಿದ್ದಾರೆ. ಸಂಸ್ಕೃತ ನಾಟಕಗಳನ್ನು ಮುಂದಿಟ್ಟು ಕೊಂಡೇ ಈ ನಾಟಕಗಳು ಹುಟ್ಟಿದುವೆಂದು ಕೆಲವರು ವಾದಿಸುತ್ತಾರೆ; ಇವು ಗಳು ಸಂಸ್ಕೃತದ ಪ್ರಭಾವಕ್ಕೊಳಗಾಗದೆ, ದ್ರಾವಿಡ ಕಲಾ ಸಂಸ್ಕೃತಿಗಳ ಕುರುಹುಗಳಾಗಿರುತ್ತವೆಂದೂ ತಮಿಳು ದೇಶದ ತೆರಕ್ಕೂಟ ಮತ್ತು ಕೇರಳ ದೇಶದ ಕಥಕ್ಕಳಿಗಳಿಂದ ಹುಟ್ಟಿತೆಂದೂ ಮತ್ತೆ ಕೆವಲವರು ವಾದಿಸುತ್ತಾರೆ. ಈ ಎರಡು ಗುಂಪಿನವರ ವಾದಗಳಲ್ಲಿಯೂ ಕೆಲಮಟ್ಟಿನ ಸತ್ಯವು ಇಲ್ಲದೇ ಇಲ್ಲ. ಆದರೂ ಅವುಗಳನ್ನು ಬದಿಗೆ ಸರಿಸಿ ನಮ್ಮ ವಿವೇಕದ ದೃಷ್ಟಿಯಿಂದಲೇ ಇದರ ಉಗಮವನ್ನು ಶೋಧಿಸಿ ನೋಡುವುದು ತಪ್ಪಾಗದು. ಹಾಗೆ ವಿಚಾರಿಸುವ ಮೊದಲು, ಇದು ಸಾಧಿಸುವ ಧ್ಯೇಯೋದ್ದೇಶಗಳೇನೆಂಬುದನ್ನು ತತ್ವತಃ ಅರಿಯಲೆತ್ನಿಸೋಣ.

ಎಲ್ಲ ಜೀವಿತಗಳ ಕೊನೆಯ ಗುರಿ ಆನಂದವೇ ಆಗಿದೆ. ಎಲ್ಲ ಶಾಸ್ತ್ರ ಗಳ ಮತ್ತು ಎಲ್ಲ ಕಲೆಗಳ ಅಂತಿಮೋದ್ದೇಶವು ಆನಂದ ಪ್ರಾಪ್ತಿಯೇ ಆಗಿದೆ. ಆನಂದವೇ ಬ್ರಹ್ಮವೆಂಬುದಾಗಿ ಸಾಕ್ಷಾತ್ಕಾರಗಳ ಶ್ರುತಿವಚನವಿದೆಯಲ್ಲವೇ? ಈ ಆನಂದವು ಮುಖ್ಯವಾಗಿ ಇಬ್ಬಗೆಯಾಗಿದೆ. ಶಾರೀರಿಕ ಮತ್ತು ಮಾನ ಸಿಕ ಆನಂದ. ಶಾರೀರಿಕಾನಂದಕ್ಕೆ ದೇಹಾರೋಗ್ಯವು ಮುಖ್ಯವಾಗಿರುವಂತೆ, ಮಾನಸಿಕಾನಂದಕ್ಕೆ ನಿಶ್ಚಿಂತೆ ಮುಖ್ಯವಾಗಿದೆ. ಈ ನಿಶ್ಚಿಂತ ವೃತ್ತಿಗೆ ತಲ್ಲೀ ನತೆಯೆಂದೂ, ಏಕಾಗ್ರತೆಯೆಂದೂ ಕರೆಯಬಹುದು. ಇದಕ್ಕೆ 'ಯೋಗ'

ವೆಂದೂ ಹೇಳಬಹುದು. ಎಲ್ಲ ಚಿಂತೆಗಳನ್ನೂ ಹೊಡೆದೋಡಿಸಿ ಮನಸ್ಸನ್ನು ನಿಶ್ಚಿಂತವಾಗಿರಿಸುವ ಶಕ್ತಿ ಕಲೆಗಳಲ್ಲಿದೆ.

ಮನಸ್ಸಂಸ್ಕಾರ

ಕಲೆಗಳ ಆನಂದಾನುಭವಕ್ಕೆ ರಸಗ್ರಾಹಕತೆ ಅತ್ಯಗತ್ಯ. ಉಪ್ಪು, ಹುಳಿ, ಕಾರ, ಕಹಿ, ಸಿಹಿ, ಒಗರು ಎಂಬ ಷಡ್ರಸಗಳ ಹಿತಮಿತ ಸೇವನೆಯಿಂದ ಶರೀರಾರೋಗ್ಯ ವೃದ್ಧಿಯಾಗಿ, ಶಾರೀರಿಕಾನಂದವು ದೊರೆಯುವಂತೆ, ಶೃಂಗಾರ ವೀರ, ಕರುಣ, ಹಾಸ್ಯ, ರೌದ್ರ, ಶಾಂತ, ಅದ್ಭುತ, ಭಯಾನಕ, ಭೀಭತ್ಸಗಳೆಂಬ ನವರಸಗಳ ಹಿತಮಿತಾನುಭೋಗದಿಂದ ಮಾನಸಿಕಾನಂದವು ದೊರೆಯುತ್ತದೆ. ಷಡ್ರಸಗಳ ರುಚಿಶುಚಿಯ ಅನುಭವಕ್ಕೆ ನಾಲಿಗೆಯೇ ಇಂದ್ರಿಯವಾಗಿರುವಂತೆ, ನವರಸಗಳ ಆನಂದಾನುಭವಕ್ಕೆ ಕಿವಿಯೇ ಮುಖ್ಯೇಂದ್ರಿಯವಾಗಿದೆ.

" ಎಸೆಗುಂದೇಹಿಗೆ ಮನದೊಳ್
ಬೆಸುಗೆ, ಮನಕ್ಕಿಂದ್ರಿಯಂಗಳೊಂದಿಗೆ ಕೂಟಂ ॥

ಎಂಬುದಾಗಿ ರಸರತ್ನಾಕರ ಕರ್ತೃವಾದ ಕವಿ ಸಾಳ್ವನು ಮನಸ್ಸು ಇಂದ್ರಿಯಗಳೊಂದಿಗೆ ಕೂಡುವಿಕೆಯುಳ್ಳದ್ದೆಂದು ಸಾರಿರುವನು. ಎಲ್ಲ ಇಂದ್ರಿಯಗಳೂ ಮನಸ್ಸಿನ ಅಧೀನವಾಗಿರುತ್ತವೆ. ಆದ್ದರಿಂದಲೇ " ಇಂದ್ರಿಯಾಣಾಂ ಮನಶ್ಚಾಸ್ಮಿ " ಎಂಬುದಾಗಿ ಗೀತಾ ಕರ್ತೃವು ಸಾರಿದ್ದಾನೆ. ಇಷ್ಟು ಮುಖ್ಯವಾದ ಈ ಮನಸ್ಸನ್ನು ಸುಸಂಸ್ಕೃತಗೊಳಿಸಿಕೊಳ್ಳಲು ಕಲೆಗಳು ಸಾಧನಗಳಾಗಿವೆ. ಷಡ್ರಸ ವಸ್ತುಗಳು ದೃಶ್ಯವಾದ ಪದಾರ್ಥಗಳಾಗಿರುವಂತೆ, ನವರಸ ವಸ್ತುಗಳು ಅ-ದೃಶ್ಯವಾದ ಪದ ಮತ್ತು ಅರ್ಥಗಳಾಗಿರುತ್ತವೆ.

ಈ ನವರಸ ವಸ್ತುಗಳನ್ನು ಗದ್ಯ, ಪದ್ಯ, ಮತ್ತು ಗದ್ಯ ಪದ್ಯ ಮಯವಾದ ಚಂಪು ಎಂಬುದಾಗಿ ಮೂರು ಪಂಗಡ ಮಾಡುವೆವು. ಅವುಗಳನ್ನು ಶ್ರವ್ಯ ಮತ್ತು ದೃಶ್ಯ ಎಂಬುದಾಗಿ ಎರಡು ಮುಖ್ಯ ಗುಂಪುಗಳಾಗಿಯೂ ವಿಭಾಗಿಸಿಕೊಳ್ಳಬಹುದು.

ನಾದ—ನಟನೆ

ಮನುಷ್ಯನು ಸಮಾಜ ಜೀವಿಯಾಗಿರುವುದರಿಂದ ತನ್ನ ಅಭಿಪ್ರಾಯಗಳನ್ನು ಇನ್ನೊಬ್ಬರಿಗೆ ತಿಳಿಸದೇ ಸಮಾಜ ಜೀವನ ಮಾಡಲಿಕ್ಕೆ ಶಕ್ಯವಾಗ

ಲಾರದು. ಅಭಿಪ್ರಾಯಗಳನ್ನು ಮಾತಿನಿಂದಲೂ ತಿಳಿಸಬಹುದು, ಮಾತರಿಯಲಾರದವರಿಗೆ ನಟನೆಯಿಂದಲೂ ತಿಳಿಸಬಹುದು. ಮಾತು ಹುಟ್ಟುವ ಮೊದಲು ನಾದ ಮತ್ತು ನಟನೆಗಳೇ ಭಾವ ಪ್ರಕಾಶದ ಸಾಧನಗಳಾಗಿದ್ದುವು. ಯಾವ ಅರ್ಥವನ್ನೂ ಕೊಡದ ತನ....ನ....ನ ಎಂಬುದನ್ನು ದುಃಖ, ಸಂತೋಷ, ಕೋಪ, ಜಿಗುಪ್ಸೆ, ಕರುಣೆ ಮೊದಲಾದ ವಿವಿಧ ಭಾವಗಳನ್ನು ಪ್ರಚೋದಿಸುವ ರಾಗ-ತಾಳಗಳಲ್ಲಿ ಹಾಡಬಹುದಲ್ಲವೆ? ನಾದದಂತೆ ನಟನೆಯಿಂದಲೂ ವಿವಿಧ ಭಾವಾನುಭಾವಗಳನ್ನು ಹುಟ್ಟಿಸಿ, ಉದ್ರೇಕಿಸಬಹುದು. ನಾದವು ವಿವಿಧಾರ್ಥಗಳನ್ನು ಹುಟ್ಟಿಸುವ ಮಟ್ಟಕ್ಕೆ ಬರುತ್ತಲೇ ಸಂಗೀತ ಶಾಸ್ತ್ರವಾಗಿ ಕಟ್ಟುಗೊಂಡಿತು. ಅದೇ ಪ್ರಕಾರ, ನಟನೆಯು, ನೋಟಕನ ಎದೆಕರಗಿಸಿ, ರಸಾರ್ದ್ರ ಮಾಡುವ ಮಟ್ಟವನ್ನು ಮುಟ್ಟುತ್ತಲೇ ನಾಟ್ಯಶಾಸ್ತ್ರವಾಗಿ ಪರಿಣಮಿಸಿತು.

ಶ್ರವ್ಯವೆಂದರೆ ಕೇಳಲು ತಕ್ಕುದಾದುದು. ಅದರಿಂದ, ಅರ್ಥ, ಜ್ಞಾನ, ಆನಂದಗಳನ್ನು ಪಡೆಯಬೇಕಾದರೆ ಕೇಳುವವನಲ್ಲಿ ರಸಿಕತೆ ಮಾತ್ರವೇ ಇದ್ದರೆ ಸಾಲದು. ಶಬ್ದ, ಅರ್ಥ, ಅಲಂಕಾರ, ಧ್ವನಿ ಮೊದಲಾದುವುಗಳ ಪರಿಜ್ಞಾನವೂ ಇರಬೇಕಾಗುವುದು. ದೃಶ್ಯವೆಂದರೆ, ನೋಡಲು ತಕ್ಕುದಾದುದು. ದೃಶ್ಯದ ಅರ್ಥಾನಂದಾನುಭವಕ್ಕೆ ದೃಷ್ಟಿ ಸ್ಪಷ್ಟತೆಯೊಂದಿದ್ದರೆ ಸಾಲುವುದು. ಹೃದಯ ಮಂದಿರದಲ್ಲಿ ಆನಂದ ಜ್ಯೋತಿ ರೂಪವಾಗಿರುವ ಚೈತನ್ಯವೆಂಬ ಯಜ್ಞಭೋಕ್ತೃವಿಗೆ ಮನೋಜನ್ಯವಾದ ನವರಸಾಹುತಿಗಳನ್ನು ಕಿವಿಯ ದ್ವಾರಾ ಅರ್ಪಿಸಬಹುದು; "ಶಬ್ದಾನುವಿದ್ಧಮೇ ವೇದಂ ಜಗತ್ಸರ್ವಂ ಚರಾ ಚರಂ" ಎಂದು ಆಗಮೋಕ್ತಿ ಇರುವಂತೆ, "ಶಬ್ದದಿನಾವಾವಿಂದ್ರಿಯ ರಸಮಂ ಶ್ರೋತ್ರದೊಳುದ್ಭಾವಿಪುದು" ಎಂಬುದಾಗಿ ನಮ್ಮ ವೈಯಾಕರಣಿ ಕೇಶಿರಾಜನು ಸಾರಿದ ಸೂತ್ರವೂ ಇದೆ. ಇದೇ ಮಾತನ್ನೇ ಕನ್ನಡ ಕವಿ ನೇಮಿಚಂದ್ರನು "ಕಿವಿಯಿಂದೀಂಟಿಸುವರ್ ಸಮಸ್ತ ರಸಮಂ" ಎಂದು ಪ್ರತಿಧ್ವನಿಸಿದ್ದಾನೆ.

ಕಲಾ ಪಂಚಾಮೃತ

ಕಿವಿಯಿಂದ ಕುಡಿಸುವಂತೆ, ಈ ನವರಸಗಳನ್ನು ಕಣ್ಣಿನಿಂದಲೂ ಕುಡಿಸಬರುವುದು. ಕಣ್ಣಿನ ದ್ವಾರಾ ಅರ್ಪಿಸಲ್ಪಡುವ ಈ ರಸಾಹುತಿಗಳಿಗೆ

ದೃಶ್ಯಗಳೆಂದು ಹೆಸರು ಬಂದಿದೆ. ಆದ್ದರಿಂದಲೇ ಇದಕ್ಕೆ ಚಾಕ್ಷುಷ ಯಜ್ಞ ಎಂದು ನಮ್ಮ ಪುರಾತನರು ಕರೆದಿರುವರು. ಈ ಚಾಕ್ಷುಷ ಯಜ್ಞದಿಂದ ಹುಟ್ಟುವ ತುಷ್ಟಿ ಪುಷ್ಟಿಗಳನ್ನು ಪಂಡಿತ ಪಾಮರ ಭೇದವಿಲ್ಲದೆ ರಸಿಕರಾದ ಸರ್ವ ಜನರೂ ಪಡೆಯಬಹುದು. ಆದ್ದರಿಂದಲೇ ಕವಿಕುಲ ಗುರುವಾದ ಕಾಲಿದಾಸನು ಮಾಲವಿಕಾಗ್ನಿಮಿತ್ರದ ಆರಂಭದಲ್ಲಿ

" ತ್ರೈಗುಣ್ಯೋದ್ಭವ ಮತ್ರ ಲೋಕಚರಿತಂ ನಾನಾ ರಸಂ ದೃಶ್ಯತೆ ।
ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ ॥

ಅಂದರೆ—ನಾಟಕವು ಭಿನ್ನ ಭಿನ್ನ ರಸ ರುಚಿಗಳನ್ನುಳ್ಳ ಎಲ್ಲ ಜನರಿಗೂ ರುಚಿಸುವ ರಸಭೋಜನವಾಗಿದೆ ಎಂದು ಸಿದ್ಧಾಂತಿಸಿರುವನು. ನಮ್ಮ ಯಕ್ಷಗಾನ ನಾಟಕವು ನಾಟಕದ ಒಂದು ಪ್ರಕಾರವೇ ಆಗಿದೆ. ನಾಟಕದಲ್ಲಿ ಸರ್ವ ಶಾಸ್ತ್ರಗಳೂ, ಸರ್ವ ಕಲೆಗಳೂ ಅಡಕವಾಗಿರುವುದರಿಂದ ಅದೊಂದು ಕಲಾ ಪಂಚಾಮೃತವಾಗಿದೆ. ಈ ಮಾತು ಯಕ್ಷ ನಾಟಕಕ್ಕೂ ಅನ್ವಯಿಸುವುದು. ಈ ಪಂಚಾಮೃತ ಪಾನದಿಂದ ಮನುಷ್ಯನು ಸುಸಂಸ್ಕೃತನೂ, ಪರಿಶುದ್ಧನೂ ಆಗುತ್ತಾನೆ. ಸುಸಂಸ್ಕೃತಿಯು ಸೌಂದರ್ಯ ಮತ್ತು ಆನಂದದ ಪ್ರತೀಕವಾಗಿರುವಂತೆ, ಪರಿಶುದ್ಧತೆಯು ಸತ್ಯಮತ್ತು ಜ್ಞಾನದ ಚಿಹ್ನೆಯಾಗಿದೆ. ಸತ್ಯ ಸೌಂದರ್ಯಗಳ ಮಧುರ ಮಿಲನವೇ ಮನುಷ್ಯನ ಪರಮೋಚ್ಚ ಸಿದ್ಧಿಗಳಾಗಿವೆಯಲ್ಲವೆ? ಈ ರೀತಿಯ ಮಿಲನವನ್ನು ಸಾಧಿಸಿ ಕೊಡುವುದೇ ಎಲ್ಲ ಕಲೆಗಳ ಉದ್ದೇಶವಾಗಿದೆ. ಕವಿ ಕಾಲಿದಾಸನು ತನ್ನ ರಘುವಂಶದ ಮೊದಲಲ್ಲಿಯೇ ಈ ಸತ್ಯವನ್ನು

ವಾಗರ್ಥಾವಿವ ಸಂಪೃಕ್ತೌ, ವಾಗರ್ಥಪ್ರತಿ ಪತ್ತಯೇ
ಜಗತಃ ಪಿತರೌ ವಂದೆ ಪಾರ್ವತೀ ಪರಮೇಶ್ವರೌ ॥

ಎಂದು ಮನೋಜ್ಞವಾಗಿ ಧ್ವನಿಸಿರುವನು. ವಾಕ್ಕು ಸೌಂದರ್ಯ ರೂಪವಾದ ಪಾರ್ವತಿಯೆಂದೂ, ಅರ್ಥವು ಸತ್ಯ ರೂಪವಾದ ಶಿವನೆಂದೂ ಈ ಸತ್ಯ—ಸೌಂದರ್ಯಗಳ ಸಂಪೃಕ್ತಿಯಿಂದ ಸೃಷ್ಟಿಯು ಸ್ಥಿತಿಗೊಂಡಿದೆಯೆಂದೂ ಅದರ ತಾತ್ಪರ್ಯ. ಸತ್ಯವು ತೇಜಸ್ಸನ್ನು ಧರಿಸಿಕೊಂಡ ವಿರಕ್ತ ಶಿವನು ರೂಪವಾಗಿದೆ; ಸೌಂದರ್ಯವು ಆ ತೇಜೋಬಲಕ್ಕೆ ಒಲಿದು, ಅದನ್ನು

ಹಿಂಬಾಲಿಸುವ ತ್ರಿಪುರ ಸುಂದರಿಯಾದ ಪರ್ವತ ಪುತ್ರಿಯ ರೂಪವಾಗಿದೆ. ಅರ್ಥವನ್ನು ಅರಿತುಕೊಳ್ಳಲು ವಾಕ್ಕಿನ, (ವಾಣಿಯ) ಸಹಾಯ ಅತ್ಯಗತ್ಯ. ವಾಣಿಯ ಕೃಪೆಗೆ ಪಾತ್ರರಾಗದವರು, ದೃಶ್ಯದಿಂದಲಾದರೂ ಅರ್ಥವನ್ನು ಅರಿತುಕೊಳ್ಳಬೇಕು. ಆ ಉದ್ದೇಶದಿಂದಲೇ ದೃಶ್ಯರೂಪಕಗಳು ಸೃಜಿಸಲ್ಪಟ್ಟುವೆಂಬುದನ್ನು ಮರೆಯಬಾರದು.

ದೃಶ್ಯದ ಮೂಲ ಕಲ್ಪನೆ

ಈ ದೃಶ್ಯ ರೂಪಕಗಳ ಹುಟ್ಟನ್ನು ನಾಟ್ಯಶಾಸ್ತ್ರ ರಚಯಿತಾರನಾದ ಭರತ ಮುನಿಯು ಈ ರೀತಿ ಉಲ್ಲೇಖಿಸಿದ್ದಾನೆ—

" ಮಹೇಂದ್ರಪ್ರಮುಖೈಃ ದೇವೈ ರುಕ್ತಃ ಕಿಲ ಪಿತಾಮಹಃ
ಕ್ರೀಡನೀಯಕ ಮಿಚ್ಛಾಮೋ ದೃಶ್ಯಂ ಶ್ರವ್ಯಂ ಚಯದ್ಭವೇತ್ ||

ಅಂದರೆ—ಇಂದ್ರಾದಿ ದೇವತೆಗಳು ನೃತ್ಯ, ಗಾಯನ ಸಹಿತವಾದ ಕ್ರೀಡನೀಯಕ (ಆಟ)ವನ್ನು ಪಡೆಯಬಯಸಿ, ಅಂತಹ ಕ್ರೀಡನೀಯಕವನ್ನು ಸೃಷ್ಟಿಸೆಂದು ಪರಬ್ರಹ್ಮನನ್ನು ಬೇಡಿಕೊಂಡರಂತೆ. ಸ್ತ್ರೀಶೂದ್ರರಿಗೆ ವೇದಾಧಿಕಾರವಿದ್ದಿಲ್ಲದ ಆ ಕಾಲದಲ್ಲಿ, ಎಲ್ಲರಿಗೂ, ಎಲ್ಲ ವರ್ಣದವರಿಗೂ ಮುಕ್ತದ್ವಾರವಾಗಿರುವಂತೆ ಈ ನಾಟ್ಯವೇದವೆಂಬ ಪಂಚಮ ವೇದವನ್ನು ಬ್ರಹ್ಮದೇವನು ರಚಿಸಿದನಂತೆ.

" ನವೇದ ವ್ಯವಹಾರೋಯಂ ಸಂಶ್ರಾವ್ಯಃ ಶೂದ್ರಜಾತಿಷು
ತಸ್ಮಾತ್ ಸೃಜಾಪರಂ ವೇದಂ ಪಂಚಮಂ ಸಾರ್ವವರ್ಣಿಕಂ ||

ಈ ಪಂಚಮ ವೇದವು ಚತುರ್ವೇದಾಂಗ ಸಂಭವವಾಗಿದೆಂದು ಭರತ ಮುನಿಯು ಸೂಚಿಸುತ್ತ—

ಜಗ್ರಾಹ್ಯ ಪಾಠ್ಯಂ ಋಗ್ವೇದಾತ್, ಸಾಮಭ್ಯೋಗೀತಮೇವಚ
ಯಜುರ್ವೇದಾದಭಿನಯಾನ್, ರಸಾನಾಥರ್ವಣಾದಪಿ ||

(ಋಗ್ವೇದದಿಂದ ಶಬ್ದಗಳನ್ನೂ, ಯಜುರ್ವೇದದಿಂದ ಅಭಿನಯವನ್ನೂ ಸಾಮ ವೇದದಿಂದ ಸಂಗೀತವನ್ನೂ, ಅಥರ್ವಣದಿಂದ ರಸಗಳನ್ನೂ ತೆಗೆದುಕೊಂಡು ನಾಟ್ಯ ವೇದವನ್ನು ಸಂಕಲಿಸಲಾಯಿತು) ಎಂದಿರುವನು.

ಈ ನಾಟ್ಯವೇದವು ಲಲಿತಾತ್ಮಕವಾಗಿರುವುದೆಂದು ವೇದ ಮೂಲನಾದ ಬ್ರಹ್ಮನು ಸೂಚಿಸಿದ್ದಾನೆ. ಲಲಿತಾತ್ಮಕವಾಗಿರುವುದರಿಂದಲೇ ಇದಕ್ಕೆ

ಲಾಕ್ಷಣಿಕರು ಕಾಂತಾ ಸಮ್ಮಿತ—ಪ್ರೇಮ—ಸೌಂದರ್ಯರೂಪದಿಂದ ಉದಾತ್ತ ಬೋಧನೆ ಮಾಡುವ ಶಾಸ್ತ್ರ—ಎಂದು ಹೆಸರಿಟ್ಟಿರುವರು. ಇದರಲ್ಲಿ,

ಸರ್ವ ಶಾಸ್ತ್ರಾರ್ಥ ಸಂಪನ್ನಂ ಸರ್ವ ಶಿಲ್ಪ ಪ್ರದರ್ಶಕಂ
ನಾಟ್ಯ ಸಂಜ್ಞ ಮಿಮಂ ವೇದಂ ಸೇತಿಹಾಸ ಕರೋಮ ಹಂ ॥

ಸರ್ವ ಶಾಸ್ತ್ರಗಳೂ, ಸರ್ವ ಶಿಲ್ಪಗಳೂ, ಇತಿಹಾಸ ಪುರಾಣ ಘಟನೆಗಳೂ ಅಡಕಗೊಳಿಸಲ್ಪಟ್ಟವೆಂದು ವಿವರಿಸಿರುವುದು ಗಮನಾರ್ಹವಾಗಿದೆ. ಸಂಗೀತ, ಸಾಹಿತ್ಯ, ಶಿಲ್ಪ, ಚಿತ್ರ, ನಾಟ್ಯ ಈ ಐದು ಕಲೆಗಳ ಪ್ರದರ್ಶನವಿಲ್ಲದ ರೂಪಕವು ಅಪೂರ್ಣವೇ ಸರಿ; ಅದರಿಂದ ಪೂರ್ಣ ಪ್ರಯೋಜನಕಾರಿಯಾದ ರಸಾನಂದವು ಆವಿರ್ಭವಿಸಲಾರದೆಂಬುದೇ ಇದರ ಅಂತರ್ಭಾವವಾಗಿದೆ. ನಾಟಕದಲ್ಲಿ ಸಂಗೀತವಾಗಲೀ ನೃತ್ಯಾಭಿನಯವಾಗಲೀ, ದೃಶ್ಯ (ಸಿನೇರಿ) ಪೋಷಾಕುಗಳಾಗಲೀ ಸಾಕಷ್ಟು ಇಲ್ಲದಿದ್ದರೆ, ಮತ್ತು ಆಯಾ ಸನ್ನಿವೇಶ ಸಂದರ್ಭಗಳಿಗೆ ಉಚಿತವಾಗುವಂತಿಲ್ಲದಿದ್ದರೆ, ಅಂತಹ ನಾಟಕ ಮಂಡಳಿಯವರನ್ನು ಎಲ್ಲರೂ ಟೀಕಿಸುವರಲ್ಲವೇ ?

ಭಾವಾನು ಕೀರ್ತನ

ಸಂಪೂರ್ಣ ಸುಸಜ್ಜಿತವಾದ ನಾಟಕಗಳು ಸಾಧಿಸುವ ಉದ್ದೇಶದ ಬಹುಮುಖತೆಯನ್ನು ಆ ನಾಟ್ಯವೇದ ವಿಧಾತನು ಈ ರೀತಿ ಬಣ್ಣಿಸಿದ್ದಾನೆ-

" ತ್ರೈಲೋಕ್ಯಸ್ಯಾಸ್ಯ ಸರ್ವಸ್ಯಂ ನಾಟ್ಯಂ ಭಾವಾನುಕೀರ್ತನಂ
ಕ್ವಚಿದ್ಧರ್ಮಃ ಕ್ವಚಿತ್ ಕ್ರೀಡಾ, ಕ್ವಚಿದರ್ಥಃ ಕ್ವಚಿಚ್ಛ್ರಮಃ
ಕ್ವಚಿದ್ಧಾಸ್ಯಂ, ಕ್ವಚಿದ್ಯುದ್ಧಂ ಕ್ವಚಿತ್ಕಾಮಃ ಕ್ವಚಿದ್ವಧಃ
ಧರ್ಮೋಧರ್ಮಪ್ರವೃತ್ತಾನಾಂ, ಕಾಮಃ ಕಾಮೋಪಸೇವಿನಾಂ ॥
ನಿಗ್ರಹೋ ದುರ್ವಿನೀತಾನಾಂ, ಮತ್ತಾನಾಂ ದಮನಕ್ರಿಯಾ ।
ಕ್ಲೀಬಾನಾಂ ಧಾರ್ಷ್ಟ್ಯಕರಣಂ ಉತ್ಸಾಹಃ ಶೂರಮಾನಿನಾಂ ॥
ಅ–ಬುಧಾನಾಂ ವಿಬೋಧಶ್ಚ, ವೈದುಷ್ಯಂ ವಿದುಷಾಮಪಿ ।
ಈಶ್ವರಾಣಾಂ ವಿಲಾಸಶ್ಚ ಸ್ಥೈರ್ಯಂ ದುಃಖಾರ್ದಿತಸ್ಯಚ ॥
ಅರ್ಥೋಪಜೀವಿನಾಂ ಅರ್ಥೋವೃತ್ತಿರುದ್ವಿಗ್ನಚೇತಸಾಂ ॥
ನಾನಾ ಭಾವೋಪಸಂಪನ್ನಂ, ನಾನಾವಸ್ಥಾಂತರಾತ್ಮಕಂ ।

ಲೋಕವೃತ್ತಾನುಕರಣಂ ನಾಟ್ಯಮೇ ತನ್ಮಯಾ ಕೃತಂ ||
ಉತ್ತಮಾಧಮ ಮಧ್ಯಾನಾಂ ನರಾಣಾಂ ಕರ್ಮಸಂಶ್ರಯಂ ||
ಹಿತೋಪದೇಶ ಜನನಂ ನಾಟ್ಯಂ ಏತದ್ಭವಿಷ್ಯತಿ ||
ಏತದ್ರಸೇಷು ಭಾವೇಷು ಸರ್ವಕರ್ಮಕ್ರಿಯಾಸುಚ ||
ಸರ್ವೋಪದೇಶ ಜನನಂ ನಾಟ್ಯಂ ಏತದ್ಭವಿಷ್ಯತಿ ।
ದುಃಖಾರ್ತಾನಾಂ, ಶಮಾರ್ತಾನಾಂ, ಶೋಕಾರ್ತಾನಾಂ ತಪಸ್ವಿನಾಂ ।
ವಿಶ್ರಾಮ ಜನನಂ ಲೋಕೇ ನಾಟ್ಯಮೇದ್ಭವಿಷ್ಯತಿ ||
ಧನಂ, ಯಶಸ್ಯ ಮಾಯುಷ್ಯಂ ಹಿತಂ ಬುದ್ಧಿವಿವರ್ಧನಂ ||
ಲೋಕೋಪದೇಶ ಜನನಂ ನಾಟ್ಯಂ ಏತದ್ಭವಿಷ್ಯತಿ ।
ನ ತದ್‌ಜ್ಞಾನಂ, ನ ತಚ್ಛಿಲ್ಪಂ, ನ ಸಾ ವಿದ್ಯಾ, ನ ಸಾ ಕಲಾ ||
ನ ಸ ಯೋಗೋ ನ ತತ್ಕರ್ಮ ನಾಟ್ಯೇಸ್ಮಿನ್ ನ ದೃಶ್ಯತೇ ।
ಸರ್ವ ಶಾಸ್ತ್ರಾಣಿ ಶಿಲ್ಪಾನಿ ಕರ್ಮಾಣಿ ವಿವಿಧಾನಿಚ ||
ಅಸ್ಮಿನ್ನಾಟ್ಯೆ ಸಮೇತಾನಿ ತಸ್ಮಾದೇ ತನ್ಮಯಾ ಕೃತಂ ||

(ಸ್ವರ್ಗ, ಮರ್ತ್ಯ, ಪಾತಾಳವೆಂಬ ಮೂರುಲೋಕಗಳ ಚರಿತ್ರೆಗಳನ್ನು ಅನುವರ್ತಿಸಿಕೊಂಡು, ವಿವಿಧ ಭಾವ ಮತ್ತು ಅವಸ್ಥಾಂತರಗಳನ್ನು ಪ್ರತಿ ಬಿಂಬಿಸಿ ತೋರಿಸುವ ಈ ನಾಟ್ಯವೇದವನ್ನು ನಾನು ರಚಿಸಿದೆನು; ಇದು ಉತ್ತಮ, ಮಧ್ಯಮ, ಜಘನ್ಯ ಎಂಬ ಮೂಬಗೆಯ ಮಾನವರ ಕರ್ಮಗಳನ್ನು ತೋರಿಸಿಕೊಡುವಂಥಾದ್ದಾಗಿದೆ. ಹಿತೋಪದೇಶ ಮಾಡುವುದು, ಪುಕ್ಕರಿಗೆ ಧೈರ್ಯವನ್ನೂ, ಚಂಚಲರಿಗೆ ಸ್ಥೈರ್ಯವನ್ನೂ, ಸುಖಾನಂದಾಪೇಕ್ಷಿಗಳಿಗೆ ಸುಖಾನಂದಗಳನ್ನೂ ಕೊಡುವುದು. ದುಃಖಾರ್ತರಿಗೆ ದುಃಖವನ್ನು ಮರೆಸುವ ಹಾಗೂ ತಪಸ್ವಿಗಳಿಗೆ ತೇಜಃಕಾರಕವಾದ ದಿವ್ಯಾನಂದವನ್ನು ಸುರಿಸುವ ವಿಶ್ರಾಂತಿಕರ ಕಲೆ ಇದು. ನಾಟಕದಲ್ಲಿ ಯಾವುದು ಗೋಚರಿಸಲ್ಪಡಲಾರದೋ ಅದು ಶಾಸ್ತ್ರವೆನಿಸದು, ಶಿಲ್ಪವೆನಿಸದು, ವಿದ್ಯೆ ಎನಿಸದು, ಕಲೆ ಎನಿಸದು, ಯೋಗವೆನಿಸದು, ಕರ್ಮವೆನಿಸದು. ಸುಖ-ದುಃಖ ದ್ವಂದ್ವಮಯವಾದ ಲೋಕಸ್ವಭಾವವನ್ನು ಆಂಗಿಕಾದ್ಯಭಿನಯಗಳಿಂದ ವ್ಯಕ್ತಗೊಳಿಸುವುದೇ ನಾಟಕ.)

ಕನ್ನಡದಲ್ಲಿ ನಾಟಕ ಸಾಹಿತ್ಯ

ಇಂತಹ ನಾಟಕ ಸಾಹಿತ್ಯವು ನಮ್ಮ ನಚ್ಚಿನ ಕನ್ನಡ ನಾಡಿನಲ್ಲಿ ಯಾವಾಗ ಹುಟ್ಟಿತೆಂಬ ಬಗ್ಗೆ ಇನ್ನೂ ಪ್ರಬಲಾಧಾರ ದೊರೆತಿರುವುದಿಲ್ಲ. ಶಿಂಗರಾರ್ಯನ "ಮಿತ್ರವಿಂದಾ ಗೋವಿಂದ" ಎಂಬುದೇ ಮೊತ್ತಮೊದಲಿನ ಕನ್ನಡ ನಾಟಕ. ಈ ನಾಟಕವು ೧೭ ನೆಯ ಶತಮಾನದಲ್ಲಿ ರಚಿತವಾಯಿತು. ಅಂದ ಮೇಲೆ, ನಮ್ಮ ನಾಡಲ್ಲಿ ನಾಟಕವಾಡುವ ಪದ್ಧತಿ ಪ್ರಾರಂಭವಾಗಿ ಮೂರು ಶತಮಾನ ಮಾತ್ರವೇ ಕಳೆಯಿತೆ? ಎಂದು ಪ್ರಶ್ನಿಸಬೇಕಾಗಿದೆ. ಈ ಪ್ರಶ್ನೆಗೆ ದೊರೆಯುವ ಉತ್ತರದ ಮೇಲೆಯೇ "ಯಕ್ಷಗಾನ ನಾಟಕ"ದ ಉಗಮ ಕಾಲವು ಅವಲಂಬಿಸಿಕೊಂಡಿದೆನ್ನಬಹುದು. ಪ್ರಾಚೀನ ಕನ್ನಡ ಗ್ರಂಥಗಳ ಸಮುದ್ರದಲ್ಲಿ ಯಕ್ಷಗಾನ ನಾಟಕ ರತ್ನಗಳು ಇನ್ನೂ ಉಪಲಬ್ಧವಾದಂತೆ ತೋರುವುದಿಲ್ಲ. ಈ ಮಾತು ಗದ್ಯ ಪದ್ಯಮಯವಾದ ದೃಶ್ಯ ನಾಟಕ ಚಂಪುಗಳಿಗೂ ಅನ್ವಯಿಸುವುದೆನ್ನಬಹುದು. ಹಿಂದಿನ ಕನ್ನಡ ಕೃತಿಗಳೆಲ್ಲ ಶ್ರವ್ಯವಾದ ಚಂಪುಕಾವ್ಯಗಳಾಗಿದ್ದವು. ಅಂದ ಮೇಲೆ, ಹಿಂದಿನ ಕಾಲದಲ್ಲಿ ನಾಟಕವಾಡುವ ಅಭ್ಯಾಸವಿದ್ದಿಲ್ಲವೆ? ದೃಶ್ಯದ ಆವಶ್ಯಕತೆಇಲ್ಲದೆ, ಶ್ರವ್ಯಗಳಿಂದಲೇ ಸರ್ವ ಭಾವ ರಸಾನಂದಗಳನ್ನು ಪಡೆದು, ಮನಸ್ಸಂಸ್ಕಾರ ಮಾಡಿಕೊಳ್ಳುವುದೇ ಆಗ ಹೆಚ್ಚಾಗಿ ಬಳಕೆಯಲ್ಲಿದ್ದಿರಬಹುದೆ? ಅಥವಾ ಶ್ರವ್ಯಕಾವ್ಯಗಳ ಕಥೆಗಳನ್ನು ಆಗಿಂದಾಗಲೇ ದೃಶ್ಯರೂಪಕವಾಗಿ ಮಾರ್ಪಡಿಸಿಕೊಂಡು ಅಭಿನಯಿಸುತ್ತಿದ್ದಿರಬಹುದೆ? ಹಾಗಿದ್ದಲ್ಲಿ, ಅವುಗಳನ್ನು ಬರೆದಿಡುತ್ತಿದ್ದಿಲ್ಲವೆ? ಎಂಬ ವಿವಿಧ ಸಂದೇಹಗಳು ಪುಂಖಾನುಪುಂಖವಾಗಿ ಹುಟ್ಟಿಕೊಳ್ಳುವುವು. ನಾಟಕಗಳು ಗದ್ಯ ಪದ್ಯಮಯಂ ಕಾವ್ಯಗಳಾಗಿದ್ದರೆ, ನಮ್ಮ ಯಕ್ಷಗಾನ ನಾಟಕಗಳು ಕೇವಲ ಪದ್ಯಮಯವಾದ ಕೃತಿಗಳಾಗಿವೆ. ಇವುಗಳ ಪಾತ್ರಧಾರಿಗಳು ಪದ್ಯಗಳಿಗೆ ತಾವೇ ಆಗಿಂದಾಗ ಅರ್ಥ ಹೇಳುವರು. ಇದರ ಮೇಲಿಂದಲೇ ನಾವೊಂದು ನಿರ್ಣಯಕ್ಕೆ ಬರುವಂತಿದೆ. ಯಕ್ಷಗಾನ ನಾಟಕಗಳನ್ನು 'ಭಾಗವತ'ರೆಂಬ ವಿಶಿಷ್ಟಮನೆತನದ ವ್ಯಕ್ತಿಗಳು ಬಾಯಿಪಾಠ ಮಾಡಿಕೊಂಡು, ಒಂದು ತಲೆಮಾರಿನವರು ಮುಂದಿನ ತಲೆಮಾರಿನವರಿಗೆ ಕಂಠಪಾಠ ಮಾಡಿಸುತ್ತ ಬಂದಿರಬೇಕು. ಈಗ ಉಪಲಬ್ಧವಾಗಿರುವ ಯಕ್ಷಗಾನ ಪ್ರಬಂಧಗಳೆಲ್ಲಹೊಸಗನ್ನಡ ಶೈಲಿಯಲ್ಲಿಯೆ

ಬರೆಯಲ್ಪಟ್ಟುವೆಂಬುದನ್ನು ಗಮನಿಸಬೇಕು. ಹಳೆಗಾಲದ ಯಕ್ಷಗಾನ ಕವಿಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪೆಯ ಶಾಂತಯ್ಯನವರೂ ದಕ್ಷಿಣ ಕನ್ನಡದ ಕುಂಬಳೆ ಹೋಬಳಿಯ ಪಾರ್ತಿ ಸುಬ್ಬನವರೂ ಮೊದಲಿಗರಾಗಿರುವರು. ಅವರ ಕಾಲ ೧೮ ನೆಯ ಶತಮಾನದ ಉತ್ತರಾರ್ಧವೆಂದು ವಿದ್ವಾಂಸರು ತರ್ಕಿಸಿರುವರು. ಅಂತೂ ಗ್ರಂಥಸ್ಥ ಯಕ್ಷಗಾನ ನಾಟಕಗಳು ಕೇವಲ ಎರಡು ಶತಮಾನಗಳ ಈಚೆಗೆಯೇ ಹುಟ್ಟಿದವೆನ್ನಬಹುದು.

೯ ನೆಯ ಶತಮಾನದವನಾದ ಅಮೋಘವರ್ಷ ನೃಪತುಂಗನು ತನ್ನ ಕವಿರಾಜಮಾರ್ಗಾಲಂಕಾರವೆಂಬ ಗ್ರಂಥದಲ್ಲಿ ದೇಶೀಯ ಕಾವ್ಯಗಳ ಮಾತೆತ್ತಿ,

ನುಡಿಗೆಲ್ಲಂ ಸಲ್ಲದ ಕ-।
ನ್ನಡದೊಳ್ ಚತ್ತಾಣಮುಂ, ಬೆದಂಡೆಯುಂ ಎಂದೀ ॥
ಗಡಿನ ನೆಗಳ್ತೆಯ ಕಬ್ಬದೊ—।
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ॥

(೧ ಭಾಗ—ಪದ್ಯ ೩೨)

ಎಂದು ಚತ್ತಾಣ, ಬೆಂದಡೆ, ಬಾಜನ ಎಂಬ ಕಾವ್ಯಪ್ರಕಾರಗಳನ್ನು ಹೆಸರಿಸಿದ್ದಾನೆ. ಇದನ್ನು ಲಕ್ಷಿಸಿ ಕೆಲ ಮಂದಿ ವಿದ್ವಾಂಸರು ಅವುಗಳು ಯಕ್ಷಗಾನ ನಾಟಕಗಳ ವಿವಿಧ ಪ್ರಕಾರಗಳನ್ನು ಸೂಚಿಸುತ್ತಿವೆಯೆಂದು ವಾದಿಸಿದ್ದಾರೆ. ಆದರೆ, ಈ ವಾದವನ್ನು ಇತ್ಯರ್ಥಿಸುವಂತೆ ಮತ್ತು ಸಿದ್ಧಾಂತಿಸಲು ಸುಲಭವಾಗುವಂತೆ ಚತ್ತಾಣ, ಬೆದಂಡೆ, ಬಾಜನಗಬ್ಬ ಗ್ರಂಥವೊಂದಾದರೂ ಇದುವರೆಗೆ ದೊರೆತಿರುವದಿಲ್ಲ. ಆದ್ದರಿಂದ ಈ ವಿದ್ವಾಂಸರ ತರ್ಕವು ಕೇವಲ ಒಂದು ಊಹೆ ಮಾತ್ರವಾಗಿದೆ ಎನ್ನಬಹುದು.

ಯಕ್ಷಗಾನ ನಾಟಕದ ಹುಟ್ಟು ಹೇಗಾಯಿತೆಂದೂ ಯಾವಾಗ ಆಯಿತೆಂದೂ ನಿಷ್ಕೃಷ್ಟವಾಗಿ ನಿರ್ಧರಿಸಲು ಅಶಕ್ಯವಾಗಿದೆಂಬುದನ್ನು ಸತ್ಯಪಕ್ಷಪಾತಿಗಳು ಒಪ್ಪಿಕೊಳ್ಳಲೇಬೇಕು. ಯಕ್ಷಗಾನ ನಾಟಕವೆಂಬ ಹೆಸರು ಬಳಕೆಗೆ ಬರುವ ಮೊದಲು ಭಾಗವತರ ಮೇಳ, ಬಯಲಾಟ, ದಶಾವತಾರ ಆಟ, ಎಂಬ ಹೆಸರುಗಳೇ ರೂಢಿಯಲ್ಲಿದ್ದುದನ್ನು ಮರೆಯಬಾರದು. ಆದ್ದರಿಂದ ಇದು ಕೇವಲ ಒಂದು ಸಂಪ್ರದಾಯವಾಗಿ ಬೆಳೆದು ಬಂದು, ಕಾಲಾನುಗುಣ

ವಾಗಿ ಅಭಿವೃದ್ಧಿ ಹೊಂದಿತೆನ್ನಬಹುದು. ಇದರ ಹುಟ್ಟು ಅರ್ವಾಚೀನವೋ, ಪ್ರಾಚೀನವೋ ಎಂಬುದನ್ನು ತರ್ಕಿಸುವ ಗೋಜಿಗೆ ಹೋಗದೆ, ಅದು ಹೇಗೆ ಇಷ್ಟೊಂದು ಲೋಕಪ್ರಿಯವಾಗಿ ಬೆಳೆದು ಹಬ್ಬಿತೆಂಬುದನ್ನು ವಿಮರ್ಶಿಸಿ ಕೊಳ್ಳುವುದು ವಿಹಿತವೆನಿಸುವುದು.

ಏಕಾಂಕದಿಂದಲೇ ನಾಟಕದ ಹುಟ್ಟು

ಪ್ರಾರಂಭದಲ್ಲಿ ಒಂದು ಸಣ್ಣ ದೃಶ್ಯವನ್ನಷ್ಟೇ ಆಡಿತೋರಿಸುವ ಪದ್ಧತಿ ಯಾಗಿ ಇದು ಹುಟ್ಟಿತೆನ್ನಬಹುದು. ಆನಂದೋತ್ಸವ ಸಮಾರಂಭಗಳಲ್ಲಿ ಕಲೋಪಾಸಕರಾದ ಕೆಲವರು ಮೇಳಗೂಡಿ ಹಾಡಿ, ಆಡಿ, ಜನತೆಯ ಸಂತೋ ಷವನ್ನು ಹೆಚ್ಚಿಸುವ ಒಂದು ಪುಟ್ಟ ಕಾರ್ಯಕ್ರಮವಾಗಿಯೇ ಇದು ಅಂಕುರಿ ಸಿತು. ನಾಟಕಗಳಲ್ಲಿ 'ಅಂಕ'ಎಂಬ ಪದವು ತುಂಬಾ ಬಳಕೆಯಲ್ಲಿರುವುದಷ್ಟೆ. ಹಲವು ಅಂಕಗಳ ಸಂಯೋಜನೆಯಿಂದ ಒಂದು ನಾಟಕವಾಗುತ್ತದೆ. ಏಳಂಕ, ಐದಂಕ, ಮೂರಂಕಗಳ ನಾಟಕಗಳು ಬಳಕೆಗೊಂಡಿದ್ದಂತೆ, ಈಗ ಲೀಗ ಏಕಾಂಕ ನಾಟಕಗಳು ಬಳಕೆಗೆ ಬರತೊಡಗಿವೆ. 'ಅಂಕ'ಎಂಬ ಪದಕ್ಕೆ ಭರತ ಮುನಿಯ ನಾಟ್ಯ ಶಾಸ್ತ್ರದಲ್ಲಿ,

> ಅಂಕಸಮಾಪ್ತಿಃ ಕಾವ್ಯಚ್ಛೇದೋನ ಬೀಜ ಸಂಹಾರಃ ||
> ಕಿಂಚಿದವ ಲಗ್ನ ಬಿಂದುಃ ಸೋಂಕ ಇತಿಸದಾವಗಂತವ್ಯಂ ||
>
> (ನಾಟ್ಯಶಾಸ್ತ್ರ)

ಒಂದು 'ದೃಶ್ಯ'ಮಾತ್ರ ಎಂಬ ಅರ್ಥವು ವ್ಯವಹರಿಸಲ್ಪಟ್ಟಿದೆ. ನಮ್ಮ ಯಕ್ಷ ಗಾನ ನಾಟಕವು ಮೊದಲಲ್ಲಿ ಕೇವಲ ಒಂದು ಚಿಕ್ಕ ದೃಶ್ಯವಾಗಿ ಕುಡಿಯೊಡೆ ದಿರಬೇಕು. ದಶಾವತಾರದ ಯಾವುದಾದರೊಂದು ಚಿತ್ತಾಕರ್ಷಕವಾದ ಘಟನೆಯನ್ನು ವೇಷಭೂಷಣ ಸಹಿತವಾಗಿ ನಟಿಸಿ ತೋರಿಸುವ ಪದ್ಧತಿಯು ಒಂದು ಪರಂಪರೆಯಾಗಿ ಹಬ್ಬುತ್ತ ಹೋಗಿರಬೇಕು. ಜನತೆಯ ಮೇಲೆ ಇದರ ಪರಿಣಾಮವು ಹೆಚ್ಚುತ್ತ ಹೋದಂತೆ, ರಾತ್ರಿ ಇಡೀ ಆಡಿ ತೋರಿಸು ವಷ್ಟು ದೀರ್ಘವಾದ—ಅರ್ಥಾತ್ ಹಲವು ಅಂಕ ಅಥವಾ ಘಟನೆಗಳುಳ್ಳ ಯಕ್ಷಗಾನ ನಾಟಕಗಳನ್ನು ಸಿದ್ಧಗೊಳಿಸುವ ಅವಶ್ಯಕತೆ ಉಂಟಾದಂತೆ ತೋರುವುದು.

ನಾಟಕ ಮತ್ತು ಯಕ್ಷಗಾನ ನಾಟಕಗಳಲ್ಲಿ ಪರಸ್ಪರ ವ್ಯತ್ಯಾಸ ವಿಶೇಷವಾಗಿರುವುದಿಲ್ಲವೆನ್ನಬಹುದು. ನಾಟಕಕ್ಕೆ ನೇಪಥ್ಯ, ನಾಂದಿ, ಸೂತ್ರಧಾರ, ನಟಿ, ಅಂಕ, ವಿಷ್ಕಂಭಕ ಮೊದಲಾದವುಗಳಿರುವಂತೆ ದಶಾವತಾರ ಆಟಕ್ಕೆ ಚೌಕ (ವೇಷ ಕಟ್ಟುವ ಜಾಗ), ರಂಗಸ್ಥಳ, ಭಾಗವತ, ಗಣಪತಿ ಪೂಜೆ, ಸಭಾಪೂಜೆ, ಕೋಡಂಗಿ, ಕಟ್ಟುವೇಷ, ಸ್ತ್ರೀವೇಷ, ಒಡ್ಡೋಲಗ ಮೊದಲಾದ ಅಂಗಗಳಿರುತ್ತವೆ. ನಾಟಕಾಂತಂ ಸಾಹಿತ್ಯಂ—ಎಂಬ ನಾಟಕ ಪಕ್ಷಪಾತಿಗಳ ಮಾತಿಗನುಗುಣವಾಗಿ ನಾಟಕಗಳು ಅತ್ಯುತ್ತಮ ಸಾಹಿತ್ಯ ಕೃತಿಗಳೆನಿಸಿರುವುವಷ್ಟೆ. ಆದರೆ ನಮ್ಮ ಯಕ್ಷಗಾನ ನಾಟಕಗಳು, ಸಾಮಾನ್ಯರಿಗಾಗಿ ಸಾಮಾನ್ಯರೇ ಬರೆದ ಸುಲಭಗ್ರಾಹ್ಯವಾದ ಕೃಗಳಾಗಿವೆ. ಈ ದೃಷ್ಟಿಯಿಂದ ನೋಡ ಹೋದರೆ ನಾಟಕಗಳನ್ನು ಮಹಾಧ್ವ ಕೃತಿಗಳ "ಮಾರ್ಗ"ದ ಪಂಕ್ತಿಗೆ ಸೇರಿಸುತ್ತ, ಯಕ್ಷಗಾನ ನಾಟಕಗಳನ್ನು ದೇಸಿ ಕಬ್ಬಗಳ ಗುಂಪಿಗೆ ಸೇರಿಸಬೇಕಾಗುವುದು. 'ದೇಸಿ' ಎಂದರೆ ಪಾಮರ ಜನರ ಕೃತಿಯೆಂದು ತಿಳಿಯಬಾರದು. ಪಂಡಿತ–ಪಾಮರ ಉಭಯತ್ರರಿಗೂ ಉತ್ತಮವಾದ ದೇಸಿ ಕಬ್ಬವು ರಸಾನಂದವನ್ನೀಯಬಹುದು. ದೇಸಿ ಕಬ್ಬಗಳು ಜಾನಪದ ಸಾಹಿತ್ಯದ ಕಕ್ಷೆಯೊಳಗೆ ಬರಬಹುದಾದ್ದರಿಂದಲೇ ಅವುಗಳು ಬಹು ಬೇಗನೇ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗುವುವು. ಆದ್ದರಿಂದಲೇ ಯಕ್ಷಗಾನ ನಾಟಕಗಳು ನಾಟಕಗಳಿಗಿಂತ ಹೆಚ್ಚು ಲೋಕಪ್ರಿಯವಾಗಿವೆ.

ಯಕ್ಷಗಾನ ನಾಟಕದ ವೈಶಿಷ್ಟ್ಯ

ನಾಟಕ ಮತ್ತು ಯಕ್ಷಗಾನ ನಾಟಕಗಳಲ್ಲಿ ಕಂಡು ಬರುವ ಒಂದು ಮುಖ್ಯ ವ್ಯತ್ಯಾಸವೆಂದರೆ ಕುಣಿತ. ನಾಟಕದಲ್ಲಿ ರಾಜಾಸ್ಥಾನ, ವಿಲಾಸ ವರ್ಣನೆ ಮೊದಲಾದ ಸಂದರ್ಭಗಳಲ್ಲಿ ಮಾತ್ರವೇ ಉಚಿತವಾದ ನೃತ್ಯ ಕೇಳಿಯನ್ನು ಪ್ರದರ್ಶಿಸಲಾಗುವುದು. ಯಕ್ಷಗಾನ ನಾಟಕದಲ್ಲಿ ಪ್ರತಿಯೊಂದು ಪಾತ್ರವೂ ತನಗನ್ವಯಿಸುವ ಪದ್ಯಹಾಡಿಕೆಯಲ್ಲಿ ತಾಳಬದ್ಧವಾಗಿ ಕುಣಿಯುವ ಪದ್ಧತಿ ಇರುತ್ತದೆ. ಆದರೂ ಆಯಾ ಪಾತ್ರಗಳ ತಾರತಮ್ಯವನ್ನೂ ಗುಣಲಕ್ಷಣಗಳನ್ನೂ ಅರಿತುಕೊಂಡು, ಪಾತ್ರಧಾರಿಗಳು ಕುಣಿತವನ್ನು ಹಿತಮಿತಗೊಳಿಸಿಕೊಳ್ಳುವುದು ಅತ್ಯವಶ್ಯ.

ನಾಟಕದಲ್ಲಿ ಗಿರಿ, ನದಿ, ನಗರಾರಣ್ಯಗಳನ್ನು ಕಣ್ಮುಂದೆ ತಂದು ತೋರುವಂತಹ ತೆರೆಯ ದೃಶ್ಯ (ಸೀನೆರಿ)ಗಳಿರುತ್ತದಾದ್ದರಿಂದ, ಆ ಸನ್ನಿವೇಶಗಳಲ್ಲಿ ಪಾತ್ರಧಾರಿಯು ಕುಣಿತವಿಲ್ಲದೆ ಮೃಗಬೇಟೆ, ಅರಣ್ಯಗಮನ, ಪರ್ವತಾರೋಹಣ, ನದೀಯಾನ ಮೊದಲಾದುವುಗಳನ್ನು ಪರಿಣಾಮಕಾರಿಯಾಗಿ ನಟಿಸಿ ತೋರಿಸಲಿಕ್ಕೆ ಸಾಧ್ಯವಾಗುವುದು. ಆದರೆ ಯಾವ ಹಿನ್ನೆಲೆಯ ದೃಶ್ಯಫಲಕವೂ ಇಲ್ಲದ ಯಕ್ಷಗಾನ ನಾಟಕ ರಂಗಸ್ಥಳದಲ್ಲಿ, ಇಂತಹ ಸನ್ನಿವೇಶಗಳನ್ನೆಲ್ಲ ಕುಣಿತ, ಅರ್ಥ, ಆರ್ಭಟೆಗಳಿಂದಲೇ ತುಂಬಿಸಬೇಕಾಗುವುದು. ಈ ದೃಷ್ಟಿಯನ್ನಿಟ್ಟು ತೂಗಿ ನೋಡಿದಲ್ಲಿ, ಯಕ್ಷಗಾನ ನಾಟಕದಲ್ಲಿ ಪಾತ್ರವಹಿಸುವವರು ನಾಟಕದ ನಟರಿಗಿಂತ ಹೆಚ್ಚು ಚಾತುರ್ಯವುಳ್ಳವರೂ ಭರತನಾಟ್ಯದ ಪೂರ್ಣ ಪರಿಜ್ಞಾನವುಳ್ಳವರೂ ಆಗಿರಬೇಕೆಂದು ಹೇಳಬಹುದು.

ಚಲನಚಿತ್ರಗಳ ಈಗಿನ ಯುಗದಲ್ಲಿ ಯಕ್ಷಗಾನ ನಾಟಕ ಮತ್ತು ನಾಟಕಗಳನ್ನು ಕೇಳುವವರೇ ಇಲ್ಲವೆಂದು ಅಲ್ಲಲ್ಲಿ ಕೆಲವರು ನಿಟ್ಟುಸಿರು ಬಿಡುತ್ತಿರುವುದುಂಟು. ವಿಚಾರ ಮಾಡಿ ನೋಡಿದರೆ, ಅಷ್ಟೊಂದು ನಿರಾಶೆಪಡುವ ಕಾರಣವಿಲ್ಲವೆಂದು ಧೈರ್ಯ ತಾಳಬಹುದಾಗಿದೆ. ನಾಲ್ವತ್ತು ಕೋಟಿ ಜನಸಂಖ್ಯೆಯುಳ್ಳ ಈ ದೊಡ್ಡ ದೇಶದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಜನತೆ ಹಳ್ಳಿವಾಸಿಗಳಾಗಿರುವರು. ಚಲನಚಿತ್ರಗಳು ಸಣ್ಣ ದೊಡ್ಡ ಪೇಟೆಗಳಲ್ಲಿ ಮಾತ್ರವೇ ವಿಶೇಷ ಪ್ರಚಾರದಲ್ಲಿರುವುವು. ಹಾಗೂ ಕನ್ನಡ ಭಾಷೆಯ ಚಿತ್ರಗಳು ಕೇವಲ ಕೆಲವೇ ಇರುತ್ತವೆ. ವಿದ್ಯುದ್ಯಂತ್ರಗಳ ಸಹಾಯವಿಲ್ಲದೇ ಚಲನಚಿತ್ರ ಪ್ರದರ್ಶನ ಮಾಡಲಿಕ್ಕೆ ಬರುವುದಿಲ್ಲವಲ್ಲವೆ? ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ದೊರೆಯಲಿಕ್ಕೂ ಎಲ್ಲ ಹಳ್ಳಿಗಳಿಗೂ ಚಲನಚಿತ್ರ ಮಂದಿರದ ಏರ್ಪಾಡು ಮಾಡಲಿಕ್ಕೂ ಕೋಟ್ಯಂತರ ರೂಪಾಯಿ ವೆಚ್ಚಮಾಡಬೇಕಾಗುವುದು. ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಅಷ್ಟೊಂದು ದೊಡ್ಡ ವೆಚ್ಚ ಅಸಂಭವನೀಯವಾಗಿದೆ. ಒಂದು ವೇಳೆ, ಚಲನಚಿತ್ರ ಪ್ರಚಾರವು ಈಗಿನಕ್ಕಿಂತ ಇಮ್ಮಡಿ ಮುಮ್ಮಡಿ ಹೆಚ್ಚಿದರೂ ನಾಟಕ ಮತ್ತು ಯಕ್ಷಗಾನ ನಾಟಕದ ನಟರೂ ನಟಕೂಟಗಳೂ ಹೆದರುವ ಕಾರಣವಿರುವುದಿಲ್ಲ. ಸರ್ವ ಕ್ರಿಯೆಗಳಿಗೂ ವಿದ್ಯುದ್ಯಂತ್ರಗಳನ್ನೇ ಆಳಾಗಿ

ಮಾಡಿಕೊಂಡಿರುವ ಅಮೇರಿಕೆ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಾಟಕ ಮಂದಿರಗಳೂ ಗ್ರಾಮೀಣ (ದೇಸಿ)ನೃತ್ಯ ಗೀತಾ ವಿನೋದ ಮಂಡಳಿಗಳೂ ದಿನೇ ದಿನೇ ಹಿಗ್ಗುತ್ತಲೇ ಹೋಗಿವೆ. ಹಾಗಾಗಲಿಕ್ಕೆ, ಆ ಜನಾಂಗಗಳ ಕಲಾಭಿರುಚಿಯೇ ಕಾರಣವಾಗಿದೆ. ಯಾಂತ್ರಿಕದ ಅತಿರೇಕದಿಂದ ಬೇಸತ್ತಿರುವ ಆ ಜನಾಂಗಗಳು ತಮ್ಮಲ್ಲಿಯ ಹಳೆಗಾಲದ ನೃತ್ಯ, ಗೀತಾ, ಆಟ, ನಾಟಕ ಸಂಪ್ರದಾಯಗಳ ಸಾತ್ವಿಕಾನಂದದ ಕಡೆಗೆ ಮೊಗ ಮಾಡಿವೆ. ಪಶ್ಚಿಮ ದೇಶಗಳಷ್ಟು ಯಾಂತ್ರಿಕವಾಗಿ ಮುಂದರಿಯದಿರುವ ನಮ್ಮ ದೇಶದಲ್ಲಿ, ಸಾತ್ವಿಕಾನಂದ ದಾಯಿಯಾದ ನಮ್ಮ ಪ್ರಾಚೀನ ಕಲೆಗಳು ಯಾಂತ್ರಿಕ ಕೃತ್ರಿಮತೆಯಿಂದ ಗಾಸಿಗೊಳ್ಳುವವೆಂಬ ಭಯಕ್ಕೆ ಎಡೆಯೇ ಇರುವುದಿಲ್ಲ. ನಮ್ಮ ದೇಶದ, ನಮ್ಮ ಧರ್ಮದ, ನಮ್ಮ ಪ್ರಾಚೀನ ಕಲೆ, ಕೈಗಾರಿಕೆಗಳ ಸುದೈವ ದಿಂದೆಂಬಂತೆ ಮಹಾತ್ಮಾ ಗಾಂಧಿಯವರು ತಕ್ಕ ಕಾಲದಲ್ಲಿಯೇ ಅವತರಿಸಿ, ಮುಸುಕಾಗಿದ್ದ ನಮ್ಮ ಸ್ವದೇಶಾಭಿಮಾನ, ಸ್ವಕಲಾಭಿಮಾನ, ಸ್ವಧರ್ಮಾ ಭಿಮಾನ, ಸ್ವಜನಾಭಿಮಾನಗಳನ್ನು ಪುನರುಜ್ಜೀವನಗೊಳಿಸಿದರು. ಅದರ ಪರಿಣಾಮವಾಗಿಯೇ ಆಂಗ್ಲ ವಿದ್ಯಾಭ್ಯಾಸ ಮಾಡಿದ 'ಸುಶಿಕ್ಷಿತ'ರೆಂಬ ಪಟ್ಟಣಿಗರೂ ಯಾಂತ್ರಿಕೋದ್ಯಮಗಳಿಂದ ಭಂಡವಳ ಗಳಿಸಿದ ದೊಡ್ಡ ದೊಡ್ಡ ಭಂಡವಳದಾರರ ವರ್ಗದವರೂ ಯಕ್ಷಗಾನ, ಬಯಲಾಟ, ಜಾನಪದ ಗೀತಾ ನೃತ್ಯ ಮೊದಲಾದ ನಮ್ಮ ಅಚ್ಚ ಸ್ವದೇಶೀ ಕಲಾ ಸಂಸ್ಥೆಗಳ ಕಡೆಗೆ ಕೃಪಾದೃಷ್ಟಿ ಬೀರತೊಡಗಿದರು.

ಕಲಾವಿದರ ಸ್ಥಾನಮಾನ

ದೇಶವೀಗ ಪೂರ್ಣ ಸ್ವತಂತ್ರವಾಗಿದೆ; ಸಂಪೂರ್ಣ ಪ್ರಜಾ ರಾಜ್ಯದ ಹೊಸ್ತಿಲಲ್ಲಿ ಕಾಲಿಟ್ಟಿದೆ. ಜನ ಜೀವನದಲ್ಲಿಯೇ ಹುಟ್ಟಿ, ಬೆಳೆದು, ಅನಕ್ಷ ರಸ್ಥರು, ಅಶಿಕ್ಷಿತರು, ಹಳ್ಳಿಗರು, ಹಿಂದುಳಿದವರು ಎಂದು ಕಡೆಗಣಿಸಲ್ಪಟ್ಟ ವರು ಸಾಮಾನ್ಯ ಜನತೆಯಲ್ಲಿಯೇ ವಿಶೇಷ ಪ್ರಚಾರದಲ್ಲಿರುವ ನಮ್ಮ ಯಕ್ಷಗಾನ ನಾಟಕ ಕಲೆಗೆ ಭವ್ಯವಾದ ಭವಿಷ್ಯವಿದೆಯೆಂದು ನಾನು ಎದೆ ತಟ್ಟಿ ಹೇಳುತ್ತೇನೆ. ಜನ ಜಾಗೃತಿ ಹೆಚ್ಚುತ್ತ ಹೋದಂತೆಲ್ಲ ಯಕ್ಷಗಾನನಾಟ ಕಕ್ಕೆ ಸ್ಥಾನಮಾನ ಮರ್ಯಾದೆಗಳೂ ಹೆಚ್ಚುತ್ತ ಹೋಗುವವು.

ಕಲಾವಿದರೆಲ್ಲ ಕುತ್ಸಿತ ಶೀಲರೆಂಬ ತಾತ್ಸಾರಭಾವವು ಈಗಲೀಗ ಕಡಿಮೆಯಾಗುತ್ತಲಿರುವುದು ಈ ಕಲೆಯ ಏಳಿಗೆಗೆ ಶುಭೋದಯವಾಗಿದೆ. ಕೆಟ್ಟನುಡಿ, ಕೆಟ್ಟ ನಡೆ ಎಂಬ ಕುಶೀಲವು ಕಲಾವಿದರಿಗೆ ಮಾತ್ರವೇ ಗುತ್ತಿಗೆಯಾಗಿಲ್ಲ. ಈಪ್ರಪಂಚ ಜೀವನದಲ್ಲಿ ಒಳ್ಳೆಯದೂ ಕೆಟ್ಟದೂ ಹಗಲು ರಾತ್ರಿಗಳಂತೆ, ಸುಖದುಃಖಗಳಂತೆ ಸರಿಬೆರಿಕೆಯಾಗಿಯೇ ಇದೆ. ಕಲಾವಿದರಲ್ಲಿ ಕೆಟ್ಟ ನಡತೆಯುವರೂ ಇದ್ದಾರೆ. ಒಳ್ಳೆಯ ನಡತೆಯುವರೂ ಇದ್ದಾರೆ. ವ್ಯಾಪಾರಿಗಳಲ್ಲಿ, ಧನಿಕರಲ್ಲಿ, ಸರಕಾರಿ ನೌಕರರಲ್ಲಿ, ಧರ್ಮಬೋಧಕರೆಂಬ ಗುರುವರ್ಗದಲ್ಲಿ, ವಕೀಲರಲ್ಲಿ, ಡಾಕ್ಟರರಲ್ಲಿ, ಒಡೆಯ ಒಕ್ಕಲು ವರ್ಗಗಳಲ್ಲಿ—ಮುಂತಾದ ಎಲ್ಲ ವಿಧದ ಕಸಬು ಕೈಗಾರಿಕೆಯ ಜನವರ್ಗಗಳಲ್ಲಿಯೂ ಸುಶೀಲರೂ ಇದ್ದಾರೆ, ಕುಶೀಲರೂ ಇದ್ದಾರೆ. ಕುಶೀಲರಾದವರಿಗೆ ಕೆಟ್ಟ ಕೀರ್ತಿಯೂ, ಸುಶೀಲರಾದವರಿಗೆ ಸತ್ಕೀರ್ತಿಯೂ ತಪ್ಪಲಾರದು. ಕಲಾವಿದರ ವೈಯುಕ್ತಿಕ ದುಶ್ಶೀಲದಿಂದ ಕಲೆಗಾಗಲೀ ಕಲೆಯು ಕೊಡುವ ಆನಂದಕ್ಕಾಗಲೀ ಕೊರತೆಯಾಗದು. ಆಕಳು ಕಪ್ಪಾದರೆ ಹಾಲು ಕಪ್ಪಾದೀತೆ? ವೈದ್ಯನು ರೋಗಿಯಾದರೆ ಆತನು ಕೊಡುವ ಔಷಧಕ್ಕೆ ರೋಗವುಂಟೆ? ವಿವೇಕಿಗಳೂ ಉದಾರ ಚಿತ್ತರೂ ಪರಾದರ ಬುದ್ಧಿಯವರೂ ಆದ ರಸಿಕರು ಕಲಾವಿದನೊಬ್ಬನ ದುರ್ನಡತೆಯಿಂದಾಗಿ ಕಲೆಯನ್ನೇ ತಿರಸ್ಕರಿಸಲಾರರು.

ಚಾರಿತ್ರ್ಯ ಶುದ್ಧಿ

ಹೀಗೆ ಹೇಳಿದೆನೆಂದ ಮಾತ್ರಕ್ಕೆ, ಕಲಾವಿದನು ತನ್ನ ಸ್ವಂತ ಜೀವನವನ್ನು ಪರಿಶುದ್ಧವಾಗಿಟ್ಟುಕೊಳ್ಳಲಾರನೆಂದಾಗಲೀ ಇಟ್ಟುಕೊಳ್ಳಕೂಡದೆಂದಾಗಲೀ ಅರ್ಥವಲ್ಲ.

ಗ್ರಾಮ್ಯಧರ್ಮಪ್ರವೃತ್ತೇತು ಕಾಮಲೋಭ ವಶಂಗತೇ ।
ಈರ್ಷ್ಯಾಕ್ರೋಧಾಭಿಸಂಮೂಢೇಲೋಕೇ ಸುಖಿತದುಃಖಿತೇ!

ಅಂದರೆ, ಕಾಮ ಕ್ರೋಧ ಲೋಭ ಮೋಹಾದಿ ದುರ್ಗುಣದ ದುರ್ನಡತೆಯಿಂದ ದುಃಖಭಾಜನರಾದ ಜನರನ್ನು ಸನ್ಮಾರ್ಗಕ್ಕೆ ಹಚ್ಚಿ ಸುಖಿಗಳನ್ನಾಗಿ ಮಾಡುವುದೇ ನಾಟಕದ ಉದ್ದೇಶವೆಂದು ನಾಟ್ಯಶಾಸ್ತ್ರಕಾರ ಭರತ ಮುನಿಯು ಸ್ಪಷ್ಟವಾಗಿ ಸಾರಿದ್ದಾನೆ. ನಾಟಕವು ಲೋಕಜೀವನದ ಸರ್ವ ಭಾವಗಳನ್ನೂ

ಕನ್ನಡಿಯಂತೆ ಪ್ರತಿಬಿಂಬಿಸಿ ತೋರುವುದಾದ್ದರಿಂದ, ಆ ಕನ್ನಡಿಯು ಸ್ವಚ್ಛವಾದ್ದಷ್ಟಕ್ಕೂ ಪ್ರತಿಬಿಂಬವು ಸ್ಪಷ್ಟವಾಗಿ ಕಾಣುವುದು. ಕನ್ನಡಿಯಲ್ಲಿ ಕಾಣುವುದು ಪ್ರತಿಬಿಂಬವೇ ಹೊರತು ಮೂಲಬಿಂಬವಲ್ಲ ಎಂಬುದನ್ನು ಮರೆಯಲಾಗದು. ಹಾಗೆಯೇ, ನಾಟಕವೆಂಬುದು ಒಂದು ಘಟನೆಯ ನಟನೆಯೇ ಹೊರತು ಮೂಲ ಘಟನೆಯಲ್ಲ. ಅದೇ ರೀತಿ, ನಾಟಕದ ನಾಯಕ, ಪ್ರತಿನಾಯಕ ಮೊದಲಾದ ಪಾತ್ರಧಾರಿಗಳು ಸಾಮಾನ್ಯ ಮನುಷ್ಯರೇ ಹೊರತು ಮೂಲ ನಾಯಕ ಪ್ರತಿ ನಾಯಕರಲ್ಲ. ರಾಮ, ಧರ್ಮರಾಯ, ಭೀಷ್ಮ ಮೊದಲಾದ ವೇಷಗಳನ್ನು ಧರಿಸುವವರು ರಾಮ, ಧರ್ಮರಾಯ, ಭೀಷ್ಮರ ಸದ್ಗುಣ, ಸಚ್ಚರಿತೆಯುಳ್ಳವರಾಗಿರಬೇಕೆಂದು ಹಟ ಹಿಡಿದರೆ, ಕೌರವ ಕೀಚಕ, ಕಂಸ, ವಾಲಿ, ರಾವಣ ಮೊದಲಾದ ವೇಷಗಳನ್ನು ಧರಿಸುವವರು ಆ ದುರ್ಜನರ ದುಸ್ವಭಾವವುಳ್ಳವರೇ ಆಗಿರಬೇಕೆಂದು ಹಟ ಹಿಡಿಯಬೇಕಾಗುವುದು! ಹೀಗೆ ಆಯಾಪಾತ್ರಧಾರಿಗಳು ತಮ್ಮ ನಿತ್ಯ ಜೀವನದಲ್ಲಿ ಆಯಾಪಾತ್ರಗಳ ಗುಣ ನಡತೆಯುಳ್ಳವರೇ ಆಗಿರಬೇಕೆಂದು ಸೂಚಿಸುವುದು ಹಾಸ್ಯಾಸ್ಪದವಾದೀತು. ರಾಜನ ಪಾತ್ರವನ್ನು ರಾಜನೇ ಧರಿಸಬೇಕು, ಭಿಕ್ಷುಕನ ಪಾತ್ರವನ್ನು ಭಿಕ್ಷುಕನೇ ಧರಿಸಬೇಕು--ಎಂಬಷ್ಟರ ಮಟ್ಟಿನ ಆಭಾಸವಾಗುವುದೇ ಸರಿ. ಪಾತ್ರಧಾರಿಯಾದವನು ತನ್ನ ಪಾತ್ರದ ಮೂಲ ಗುಣ ನಡತೆಗಳನ್ನು ತಾನು ಪಾತ್ರಧಾರಿಯಾಗಿರುವ ವರೆಗೆ, ಅಂದರೆ ವೇಷ ಬಿಚ್ಚುವ ವರೆಗೆ ಸರಿಯಾಗಿ ನಟಿಸಿ ಇಲ್ಲವೆ ಪ್ರತಿಬಿಂಬಿಸಿ ತೋರಿಸ ಬಲ್ಲನೋ ಹೇಗೆ? ಎಂಬುದೇ ನಟನ ನಟನಾ ಸಾಮರ್ಥ್ಯವನ್ನಳೆಯುವ ಮಾನದಂಡವಾಗಿರಬೇಕು. ಆದ್ದರಿಂದ, ನಟರ ವೈಯಕ್ತಿಕ ನಡೆವಳಿ ನುಡಿವಳಿಗಳಿಂದ ಅವರ ನಾಟ್ಯ-ನಟನಾ ಶಕ್ತಿಯನ್ನು ತೂಗಿ ನೋಡಬಾರದು.

There is no rose but hath a thorn—ಮುಳ್ಳು ಇಲ್ಲದ ಗುಲಾಬಿಹೂವಿಲ್ಲವೆಂಬುದಾಗಿ ಆಂಗ್ಲ ನಾಟಕ ಕರ್ತೃಶ್ರೇಷ್ಠನಾದ ಶೇಕ್ಸಪಿಯರನು ಸಾರಿರುವುದನ್ನುಸ್ಮರಿಸಿಕೊಳ್ಳಬೇಕು. ಕಲೆ ಇಲ್ಲದ ಪೂರ್ಣ ಚಂದ್ರನೇ ಇಲ್ಲವಲ್ಲವೆ? "ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು। ಕಂದಿ ಕುಂದಿಹುದೊ ನಿರ್ಮಲವೊ? ॥" ಎಂಬ ನಮ್ಮ ಭರತೇಶ ವೈಭವ ಕಾರ ರತ್ನಾಕರ ಸಿದ್ಧನ ಮಾತನ್ನು ನೆನೆಯಬೇಕು.

ಈ ಕುರಿತು ಯಕ್ಷಗಾನ ನಾಟಕದ ‘ ಶಾಸ್ತ್ರ ’ ದಂತಿರುವ “ ಸಭಾ ಲಕ್ಷಣ ” ಗ್ರಂಥದಲ್ಲಿ, ಸೂತ್ರಧಾರನಂತಿರುವ ಭಾಗವತನು ಸಭಾ ಪೂಜೆಯ ಕೊನೆಗೆ ಹೇಳುವ ಮಾತು ಗಮನಾರ್ಹವಾಗಿದ್ದು ಅವನ್ನಿಲ್ಲಿ ನಿಮ್ಮ ಲಕ್ಷಕ್ಕೆ ತರಬಯಸುವೆನು—

“ ಇಂತೀ ತಾಳಮೇಳ ಶ್ರುತಿ ಗೆಜ್ಜೆಗಳಿಂದ ತುಂಬುರ ನಾರದರು ಮೇಳೈಸಿ ನಡೆಯುತ್ತಾ । ಅಂಧಕಾಸುರನಲ್ಲಿ ಹರ ನಾಟ್ಯವಾಡಿದಂತೆ, ಕಾಳೀಯ ಶಿರದಲ್ಲಿ ಹರಿ ನಾಟ್ಯವಾಡಿದಂತೆ, ದೇವೇಂದ್ರನ ಒಡ್ಡೋಲಗದಲ್ಲಿ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರಾಡಿದಂತೆ ನಾಟ್ಯಕ್ರಮ ವಿಧಾನಗಳಂ ತೋರ್ಪರೆನ್ನಳವಲ್ಲ. ನಮಸ್ತೇ ಚಕ್ಷುಷೇ, ನಮಸ್ತೇ ಜಗನ್ಮಯ, ನಮಸ್ತೇ ಶ್ರೀ ಸೂರ್ಯ ನಾರಾಯಣ–ಎಂತ ಸ್ತುತಿ ಮಾಡುವಂಥಾದ್ದು ಏತಕ್ಕಯ್ಯಾ ಎಂದರೆ, ತನ್ನ ವಿದ್ಯಾ ಬುದ್ಧಿ ಸಮೃದ್ಧವಾಗಬೇಕು, ದಾರಿದ್ರ್ಯ ಹತವಾಗಬೇಕು, ಪಾಪಗಳು ಲಯವಾಗಬೇಕಲ್ಲದೆ ಬೇರೆ ಮತ್ತೊಂದಿಲ್ಲ. ಕಬ್ಬು ಡೊಂಕಾದರೆ ಸಿಹಿ ಡೊಂಕಲ್ಲ. ಪುಷ್ಪ ಡೊಂಕಾದರೆ ಪರಿಮಳ ಡೊಂಕಲ್ಲ. ನಾವು ಸಣ್ಣವರಾಗಿದ್ದರೂ ನಾವು ಮಾಡುವಂಥಾ ಭಗವಂತನ ಸ್ತುತಿ ಸಣ್ಣದಲ್ಲ. ತಾಯಿಯ ಮುಂದೆ ಮಕ್ಕಳು ಕುಣಿದಾಡಿದ ಹಾಗೆ, ಗುರುಗಳ ಮುಂದೆ ಶಿಷ್ಯರು ಪದ್ಯ ಒಪ್ಪಿಸಿದ ಹಾಗೆ, ವಿನಾಯಕ ದೇವರ ಮುಂದೆ ಭಕ್ತರು ಟೊಂಕನಿಕ್ಕಿದ ಹಾಗೆ, ನಾವು ಹೇಳುವಲ್ಲಿ ಕೇಳುವಲ್ಲಿ ಅರೆವಾಕ್ಯ, ತೊದಲುನುಡಿ ಇದ್ದರೂ ನಾವು ಮಾಡುವಂಥಾದ್ದು ಶ್ರೀ ಲಕ್ಷ್ಮೀಕಾಂತನ ಸ್ತುತಿಯಲ್ಲದೆ ಬೇರೆ ಮತ್ತೊಂದಲ್ಲ. ಕಾಮಗೆ ರೂಪುದೋರುವಂತೆ, ಕಮಲಕ್ಕೆ ಬೆಳಗಾಗುವಂತೆ, ಇಂತೀ ಕಾಮಧೇನುವಿಗೆ ಕಲ್ಪವೃಕ್ಷಕ್ಕೆ ಸರಿಸಮಾನವಾಗಿರುವಂಥಾ ಸಭೆಗೂ ಸಭಾಪತಿಗಳಿಗೂ ಜಯ ಜಯಾ ದಿಗ್ವಿಜಯೋ ಭವತು.”

ಯಕ್ಷಗಾನದಲ್ಲಿ ಸುಧಾರಣೆ

ಯಕ್ಷಗಾನ ನಾಟಕವು ನಾಟಕವನ್ನು ಸಂಪೂರ್ಣ ಹೋಲುವ ಒಂದು ನಾಟಕ ಪ್ರಕಾರವೇ ಆಗಿದೆಯಾದರೂ ಅದು ರೂಢಿಯಲ್ಲಿರುವ ನಾಟಕವಲ್ಲ. ಅದನ್ನು ಸುಧಾರಿಸುವ ಆಪೇಕ್ಷೆಯುಳ್ಳ ಕೆಲವರು ಅವರ

ಮೂಲ ರೂಪವನ್ನೇ ವಿರೂಪಗೊಳಿಸುತ್ತಿದ್ದಾರೆಂದು ವಿಷಾದಿಸಬೇಕಾಗಿದೆ. ಯಕ್ಷಗಾನ ನಾಟಕವು ಸಂಪೂರ್ಣ ಗಾನ ನಾಟಕವೇ ಆಗಿದ್ದರೂ ಅದರ ಗಾಯನವು ನಾಟಕದ ಗಾಯನದಂತೆ ಶಾಸ್ತ್ರೀಯವಾಗಿ ಹಾಡುವ ಸಂಗೀತದ ಗಾಯನವಲ್ಲ. ಉದಾ:

ರಾಗ ಭೈರವಿ, ಅಷ್ಟತಾಳ.

ಎಲವೋ ಭೀಮನೆ ನೀಕೇಳು । ನಿನ್ನಯ ಜೀವ । ಉಳಿವ ಯತ್ನವನೆ ಪೇಳು ‖ ಕಳವಿನೊಳ್ ದ್ರೋಣನ ಗೆಲಿದ ಗರ್ವವನಿನ್ನು । ನಿಲಿಸುವೆನಿಂದಿನೊಳು ‖

ಈ ಭೈರವಿ ರಾಗವನ್ನು ಸಂಗೀತ ಶಾಸ್ತ್ರಪ್ರಕಾರ—

ಎಲ........ವೋ ಭೀ........ಮನೇ ನೀ........ಕೇಳು । ನಿ........ನ್ನಯ ಜೀವ........ । ಉ....ಳಿ....ವ ಯತ್ನವನೆ ಪೇಳು ।........ಎಂದು ಸಾವಧಾನವಾಗಿ ಹಾಡಿದರೆ ರಸಾಭಾಸವಾಗಿ, ಪಾತ್ರದ ಮೂಲ ಭಾವಕ್ಕೆ ಕುಂದುಂಟಾಗುವುದು. ಆದ್ದರಿಂದ, ಈ ಗಾಯನವು ಶಾಸ್ತ್ರೀಯವಾದ ರಾಗ ತಾಳ ಬದ್ಧವಾಗಿರುವುದಾದರೂ ಆಲಾಪನೆ, ಆರೋಹಣೆ, ಅವರೋಹಣೆಗಳಲ್ಲಿ ತನ್ನದೇ ಆದ ಒಂದು ವಿಶಿಷ್ಟ ಕ್ರಮವುಳ್ಳದ್ದಾಗಿದೆ. ಈಗಲೀಗ....

ಶಂಕರಾಭರಣ—ಮಟ್ಟೆ ತಾಳ

ಎಲವೊ ಪಾರ್ಥ ಕೇಳು ನೀನು । ಕಳವಿನಲ್ಲಿ ಸಿಂಧು ನೃಪನ । ಗೆಲಿದ ಪರಿಯಿದಲ್ಲ ನೋಡು । ನಿಲ್ಲು ಸಮರಕೆ

ಭಾರ್ಗವೇಂದ್ರನೇಕೆ ನಿನಗೆ । ವ್ಯಾಘ್ರನಂತೆ ಚಿತ್ರಸೇನ । ಬೋರ್ಗುಡಿಸಿ ಕುರುಪಶುವ । ಪಿಡಿಯುಲೆಲ್ಲಿಹೆ? ” ಎಂಬುದನ್ನು ಸಂಗೀತ ಸ್ವರ ಪ್ರಸ್ತಾರ ಮಾಡಿ ಹಾಡಿದರೆ, ಸುಧಾರಣೆ ಮಾಡಿದಂತೆಂದು ತೆಂಕಣದ ಕೆಲಣ ಭಾಗವತರು ಭಾವಿಸಿದಂತೆ ತೋರುತ್ತದೆ. ಹಾಡುವಿಕೆಯಲ್ಲಿ ಈ ರೀತಿ ಆಭಾಸಕರವಾದ ಸುಧಾರಣೆ ಮಾಡುವುದು ಎಷ್ಟೊಂದು ಹಾಸ್ಯಾಸ್ಪದವೋ ಅಷ್ಟೇ ಹಾಸ್ಯಾಸ್ಪದವಾದದ್ದು ಅರ್ಥ ಹೇಳುವ ಸುಧಾರಣೆಗಳಲ್ಲಿಯೂ, ವೇಷ ಕಟ್ಟುವ ಸುಧಾರಣೆಗಳಲ್ಲಿಯೂ ಕಂಡುಬರುತ್ತದೆ. ಯಕ್ಷಗಾನ ನಾಟಕದಲ್ಲಿ ವೇಷಕಟ್ಟುವ ಕ್ರಮವು, ನಾಟಕದ ವೇಷಭೂಷಣ ಕ್ರಮಕ್ಕಿಂತ ತೀರ ಭಿನ್ನವಾಗಿದೆಂಬುದನ್ನು ಮರೆಯಬಾರದು. ನಾನು ಕಂಡಿರುವ ಒಂದು ಸುಧಾರಕ ಪದ್ಧತಿಯ ವೇಷಭೂಷಣವನ್ನಷ್ಟೇ ತಮ್ಮ ಲಕ್ಷ್ಯಕ್ಕಿಲ್ಲಿ ತರಲಿಚ್ಛಿಸುವೆನು.

ಎರಡನೆಯ ವೇಷಧಾರಿ (ಪ್ರತಿನಾಯಕ—ದುರಂತ ನಾಯಕ) ಯಾದ ಹಿರಣ್ಯಾಕ್ಷ, ಕಂಸ, ರಾವಣ ಮೊದಲಾದ ವೇಷಗಳನ್ನು ಧರಿಸುವಾಗ ಕಿರೀಟವಿಲ್ಲದೇ ಬಣ್ಣ ಬಳಿದುಕೊಳ್ಳುವುದು ಈಗ ಬಳಕೆಗೆ ಬರತೊಡಗಿದೆ. ಬಣ್ಣ ಬಳಿದುಕೊಳ್ಳುವ ಕ್ರಮದಲ್ಲಿಯೂ ಈಗ ಕೆಲವೊಂದು ಹೆಚ್ಚು ಕಡಿಮೆ ಗಳು ತಲೆದೋರಿರುತ್ತವೆ. ಈ ಹೆಚ್ಚು ಕಡಿಮೆಗಳು ನಾಟಕ ಮಂಡಳಿಯ ವೇಷ ಕಟ್ಟುವ ಪದ್ಧತಿಯ ಅನುಕರಣವೆಂಬಂತಿದೆ. ವಿಸ್ತಾರವಾದ ಬೈಲಲ್ಲಿ ಹಲಸು ಮಾವಿನ ತುಂಡೆಗಟ್ಟಿದ ಸಾದಾ ರೀತಿಯ—

ಪಂಚಹಸ್ತೇನ ವಿಸ್ತೀರ್ಣಂ, ದಶಹಸ್ತೇನ ಉನ್ನತಂ ।
ಅರ್ಧಚಂದ್ರ ಪ್ರಮಾಣೇನ ತಿಷ್ಠತೇ ರಂಗಮಂಟಪಂ ॥

ರಂಗಸ್ಥಳದಲ್ಲಿ, ನಮ್ಮ ಹಳೆಗಾಲದ ವೇಷಭೂಷಣ ಪ್ರಸಾಧನಗಳೇ ಹೆಚ್ಚು ಒಪ್ಪುವುವು. ಅವುಗಳಿಂದ ರಸಿಕ ನೋಟಕರಲ್ಲಿ ತಲೆದೋರುವ ರಸಾನಂದವು ಮತ್ತಷ್ಟು ಪರಿಣಾಮಕಾರಿಯಾಗಿರುತ್ತದೆ. ಯಕ್ಷಗಾನ ನಾಟಕ ವನ್ನು ಸುಧಾರಿಸಿ ನಾಟಕದಂತೆ ಮಾಡಲು ಆತುರಪಟ್ಟರೆ, ಯಕ್ಷಗಾನ ನಾಟಕದ ಜೀವಾಳದಂತಿರುವ ಕುಣಿತವನ್ನು ಸಂಪೂರ್ಣವಾಗಿ ವರ್ಜಿಸ ಬೇಕಾದೀತು. ಇಂತಹ ಸುಧಾರಣೆಯಿಂದ ಭರತನಾಟ್ಯ ಶಾಸ್ತ್ರದಲ್ಲುಕ್ತವಾದ ವಿವಿಧ ಹಸ್ತಮುದ್ರಿಕೆ, ಪದಗತಿ, ಕುಣಿತ ಮಣಿತದ ಭಂಗಿಗಳನ್ನು ಮೂಲೆ ಗುಂಪು ಮಾಡಿದಂತಾಗುವುದು; ಅರ್ಥಾತ್ ಈ ಕಲೆಯನ್ನೇ ಕೊಂದಂತಾಗು ವುದು; ಅಥವಾ ಅರೆಜೀವಗೊಳಿಸಿದಂತಾಗುವುದು.

ಪಟ್ಟಣಗಳಲ್ಲಿ ಯಕ್ಷಗಾನ ನಾಟಕಗಳನ್ನು ಆಡಬೇಕೆಂದು ಬಯಸು ವವರು ನಾಟಕಗೃಹ (ಥಿಯೇಟರ) ಗಳಲ್ಲಿಯೇ ತಮ್ಮ ಆಟ ಆಡಬೇಕಾಗು ವುದು. ಆದರೂ, ಅಲ್ಲಿ ತಮ್ಮ ರಂಗಸ್ಥಳವನ್ನು ಪ್ರಾಚೀನ ಸಂಪ್ರದಾಯ ದಂತೆಯೇ ಕಟ್ಟಿಕೊಳ್ಳಲು ಮರೆಯಬಾರದೆಂದು ಸೂಚಿಸುತ್ತೇನೆ. ವೇಷಗಳ ರಸಭಾವೋಚಿತವಾದ ಪ್ರಕಾರದ ವಿದ್ಯುದ್ದೀಪಗಳನ್ನು ಏರ್ಪಡಿಸಿಕೊಳ್ಳು ವುದು ಕೆಲವೆಡೆ ಕಂಡುಬರುತ್ತಿದೆ. ಹೀಗೆ ಆಯಾ ಭಾವಕ್ಕುಚಿತವಾದ ವರ್ಣ ದೀಪಗಳನ್ನಿಟ್ಟುಕೊಳ್ಳುವ ಪದ್ಧತಿಯು ತಪ್ಪಲ್ಲವಾದರೂ ಅದರ ಬಗೆಗೆ ತಕ್ಕ ಪರಿಜ್ಞಾನವಿರಬೇಕಾದುದು ಅತ್ಯಗತ್ಯವೆನ್ನಬಹುದು. ರಸರತ್ನಾಕರ ಕರ್ತೃವಾದ ಕವಿ ಸಾಳ್ವನು ತನ್ನ ಗ್ರಂಥದ ೧೫ನೆಯ ಸೂತ್ರದಲ್ಲಿ—

ಹರಿತಂ ಶೃಂಗಾರವರ್ಣಂ, ಸಿತರುಚಿ ಹಸಿ
ತಂ, ರೌದ್ರಮಾರಕ್ತಯುಕ್ತಂ ।
ಕರುಣಂ ಶ್ಯಾಮಪ್ರಭಾಂಗಂ, ಪ್ರಚುರ ರುಚಿರ
ಗೌರಂ ಸುವೀರಂ, ಭಯಂ-ಭಾ॥
ಸುರ ಧೂಮಾಕಾರಮತ್ಯದ್ಭುತಮದು ಕನಕಂ
ಕೃಷ್ಣ ಶುಭ್ರಾನ್ವಿತಂ ವಿ-।
ಸ್ತರದಿಂ ಭೀಭತ್ಸುವೆಂಬೀ ಪರಿಯನರಿಗೆ
ತನ್ಮಾರ್ಗದೊಳ್ ಸತ್ಕವೀಂದ್ರರ್ ॥

(ಶೃಂಗಾರಕ್ಕೆ ಹಸುರು ಬಣ್ಣ, ಹಾಸ್ಯಕ್ಕೆ ಬಿಳಿದು ಬಣ್ಣ, ರೌದ್ರಕ್ಕೆ ರಕ್ತವರ್ಣ, ಕರುಣಕ್ಕೆ ಅಚ್ಚ ನೀಲಿ, ವೀರಕ್ಕೆ ಬಿಳಿಗೆಂಪು, ಭಯಕ್ಕೆ ಹೊಗೆಯ ಬಣ್ಣ, ಅದ್ಭುತಕ್ಕೆ ಬಂಗಾರ (ಹಳದಿ)ದ ಬಣ್ಣ, ಭೀಭತ್ಸಕ್ಕೆ ಅಚ್ಚ ಕಪ್ಪು)

ಎಂಬುದಾಗಿ ಸೂಚಿಸಿರುವುದನ್ನು ಗಮನಿಸಬೇಕು.

ಯಕ್ಷಗಾನ ನಾಟಕದಲ್ಲಿ ರಸಪೋಷಕವಾದ ಮತ್ತು ಮೂಲ ಕಲೆಯ ವಿಕಾಸ ಪ್ರಕಾಶಕ್ಕೆ ಹಾನಿ ತಟ್ಟದ ಸುಧಾರಣೆಗಳು ಹೇಗೆ ಆವಶ್ಯಕವೊ ಹಾಗೆ, ತಾಳಮದ್ದಳೆ ಎಂಬ ಬೈಟಕ್ಕುಗಳಲ್ಲಿಯೂ ಯೋಗ್ಯವಾದ ಸುಧಾರಣೆಗಳಾಗುವುದು ಅಗತ್ಯವೇ ಸರಿ. ಕೇವಲ ಪಾಂಡಿತ್ಯ ಪ್ರದರ್ಶನದ ದೃಷ್ಟಿಯಿಂದಲೇ ಅರ್ಥಗಾರರು ಉದ್ದುದ್ದ ಭಾಷಣದಂತಹ 'ಸಂಭಾಷಣೆ' ಮಾಡುವುದೂ ಇದಿರು ವೇಷಧಾರಿಯ ಬಾಯಿ ಕಟ್ಟಿಸುವೆನೆಂಬ ಛಲದಿಂದ ಅಪ್ರಸ್ತುತವಾದ ಹಾಗೂ ಪದ್ಯದಲ್ಲಿಲ್ಲದ ಅರ್ಥ ವಿವರಣೆಗಳನ್ನು ಮಾಡುವುದೂ ಖಂಡನೀಯವಾಗಿದೆ. ಇಂತಹ ವರ್ತನೆಯಿಂದ ತಾಳಮದ್ದಲೆಯ ಮೂಲೋದ್ದೇಶಕ್ಕೇ ಧಕ್ಕೆಯುಂಟಾಗಿ, ಇದೊಂದು ವಿಧದ ಸ್ಪರ್ಧಾರಂಗವಾಗಿ ಪರಿಣಮಿಸುವುದು. ಆನಂದವೆಂಬ ಅಮೃತವನ್ನು ಪಡೆಯ ಹೋಗಿ, ರಸದ ಬದಲು ವಿರಸ ಹೆಚ್ಚಿ, ಹಾಲಾಹಲವನ್ನು ಗಳಿಸಿದಂತಾಗುವುದು. ಅರ್ಥಗಾರರು ತಮ್ಮ ಪಾಂಡಿತ್ಯವನ್ನೂ ಯೋಗ್ಯತೆಯನ್ನೂ ತೋರಿಸುವುದು ಇಂತಹ ನೀರಸವಾದ ಹಾಗೂ ಈರ್ಷ್ಯಾಭರಿತವಾದ ವರ್ತನೆಗಳಿಂದಲ್ಲವೆಂಬುದನ್ನು ಸರ್ವಥಾ ಮರೆಯಬಾರದು.

ಪಾಂಡಿತ್ಯ ಪ್ರದರ್ಶನಕ್ಕೆ ಮನಸೋತು ರಾಮಾಯಣ ಕಾಲದ ಅತಿಕಾಯ, ವಿಭೀಷಣ, ವಾಲಿ ಮೊದಲಾದ ವೇಷ ಮತ್ತು ಅರ್ಥಧಾರಿಗಳು ಕೃಷ್ಣಾವತಾರ ಕಾಲದ ಕೃಷ್ಣಗೀತಾ ಶ್ಲೋಕಗಳನ್ನು ಆಧಾರವಾಗಿ ಎತ್ತಿ ಹೇಳುವವರು ಹಲವರಿದ್ದಾರೆ. ಅಂತಹರ ಪಾಂಡಿತ್ಯವು "ದ್ರೌಪದಿಯನ್ನು ಕದ್ದೊಯ್ದು ಕಿಷ್ಕಿಂಧೆಯಲ್ಲಿಟ್ಟುಕೊಂಡ ರಾವಣನಂತೆ, ನಾನೀ ವಸಂತಸೇನೆಯನ್ನೊಯ್ದು ನನ್ನ ಅರಮನೆಯಲ್ಲಿಟ್ಟುಕೊಳ್ಳುವೆನು" ಎಂದು ಬಡಬಡಿಸುವ ಭಾಸಕೃತ ವಸಂತಸೇನಾ ನಾಟಕದ ಶಕಾರನ ಪಾಂಡಿತ್ಯದಂತೆ ಹಾಸ್ಯಾಸ್ಪದವಾದೀತು.

ಸುಧಾರಣೆಯ ರೀತಿ ನೀತಿ

ಆದ್ದರಿಂದ, ಈ ಉತ್ತಮ ಕಲೆಯ ಏಳಿಗೆಯನ್ನು ಬಯಸುವವರು ಹಳೆಯದೆಲ್ಲ ತ್ಯಾಜ್ಯ, ಹೊಸದೆಲ್ಲ ಸ್ವೀಕಾರ ಯೋಗ್ಯ ಎಂಬ ಏಕಪಕ್ಷೀಯವಾದ ವಿಕೃತದೃಷ್ಟಿ ಇಟ್ಟುಕೊಳ್ಳದೆ ವೈಯಕ್ತಿಕವಾದ ಡಂಭಾಹಂಕಾರಕ್ಕೆ ಬಲಿಬೀಳದೆ, ನಿರ್ಮಲಚಿತ್ತದಿಂದಲೂ ಸರ್ವ ಪ್ರೇಮಭಾವದಿಂದಲೂ ವಿಚಾರ ವಿಮರ್ಶೆ ಮಾಡಿ ತಕ್ಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುವೆನು.

ದಶಾವತಾರ ಲೀಲಾ ವಿನೋದ ಕಥಾಸಾಗರವಾದ ಭಾರತ ರಾಮಾಯಣಗಳು ಚಿತ್ರಿಸುತ್ತ ಬಂದಿರುವ ಉದಾತ್ತ ತತ್ವಗಳು ಎಂದೆಂದಿಗೂ ಹೊಸದಾಗಿಯೇ ಇರುತ್ತವೆ. ಸತ್ಯಂ ವದ, ಧರ್ಮಂ ಚರ—ಸತ್ಯವನ್ನು ಹೇಳು, ನೀತಿಯಿಂದ ನಡೆ–ಎಂಬೀ ಮಾತು ಬಹುಕಾಲದ ಹಿಂದೆ ಹೇಳಲ್ಪಟ್ಟಿತೆಂಬ ಕಾರಣದಿಂದ, ಅದು ಹೊಸತಲ್ಲವೆಂದು ಯಾರೂ ಅದನ್ನು ತ್ಯಜಿಸಲಾರರಲ್ಲವೆ? ಈ ಸತ್ಯ ಧರ್ಮವು ಜನಸಾಮಾನ್ಯರ ನಾಳ ನಾಳಗಳಲ್ಲಿ ರಕ್ತಗತವಾಗಿ ಹರಿದಾಡುತ್ತಿದೆ. ರಾಮ, ಕೃಷ್ಣ, ಸೀತೆ, ದ್ರೌಪದಿ, ಕರ್ಣ, ಭೀಷ್ಮ, ದ್ರೋಣ ಮೊದಲಾದ ದಿವ್ಯಮಾನವ ವ್ಯಕ್ತಿಗಳ ಹೆಸರೂ, ವೇಷಗಳೂ ಕಿವಿಗೆ ಕೇಳುತ್ತಲೇ, ಕಣ್ಮುಂದೆ ಬರುತ್ತಲೇ ಎಂತಹ ಪವಿತ್ರ ಗೌರವ ಭಾವವು ಹೃದಯದಲ್ಲಿ ಹುಟ್ಟುವುದೋ ಅಂತಹ ಭಾವವು ಆಧುನಿಕ ಮಹಾಪುರುಷರ ಹೆಸರು ವೇಷಗಳ ಶ್ರವಣ ದರ್ಶನಗಳಿಂದ ಹುಟ್ಟಲಾರದೆಂದು ನಂಬುವವರಲ್ಲಿ ನಾನೊಬ್ಬನಾಗಿರುವೆನು. ಆಧುನಿಕ ರಾಜಕೀಯ–

ಸಾಮಾಜಿಕ ಘಟನೆಗಳ ಪ್ರದರ್ಶನಕ್ಕೆ ನಮ್ಮ ಯಕ್ಷಗಾನ ನಾಟಕ ರಂಗಸ್ಥ ಳಕ್ಕಿಂತ ನಾಟಕ ರಂಗಭೂಮಿಯೇ ಹೆಚ್ಚು ವಾಸ್ತವಿಕವಾದೀತೆಂದು ನನ್ನ ನಮ್ರ ಭಾವನೆ.

ಕಲಾಭ್ಯಾಸ ಕೇಂದ್ರ

ಉತ್ತರ ಕರ್ನಾಟಕ ಜಿಲ್ಲೆಗಳೆನಿಸಿದ ಬೆಳಗಾಂವಿ, ಧಾರವಾಡ, ವಿಜಾ ಪುರ ಭಾಗಗಳಲ್ಲಿಯೂ, ತೆಲುಗರ ಸೀಮೆಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಯಲ್ಲಿಯೂ ಮೈಸೂರ ಸಂಸ್ಥಾನದಲ್ಲಿಯೂ ದಶಾವತಾರದ ನಾಟಕ ಮೇಳಗಳು ಇರುತ್ತವಾದರೂ, ಅವು ನಮ್ಮ ಯಕ್ಷಗಾನ ನಾಟಕ ಮೇಳಗಳಷ್ಟು ಪರಿಷ್ಕೃತವಾಗಿರುವುದಿಲ್ಲವೆಂಬುದನ್ನು ನಾನು ಪ್ರತ್ಯಕ್ಷವಾಗಿ ಮನಗಂಡಿದ್ದೇನೆ. ಅವುಗಳ ವೇಷ, ಅರ್ಥ, ಕುಣಿತಗಳು ನಮ್ಮ ಮೇಳ ಗಳಲ್ಲಿರುವಂತಿರುವುದಿಲ್ಲ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಆಡುಮಾತುಗೂ ನುಡಿಗಟ್ಟುಗಳೂ ಬಳಕೆಯಲ್ಲಿರುತ್ತವಲ್ಲವೆ? ಇದನ್ನು ಲಕ್ಷಿಸಿಯೇ ನೃಪತುಂಗನು—

“ ಕನ್ನಡಂಗಳೊಳೆಂದುಂ, ವಾಸುಗಿಯುಂ ಮರಿಯಲಾರದೆ
ಬೇಸರಗುಂ ದೇಶಿ ಬೇರೆವೇರಪ್ಪುದರಿಂ ! ”

ಎಂದು ವಕ್ರೋಕ್ತಿಯ ಸತ್ಯವಾಡಿರುವನು. ಬಿಜಾಪುರದತ್ತಣವನೊಬ್ಬನು ಮಂಗಳೂರು ಕಡೆಯುವನೊಬ್ಬನನ್ನು ಕಂಡು—

“ ಎಲಾ ಇವರ ! ಈ ಮಂದಿ ಏಸ್ ಜಳಾಜಳಾ ಐತಿ;
“ ರಗಡ್ ಶ್ಯಾಣ್ಯಾರದಾರಪ್ಪೋ ”

ಎಂದು ಹೇಳಿದರೆ, ಮಂಗಳೂರು ಕಡೆಯ ಹಳ್ಳಿಗನು—

ಇದಕೇನ್ ತಲೆ ಕೆಟ್ಟೇತಾ ಕಾಂತೆ ! ಜಳಜಳಾ ಅಂಬ್ರ,
ರಗಡ್ ಅಂಬ್ರ, ಶ್ಯಾಣ್ಯಾ ಗೀಣ್ಯಾ ಅಂಬ್ರ. ಇವರ
ತಳ್ಳಿ ಬ್ಯಾಡ ಮಾರಾಯ್ರೆ ! ”

ಎಂದು ಹೇಳುವುದೇ ಸರಿ. ದೇಸಿಯ ಈ ಅನಾಹುತಕರವಾದ ಅನಂತತೆ ಯನ್ನು ಬಗೆದೇ ಮಹಾಕೃತಿಗಳನ್ನೆಲ್ಲ ‘ ಮಾರ್ಗ ’ದಲ್ಲಿಯೇ ರಚಿಸಬೇ ಕೆಂದು ಪುರಾತನ ಅಲಂಕಾರಿಕರು ನಿರ್ದೇಶಿಸಿ ಬಿಟ್ಟರು. ಕಾರಂತರ ಪ್ರಹ ಸನಗಳ ಮಾತುಗಳ ಹಾಸ್ಯದ ಸವಿಯನ್ನು ಉತ್ತರ ಕರ್ನಾಟಕದವರು

(ಅರಿಯಲು) ಅನುಭವಿಸಲು ಎಷ್ಟು ಕಷ್ಟವಾದೀತೋ ಅಷ್ಟೇ ಕಷ್ಟ ಮಂಗಳೂರು ಕಾರವಾರ ಜಿಲ್ಲೆಯವರಿಗೆ ಜಾಗಿರದಾರರ ಕೃತಿಗಳ ರಸವನ್ನು ಅರಿಯಲು ಆದೀತು. ಈ ಮಾತು, ವಿವಿಧ ಭಾಗಗಳ 'ದೇಸೀ' ನಾಟಕಗಳಾದ ಯಕ್ಷಗಾನ ನಾಟಕಗಳಿಗೂ ಅನ್ವಯಿಸುವುದೆನ್ನಬಹುದು. ಇಂತಹ ಪರಿಸ್ಥಿತಿಯನ್ನು ಕ್ರಮಶಃವಾಗಿಯಾದರೂ ಹೋಗಲಾಡಿಸುವಂತೆ ಮಧ್ಯಸ್ಥ ಮಾರ್ಗವೊಂದನ್ನು ಕಂಡು ಹಿಡಿಯಬೇಕು. ಅದರ ಸಲುವಾಗಿಯೇ ಅಖಿಲ ಕರ್ನಾಟಕ ಯಕ್ಷಗಾನ ನಾಟಕ ಕಲಾಕೇಂದ್ರವೊಂದನ್ನು ಅಸ್ತಿತ್ವಕ್ಕೆ ತರಬೇಕು. ಒಂದು ವೇಳೆ ಅದು ದೂರದ ಸಿದ್ಧಿಯಾಗಿ ಕಂಡರೂ, ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಮಟ್ಟಿಗಾದರೂ ನೀವೊಂದು ಇಂತಹ ಕಲಾಕೇಂದ್ರವನ್ನು ಶೀಘ್ರದಲ್ಲಿಯೇ ಸ್ಥಾಪಿಸಬೇಕು. ಕೇರಳೀಯರು ಈ ವಿಷಯದಲ್ಲಿ ತಮ್ಮ ಮಹಾಕವಿ ವಾಲತ್ತೋಳ ನಾರಾಯಣ ಮೇನನರ ನೇತೃತ್ವದಲ್ಲಿ ಈಗಾಗಲೇ ಸಾಕಷ್ಟು ಮುಂದೆ ಹೋಗಿರುವರು. ಬಂಗಾಲದಲ್ಲಿ ಕವಿಸಮ್ರಾಟ್ ಟಾಗೋರರು ಪ್ರಾಚೀನ ನೃತ್ಯ ಗಾನ ಕಲಾ ಸಂಪ್ರದಾಯಗಳ ಪುನರುಜ್ಜೀವನ ಕಾರ್ಯವನ್ನು ಸಂಘಟಿಸಿ ಈಗಾಗಲೇ ೨೦ ವರ್ಷಗಳು ದಾಟಿವೆ. ಪೂರ್ಣ ಸ್ವರಾಜ್ಯ ಮತ್ತು ಪ್ರಾಂತೀಕರಣದ ಈಗಿನ ವೇಳೆಯಲ್ಲಿ, ಇಂತಹ ಕಲಾಕೇಂದ್ರವನ್ನು ಸಂಘಟಿಸಲು ಸರಕಾರದಿಂದ ತಕ್ಕ ಭೂ ಧನ ಸಹಾಯ ದೊರತೇ ದೊರೆವುದೆಂದು ಧಾರಾಳವಾಗಿ ಹೇಳಬಹುದು.

ಮಾನ್ಯ ಮಿತ್ರರೆ, ಕಲಾಭಿಮಾನಿಗಳೆ, ನಿಮ್ಮ ಪರಿಷತ್ತು ಅಂತಹ ಚಿರಸ್ಥಾಯಿಯಾದ ಸಂಸ್ಥೆಯೊಂದನ್ನು ಸ್ಥಾಪಿಸಿದಲ್ಲಿ ನಿಮಗೂ, ನನಗೂ, ಪುಣ್ಯಪ್ರದವಾದ ಈ ಪ್ರಾಚೀನ ಕಲಾ ಸಂಪ್ರದಾಯಕ್ಕೂ ಒಂದು ದಿವ್ಯ ಸ್ಮಾರಕವಾದಂತಾಗುವುದು. ಆನಂದ ದಾನಕ್ಕಿಂತ ದೊಡ್ಡ ದಾನವಿಲ್ಲ ಆನಂದ ಪ್ರಾಪ್ತಿಗಿಂತ ಹೆಚ್ಚಿನ ಮೋಕ್ಷವಿಲ್ಲ. ಅಂತಹ ಆನಂದವನ್ನು ಹಬ್ಬಿಸುವ ಈ ಮಹತ್ಕಲೆಯ ಸಮಾರಾಧನೆಗಾಗಿ ನೆರೆದಿರುವ ನಿಮಗೆಲ್ಲರಿಗೂ ಇದನ್ನು ಏರ್ಪಡಿಸಿದ ಸ್ವಾಗತ ಸಮಿತಿಯವರಿಗೂ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸುವೆನು.

ಸತ್ಯಾಚಾರ ಸಭಾ ಗುಣೋಜ್ವಲ ಸಭಾ ಸದ್ಧರ್ಮಕೀರ್ತಿಸ್ಸಭಾ ।
ವೇದಾಲಂಕೃತ ಶಾಸ್ತ್ರಪೂರಿತ ವಿಖ್ಯಾತ ವೀರಾ ಸಭಾ ॥

ರಾಜದ್ರಾಜಕುಮಾರ ಶೋಭಿತ ಸಭಾ ರಾಜಪ್ರಕಾಂತಿಸ್ಸಭಾ ।
ಸಂಗೀತಾದಿಲಸತ್ಸಭಾ ಕವಿ ಸಭಾ ಸಾಮ್ರಾಜ್ಯ ಲಕ್ಷ್ಮೀ ಸಭಾ ॥
ಸಭಾ ಕಲ್ಪತರುಂ ವಂದೇ ಋಂಜ್ಮೂಲಂ ಸಾಮಶಾಖಿನಾಂ
ಷಡಂಗ ಕುಸುಮೋಶ್ಪತಂ ತತ್ವಜ್ಞಾನ ಫಲೋದಯಂ ॥
ಮುಖತಃ ಪೂರ್ಣಚಂದ್ರಶ್ರೀಃ ನೇತ್ರ ಪದ್ಮದಳಾಕೃತಿಃ ।
ಕೋಟಿಸೂರ್ಯಪ್ರಕಾಶಾಢ್ಯಾ ಸಭಾ ಸರ್ವಾಭಿ ವಂದ್ಯತೆ ॥

ಇಂದಿನ ನಮ್ಮ ಸಾಹಿತ್ಯ ವಿಮರ್ಶೆ

"ವಾಚಿಪುಣ್ಯಾಪುಣ್ಯಹೇತವಃ"
—ಭವಭೂತಿ.

ಸರ್ವಜ್ಞ ಕವಿಯ ಸಿಡಿಲ್ನುಡಿಗಳ ಸಂಚಯದೊಳಗಿನ ಒಂದು ನುಡಿ ಹೀಗಿದೆ:—

" ಎಲ್ಲ ಬಲ್ಲವರಿಲ್ಲ; ಬಲ್ಲವರು ಬಹಳಿಲ್ಲ;
ಬಲ್ಲಿದರು ಇದ್ದು ಬಲವಿಲ್ಲ; ಸಾಹಿತ್ಯ-
ವೆಲ್ಲವರಿಗಿಲ್ಲ! ಸರ್ವಜ್ಞ "

ಸರ್ವಜ್ಞನಾದ ಪರಮಾತ್ಮನು "ಹೃದಿಸ್ಥಿತ" ನಾಗಿದ್ದರೂ, ಮೋಹದ ಮಬ್ಬುಗಣ್ಣುಳ್ಳವರಾದ್ದರಿಂದ ಸರ್ವಜ್ಞರಾಗಿಲ್ಲದ ನಮಗೆ ಈ ಮಾತು ಅನ್ವಯಿಸುತ್ತದೆ. ಸರ್ವಜ್ಞತ್ವದ ಮಾತಂತಿರಲಿ, ಕೆಲವ-ಜ್ಞತ್ವವಾದರೂ ಉಳ್ಳಜನ ಬಹಳಿಲ್ಲ. ನೂರಕ್ಕೆ ೮೫ ಮಂದಿ ನಿರಕ್ಷರಿಗಳಾಗಿರುವ ನಮ್ಮ ನಾಡಿನಲ್ಲಿ ಬಲ್ಲವರು ಬಹಳಿಲ್ಲವೆಂದು ಬೇರೆ ಹೇಳಬೇಕಾಗಿಯೇ ಇಲ್ಲ. 'ದೊಣ್ಣೆಯೇ ದೊಡ್ಡಪ್ಪ'ನಾಗಿರುವುದರಿಂದ, "ಬಲ್ಲಿದರು ಇದ್ದೂ ಬಲವಿಲ್ಲ"ದವರಾಗಿದ್ದಾರೆ. "ಸಾಹಿತ್ಯವೆಲ್ಲವರಿಗಿಲ್ಲ"ದುದರಿಂದಲೇ. ದೊಣ್ಣೆಯೇ ದೊಡ್ಡಪ್ಪನಾಗಿ ಜಗತ್ತಿನ ಆಗುಹೋಗುಗಳನ್ನೆಲ್ಲ ತಾನೇ ತೂಗುತ್ತಿದೆ!

ಬಲ್ಲಿದರೆಂಬವರಲ್ಲಿಯೂ ವರ್ಗೀಕರಣ ಅವಶ್ಯವಾಗಿದೆ. ಓದುಬರೆಹಗಳ ಸಂಗ್ರಹದಿಂದಲೇ "ಬಲ್ಲಿದ"ರೆನಿಸಿಕೊಂಡವರು ಹೇರಳವಾಗಿದ್ದಾರೆ. ಓದು—ಬರೆಹ ಸಾಹಿತ್ಯ ಮಂದಿರದ ಹೆಬ್ಬಾಗಿಲು. ಹೆಬ್ಬಾಗಿಲಲ್ಲೇ ದ್ವಾರಪಾಲಕರಂತೆ ಕೂತು, ಕೊನೆವರೆಗೂ ಅಲ್ಲೇ ತಂಗಿದರೆ, ಮಂದಿರದೊಳಗೆ ಸಾಲಂಕೃತಳಾಗಿ, ರಸಸ್ಯಂದಿಯಾಗಿ ಆವಿರ್ಭವಿಸಿರುವ ದೇವಿಯ ದರ್ಶನ ದೊರೆಯಲಾರದು. "ದೇವಿಯ ದರ್ಶನದ ಅಗತ್ಯ ನಮಗಿಲ್ಲ;

ದಂಡಧರನಾಗಿ ಬಾಗಿಲಲ್ಲಿ ಕೂತು ಬರಹೋಗುವವರ ಗಮನವನ್ನು ಸೆಳೆದರೆ ಸಾಕು; ಕೃತಾರ್ಥರಾದೆವು " ಎಂದು ತಿಳಿವ 'ವಿಷಯ ಸಂಗ್ರಹದ' ಬಲ್ಲಿದರೇ ಬಹಳವೆಂಬುದನ್ನು ಮರೆಯಬಾರದು. ಸಾಧನವನ್ನೇ ಸಾಧ್ಯವೆಂದು ಭ್ರಮಿಸುವ ಈ ಬಲ್ಲಿದರ ಬಳಗವು ಒಂದು ದೊಡ್ಡ " ಜಡ ಜನಾರಣ್ಯ" ವೆಂದು ನಮ್ಮ ಪಂಪನು ಧ್ವನಿಸಿರುವುದು ಅಡಿಗಡಿಗೆ ನೆನಪಾಗುವ ಸ್ಥಿತಿ ನಮ್ಮಿಂದಿನ ಸಾಹಿತ್ಯ ಪ್ರಪಂಚದಲ್ಲಿ ತಲೆದೋರಿದೆ. ಈ ಅರಣ್ಯ ದಟ್ಟವಾಗಿ ಬೆಳೆದಿದೆ; ವಿಸ್ತಾರವಾಗಿ ಹಬ್ಬಿದೆ. ಅದರ ಮಧ್ಯೆ ಅಲ್ಲಲ್ಲಿ ಕೆಲವು ಗಂಧದ ಮರಗಳಿರುವುದೇನೋ ನಿಜ; ಆದರೆ, ಅವುಗಳು ಕಾಳ್ಮರಗಳಂತೆ ಗಗನಚುಂಬಿ ಯಾಗಿ ತೋರುವುದಿಲ್ಲ; ವಿಪುಲವಾಗಿ ಸೊಪ್ಪುಸದೆ ಹೇರಿಕೊಂಡು ಕಣ್ಗೆ ಸೊಂಪಾಗಿ ತೋರುವುದೂ ಇಲ್ಲ. ಗಂಧದ ಮರವನ್ನು ಗುರುತಿಸಿ ಧನ್ಯ ರೆನಿಸುವ ವಿವೇಕಿಗಳಿಗೆ ಮಾತ್ರವೇ ಅವು ಗೋಚರಿಸುವುವು.

"It is not growing like a tree
In bulk doth make man better be
A lily of a day
Is fairer for in May

(Ben Johnson)

(ಮರ ಬೆಳೆದಂತೆ ವಿಪುಲವಾಗಿ ಬೆಳೆವುದರಿಂದ ಮನುಷ್ಯ ದೊಡ್ಡವ ನಾಗನು; ಒಂದೇ ದಿನದ ಬಾಳಿಕೆಯ ವಸಂತ ಮಲ್ಲಿಗೆ ಅದಕ್ಕಿಂತ ಶ್ರೇಷ್ಠತರ)

ಎಂದು ಆಂಗ್ಲ ಕವಿಯೊಬ್ಬನು ಸಾರಿದ ಸುಂದರ ಮಾರ್ಮಿಕ ಸೂಕ್ತಿ ಚಿರಂತನ ಸತ್ಯವಾಗಿದೆ. "ಮುಳ್ಳಿನ ಮರವಾದರೂ ಚಿಂತಿಲ್ಲ; ಮರಗೂ ಳನ ತುತ್ತಾದರೂ ಚಿಂತಿಲ್ಲ; ಮರವೆನಿಸಬೇಕು "ಎಂಬ ಆಸುರೀ ಆಕಾಂಕ್ಷೆ ಬೆಳೆದಿರುವುದು ಚಿಂತನೀಯವಾಗಿದೆ. ಹಿಂದಿನವರ ಆಕಾಂಕ್ಷೆ ಹಾಗಿದ್ದಿಲ್ಲ; ಎಲ್ಲಿ ಮೂಸಿದರೂ ಪರಿಮಳ, ಎಲ್ಲಿ ಮುಟ್ಟಿದರೂ ಶೀತಲ—(ಗಿಡ್ಡವಾದರೂ ಅಡ್ಡಿ ಇಲ್ಲ, ಯಾರೂ ಕಾಣದ ತಾಣದಲ್ಲವಿತಿದ್ದರೂ ಬೇಸರಿಲ್ಲ) ಆದ ಶ್ರೀಗಂಧವೃಕ್ಷವಾಗಿರಬೇಕು. ಹಳೆಗಾಲದ ಜನರಲ್ಲಿ ಈ ಬಯಕೆ ಬದುಕಿನ ಆದ್ಯಂತವಾಗಿತ್ತು. ಏತತ್ಪರಿಣಾಮವಾಗಿ ಅವರು ಉಂಡ ಬದುಕಿನ ಸಾರ ಅವರು ಕಂಡ ದರ್ಮದ ತಿರುಳು, ಅವರು ಸವಿದ ಸೌಂದರ್ಯದ ಸುಧೆ

ಚಿಕ್ಕ ಚಿಕ್ಕ ಸೂತ್ರರೂಪವಾಗಿ ಒಡಮೂಡಿತು. ಒಂದು ಸೂತ್ರ ಒಂದು ರೂಪಾಯಿಯಂತೆ ಬಿಡಿಸಿದರೆ ೧೯೩ ಪೈ. ಸಂಖ್ಯಾಮಾನದಿಂದ ೫೦ ಬಿಲ್ಲೆಗಳು ಒಂದು ರೂಪಾಯಿಯ ಐಯ್ವತ್ತು ಪಟ್ಟು ದೊಡ್ಡದಾದರೂ, ಬೆಲೆಯ ದೃಷ್ಟಿಯಿಂದ ರೂಪಾಯಿಯೇ ಹೆಚ್ಚಿನದಲ್ಲವೆ? ಒಂದು ಹಣ್ಣಿನೊಳಗಿನ ರಸಸಿದ್ಧಿ ಗಾಡಿತುಂಬಿ ತುಂಬಿದ ಸೊಪ್ಪಿನ ರಾಶಿಗೆ ಬಂದೀತೆ? ನಮ್ಮ ಪ್ರಾಚೀನ ಕವಿಪಂಡಿತಗಣ ಯಾವಜ್ಜೀವ ಒಂದೋ ಎರಡೋ ಕೃತಿರತ್ನಗಳನ್ನಷ್ಟೇ ಹೊರಗೆಡವಿ ಅಜರಾಮರ ಕೀರ್ತಿಪಾತ್ರವಾದುದೆಂಬುದನ್ನು ಮರೆಯಬಾರದು

" ಅಧಿಕೃತ ಸತ್ಪುರುಷಾರ್ಥ---
ಪ್ರಧಾನ ಧರ್ಮಾರ್ಥ ಕಾಮಮೋಕ್ಷಂಗಳವಾ,
ಬುಧಜನ ವಿವಿಕ್ತ ಕಾವ್ಯ
ಪ್ರಧಾರಿತಾರ್ಥಂಗಳ್; ಅಖಿಳ ಭುವನ ಹಿತಂಗಳ್ "

ಎಂಬುದು ನಮ್ಮ ನೃಪತುಂಗ ದೇವನ ಮತವಲ್ಲವೆ? ಸಮಸ್ತ ಸನ್ಮಂಗಳ ಕಾರ್ಯಗಳೂ ಯಾವ ಚತುರ್ವಿಧ ಪುರುಷಾರ್ಥ ಸಿದ್ಧಿಗಾಗಿ ನಿಯೋಜಿತವಾಗಿವೆಯೋ, ಅದನ್ನೇ ಸಾಹಿತ್ಯದ ಪ್ರಮುಖ ಕಾರ್ಯವಾಗಿ ಹೇಳಲಾಗಿದೆ. ಋಜು ಮಾರ್ಗಶಾಲಿಗಳಾದವರೆಲ್ಲ ಇದನ್ನೇ ಜೀವನದ ಪರಮೋಚ್ಚ ಸಿದ್ಧಿಯಾಗಿ ಭಾವಿಸುತ್ತಿರುವರು.

ಈ ಸಿದ್ಧಿಗೆ ಸಂಯಮವೇ ಸಾಧನ.
ಇದೇ ದರ್ಮ; ಇದೊಂದು ಕಲ್ಪಕುಜ; ಇದರ ತನಿವಣ್ಣು ಹೊಟ್ಟೆಯನ್ನು ಬ್ಬಿಸುವಷ್ಟು ರಸಭರಿತವಾಗಿರಲಿಕ್ಕಿಲ್ಲ; ಆದರೂ ಅಮೃತದ ಒಂದು ಬಿಂದು ಮರಣಬಾಧೆಯನ್ನು ತಪ್ಪಿಸುವಂತೆ, ಕೊಡಗಟ್ಟಲೆ ತುಂಬಿದ ಔಷಧಗಳು ತಪ್ಪಿಸಬಲ್ಲುವೆ? ಧರ್ಮ ಸಹಿತವಾದ ಅರ್ಥ; ಧರ್ಮಸಹಿತವಾದ ಕಾಮ-ಇದು ಮುಖ್ಯ. ಅರ್ಥಕಾಮಗಳು ಧರ್ಮದ ಮುಖಂಡತ್ವವನ್ನು ಅನುಸರಿಸಬೇಕು. ಪಂಪಕವಿಯ ಪ್ರಚೋದಕ ಮಾತೊಂದು ಈ ರೀತಿ ಇದೆ:—

" ಧರ್ಮಾರ್ಥಕಾಮಮೆಂಬಿವು
ಧರ್ಮಾರ್ಥ ಜನಕ್ಕೆ ನೆರೆದ ನೆರ್ಮಂತವರೊಳ್ ।
ಧರ್ಮಂ ಪ್ರಧಾನ, ಮರ್ಥಂ—
ಧರ್ಮಾಂಘ್ರಿಪಫಳಮಕೆರ್ದ ರಸಮದು ಕಾಮಂ'

(ಆ. ಪು. ೧೦—೪೮.)

ಸಾಹಿತ್ಯದಲ್ಲಿ ಸಂಯಮರಾಹಿತ್ಯವಿರಬಾರದು,

" ಮನಃ ಪ್ರಸಾದಃ ಸೌಮ್ಯತ್ವಂ
ಮೌನಮಾತ್ಮವಿನಿಗ್ರಹಃ
ಭಾವಸಂಶುದ್ಧಿರಿತ್ಯೇತತ್
ತಪೋ ಮಾನಸಮುಚ್ಯತೆ"

ಎಂಬ ಗೀತೋಕ್ತಿ ಸಾರುವ " ಪ್ರಸನ್ನ ಗಂಭೀರ ವಚನ ರಚನ ಚತುರತೆಗೆ " ಭಾವಸಂಶುದ್ಧಿ, ಮನಃ ಪ್ರಸಾದತೆ, ಆತ್ಮ ವಿನಿಗ್ರಹ ಅತ್ಯಗತ್ಯ ಅವಿದ್ದಲ್ಲಿ, " ವಾಚಿ ಪುಣ್ಯಾಪುಣ್ಯ ಹೇತವಃ" ಎಂಬ ಅರಿವು ತಲೆದೋರುವುದು. " ಅತಿ " ಎಂಬ ಪಾಪಕ್ಕೆಡೆ ದೊರೆಯದು. ಉತ್ತಮಸಾಹಿತ್ಯಕ್ಕೆ ಇದೇ ಹಿನ್ನೆಲೆ. ಈ ರೀತಿಯ ಸಾಹಿತ್ಯ ಎಂದೆಂದಿಗೂ ಪ್ರಗತಿಪರವೆ.

ಸಾಹಿತ್ಯಿಕರು ಮತ್ತು ಜನಜೀವನ

ಅಗಮವಥ್ಯಾತ್ಮವಳವಟ್ಟ ಶೃಂಗಾರ
ತ್ಯಾಗಭೋಗದ ಮೋಡಿ ಮೆರೆಯೆ ||
ಭೋಗಿ ಯೋಗಿಗಳೆದೆ ಜುಮ್ಮಜುಮ್ಮೆನೆ ನೇಮ
ದಾಗಿ ಸೊಲ್ಲಿಸುವೆನಾಲಿಸಿರೊ ||

ಎಂಬುದಾಗಿ ಕವಿ ರತ್ನಾಕರ ಸಿದ್ಧನು "ಭರತೇಶವೈಭವ" ಮಹಾಕಾವ್ಯಕ್ಕೆ ಮುನ್ನುಡಿ ರೂಪವಾಗಿ ಈ ನಾಲ್ಕು ಸಾಲಿನಲ್ಲಿ ಉತ್ತಮ ಕಾವ್ಯದ ಉದ್ದೇಶವನ್ನು ಮನೋಹರವಾಗಿ ಸೂಚಿಸಿದ್ದಾನೆ. ಕಾವ್ಯದ ಉದ್ದೇಶವೇನೆಂಬ ಬಗೆಗೆ ಹಲವರು ಹಲವು ರೀತಿಯಿಂದ ತರ್ಕಿಸಿದ್ದಾರೆ. ಅಶುಭವು ಹೊದ್ದದಂತೆಯೂ ಕೀರ್ತಿಯು ದೊರೆಯುವಂತೆಯೂ ತನ್ಮೂಲಕ ಸುಖಸಾಧನವಾದ ಅರ್ಥ (ಹಣ) ಪ್ರಾಪ್ತಿಯಾಗುವಂತೆಯೂ ಮಾಡುವುದೇ ಕಾವ್ಯದ ಹೇತು ಎಂಬುದಾಗಿ ಕಾವ್ಯಾದರ್ಶಕಾರನಾದ ದಂಡಿಯು ಸಾರಿದ್ದಾನೆ. ಸಾವಿರ ವರ್ಷಗಳ ಹಿಂದೆ ಅವನು ಸಾರಿದ್ದ ಆ ತತ್ವವು ಇಂದಿಗೂ ಹೊಸದಾಗಿಯೇ ಇದೆ. ಕಾವ್ಯ ಮಾತ್ರವೇ ಅಲ್ಲ, ಸಾಹಿತ್ಯದ ಯಾವ ಪ್ರಕಾರವನ್ನೂ ಕೈಗೊಂಡು ಕೃತಿ ರಚಿಸುವವರನ್ನು ಬೇಕಾದರೂ ಕೇಳಿರಿ. "ನೀವು ಯಾಕೆ ಬರೆಯುತ್ತೀರಿ?" ಎಂದು. ಹಣಕ್ಕಾಗಿಯೋ, ಹೆಸರಿಗಾಗಿಯೋ ಅಥವಾ ಸುಖಕೊಡುವ ಮತ್ತಾವ ವಸ್ತುವಿಗಾಗಿಯೋ ಬರೆಯುತ್ತೇವೆಂದು ಅವರು ಹೇಳುವರು. ಉದ್ದೇಶವೇ ಇಲ್ಲದೆ, ಬರೆಯುವ ಮಹಾನುಭಾವರು ದೊರೆಯಲಾರರು. ಇತರರ ಕಿವಿ ಕಣ್ಣುಗಳಿಗೆ ಮುಟ್ಟದಂತೆ ತಮ್ಮ ಪುಸ್ತಕದೊಳಗೇ ಬರೆದು ಮುಚ್ಚಿಟ್ಟುಕೊಳ್ಳುವವರೂ ಕೆಲವರುಂಟು. "ನೀನೇಕೆ ಹೂಬಿಡುತ್ತಿ?" ಎಂದು ಲತೆಯೊಡನೆ ಕೇಳಿದರೆ, "ನನ್ನ ಹುಟ್ಟುಗುಣವೇ ಹೂಬಿಡುವುದು." ಎಂದದು ಉತ್ತರ ಕೊಡಬಹುದು. ಅದರ ಅಂದವನ್ನು ಕಂಡು ಕುಣ್ಣಣಿಸಿಕೊಳ್ಳುವವರು ಕುಣ್ಣಣಿಸಿಕೊಳ್ಳಲಿ. ಮೂಸಿ ಪರಿಮಳದಿಂದ ಮನಸ್ಸನ್ನು ಅರಳಿಸಿಕೊಳ್ಳುವವರು ಅರಳಿಸಿಕೊಳ್ಳಲಿ

ಅಥವಾ ಬಿಡಲಿ. ಅದರ ಗೊಡವೆಯೇ ಅದಕ್ಕಿಲ್ಲ. ಅರಳಿ ಸುಗಂಧ ಸೂಸುವುದೇ ಅವರ ಸ್ವಭಾವವಲ್ಲವೆ? ಹಾಗೆಯೇ ಭಾವಜೀವಿಯಾದ ಕವಿ, ಸಾಹಿತ್ಯಿಕ, ಸಂಗೀತಗಾರ, ಶಿಲ್ಪಿ, ಚಿತ್ರಕಾರ ಇವರೆಲ್ಲರೂ ಸ್ವಾಭಾವಿಕವಾಗಿಯೇ ತಮ್ಮ ತಮ್ಮ ನೈಸರ್ಗಿಕ ಪ್ರವೃತ್ತಿಯನ್ನು ಹೊರಗೆಡವಿಬಿಡುವರು. ಅಂತಹ ಸ್ವಾಭಾವಿಕ ಪ್ರವೃತ್ತಿಯ ಕಲಾವಿದರಿಗೆ ಯಶಸ್ಸು, ಅರ್ಥ ಮಂಗಳ ಈ ಅಭೀಷ್ಟತ್ರಯವು ಅನಿಷ್ಟವಲ್ಲವಾದರೂ ಅನ್ವೇಷಿತವಲ್ಲ. ಅವರು ಬೇಕೆಂದು ಹಾತೊರೆಯರು; ಬಂದರೆ ನೂಕಿಬಿಡರು. ಉತ್ತಮ ಕಾವ್ಯಕೃತಿ ಅಂತಹವರಿಂದ ರಚಿತವಾಗುವುದು. ಅವರ ರಚನೆಯಲ್ಲಿ ಆತ್ಮ ಸಾಂತ್ವನವೇ ಮೂಲ ಹೇತುವಾಗಿರುವುದು.

ಉತ್ತಮ ಸಾಹಿತ್ಯವು "ಆಗಮ, ಅಧ್ಯಾತ್ಮ ಅವಟ್ಟ ಶೃಂಗಾರ"ಗಳನ್ನು ತನ್ನ ಅಂಗಾಂಗಗಳಲ್ಲಿ ಶೇಖರಿಸಿಟ್ಟುಕೊಳ್ಳುವುದು. ಸತ್ಯ, ಸೌಂದರ್ಯ, ಆನಂದ ಇವೇ ಸಾಹಿತ್ಯದ ಮುಮ್ಮೊಗ. ಸಾಹಿತ್ಯವನ್ನು ಕುರಿತು ಯೋಚಿಸುವಾಗ ಉತ್ತಮ, ಮಧ್ಯಮ, ಅಧಮ ಎಂದು ಮುಬ್ಬಣ ಮಾಡದಿರಲಿಕ್ಕಾಗುವದಿಲ್ಲ. ಒಂದು ವ್ಯಕ್ತಿಯ ಸಾಹಿತ್ಯ ಕಕ್ಷೆಯಲ್ಲಿಯೇ ಈ ತೆರನ ಮೂರು ಅಂತಸ್ತುಗಳನ್ನು ಗುರುತಿಸಬಹುದಾಗಿದೆ. ಬಾಲ್ಯ, ಯೌವನ, ವೃದ್ಧಾಪ್ಯಗಳು ಹೇಗೆ ಪ್ರತಿಯೊಂದು ಶರೀರಿಗೂ ಇವೆಯೋ ಹಾಗೆ ಶರೀರಿಯ ಮಾನಸಿಕ ಕೃತಿಗಳಿಗೂ ಇವೆ ಎಂದು ಒಪ್ಪಿಕೊಳ್ಳಬೇಕು. ಆರಂಭಕಾಲದ ಕೃತಿ ಯೌವನದ ಇಲ್ಲವೇ ವೃದ್ಧಾಪ್ಯದ ಕೃತಿಯ ಆಳವನ್ನಾಗಲೀ, ಔನ್ನತ್ಯವನ್ನಾಗಲೀ ಉಳ್ಳುದಾಗಲಿಕ್ಕಿಲ್ಲ. ಇದು ಪ್ರಕೃತಿ. ಇದೇ ಮೇರೆಗೆ ಒಂದೇ ಕೃತಿಯಲ್ಲಿಯೂ ಉತ್ತಮ, ಮಧ್ಯಮ, ಅಧಮ ಎಂಬ ಮೂದೆರವನ್ನು ಗುರುತಿಸಬಹುದು. ಹೇಗೆ ಒಂದು ನದಿ ಹರಿಯುತ್ತ ಹೋದಂತೆ ಕೆಲವೆಡೆ ಆಳವಾಗಿಯೂ ಕೆಲವೆಡೆ ಆಳವಿಲ್ಲದೆಯೂ ಮತ್ತೆ ಕೆಲವೆಡೆ ಅಗಲವಾಗಿಯೂ ಕೆಲವೆಡೆ ಅಗಲವಿಲ್ಲದುದಾಗಿಯೂ ಇರುವುದೋ ಹಾಗೆ. ಒಂದೇ ಕೃತಿಯ ಈ ತೆರನ ಅಂತರವನ್ನು ಗುರುತಿಸುವಾಗ ಒಟ್ಟು ಕೃತಿಯ ಸಮಷ್ಟಿ ಸೌಂದರ್ಯವನ್ನು ಮರೆಯಕೂಡದು. ಗಂಗಾನದಿ ಮೂಲದಲ್ಲಿ ಕಿರುಬೆರಳಿನಷ್ಟು ಕೂರಾದ ಧಾರೆಯಾಗಿದ್ದರೂ ಕೆಲವೆಡೆ ಸಣ್ಣ ದೋಣಿಗೂ ಅನುಕೂಲವಾಗದಷ್ಟು ಆಳವಿಲ್ಲದೇ

ಹೋದರೂ ಅದರ ಸಮಷ್ಟಿ ಶಕ್ತಿ ಉತ್ತರ ಭಾರತದ ಸರ್ವ ಸಂಪತ್ತಿನ ಆಧಾರಕ ಶಕ್ತಿಯಾಗಿರುವುದಲ್ಲವೆ? ಮಹಾಧ್ವಕೃತಿಗಳಲ್ಲಿಯೂ ಈ ಬಗೆಯ ಏರಿಳಿತಗಳು ಇಲ್ಲದೇ ಇಲ್ಲ. ಹಾಗಿರುವುದೇ ಪ್ರಕೃತಿ. ಕಾಲುವೆ ಕಡಿದಂತೆ ನದಿ, ಕೃತಕ ಪ್ರವಾಹವಾಗಿ ಹರಿಯಲಾರದು; ಹರಿಯಕೂಡದು.

ಸಾಹಿತ್ಯದ ಮೂದೆರವನ್ನು ವಿಂಗಡಿಸುವಾಗ ಅದರ ವಸ್ತುವಿನಿಂದ ಅದರ ತರತಮವನ್ನು ವಿಂಗಡಿಸಹೋಗುವುದು ಮೂರ್ಖತೆಯೇ ಸರಿ; ಋಷಿಗೆ ವಿಧಿ ನಿಷೇಧಗಳಿಲ್ಲ. ಹಾಲಾಹಲವನ್ನೂ ಅಮೃತದಂತೆ ಮುಕ್ಕುಳಿಸುವ ಶಕ್ತಿ, ಧೃತಿ ಆತನಲ್ಲಿದೆ. ನಿಜವಾದ ಸಾಹಿತ್ಯಿಕನು ಋಷಿಯಂತೆ ಆತನ ರಸಧಾರೆಗೆ, ಧ್ಯಾನತರಂಗಕ್ಕೆ, ವಸ್ತುವಿನ ಮೇಲ್ಮೆ ಕೀಳ್ಮೆಯಾಗಲೀ ಅಡ್ಡಿಯೊಡ್ಡಲಾರವು. ರಾಜ ಭೋಗೈಶ್ವರ್ಯವನ್ನು ವರ್ಣಿಸುವಷ್ಟೇ ತಾದಾತ್ಮ್ಯದಿಂದ ನೇಗಿಲ ಯೋಗಿಯಾದ ಭೂಮಿತಾಯಿಯ ಚೊಚ್ಚಿಲ ಮಗನಾದ ಬಡ ಕೃಷೀವಲನನ್ನೂ ಆತನು ಬಣ್ಣಿಸುವನು. ಎಲ್ಲೆಲ್ಲಿ ಜೀವವಿದೆಯೋ, ಎಲ್ಲೆಲ್ಲಿ ರಸಕ್ಕಾಸರೆ ಇದೆಯೋ ಅಲ್ಲಲ್ಲಿ ಆತನ ಜೀವಭಾವ ಸುತ್ತುತ್ತಿರುವುದು. ಡೊಂಕು ಕಂಡಲ್ಲಿ ಕೆವಕಿ ತಿದ್ದುವುದು; ಕ್ರೌರ್ಯ ಕಂಡಲ್ಲಿ ಕುಟ್ಟಿ ಮೆದುಮಾಡುವುದು; ನಿಷ್ಪಾಪವಾದ ಶಾಂತ ಜೀವನವನ್ನು ನಿರಾತಂಕವಾಗಿ ಸಾಗಗೊಡುವುದು. ಈ ರೀತಿಯ ಕಾರ್ಯತ್ರಯ ಸಾಹಿತ್ಯದ ನಿತ್ಯಕೃತ್ಯ, ಅಂತಹ ಸಾಹಿತ್ಯದಲ್ಲಿ ಹಳಬರು ಯಾವುದನ್ನು ಗೂಢಾದ್ಗೂಢತರವಾದ ಪುರಾಣ ವಸ್ತುವೆನ್ನುವರೋ, ಹೊಸಬರು ಯಾವುದನ್ನು ವಿಜ್ಞಾನದ ಪ್ರಗತಿ ಶೀಲತೆ ಎನ್ನುವರೋ ಅದು ಇದ್ದೇ ಇರುವುದು. ಕಣ್ಣುಳ್ಳವರಿಗೆ ಕಾಣಿಸುವುದು. ಕಿವಿ ಇದ್ದವರಿಗೆ ಕೇಳಿಸುವುದು. ಕಣ್ಣಿದ್ದೂ ಕುರುಡರಂತೆ ನಟಿಸುವವರಿಗೆ ಅದು ಇದ್ದೂ ಇಲ್ಲದಂತಾಗುವುದು.

ಪ್ರಗತಿ ಶೀಲ

ಪ್ರಗತಿ ಎಂದರೆ ಮುಂಬರಿಯುವುದು. ಯಾವುದರ ಶೀಲ ಸ್ವಭಾವ ಮುನ್ನಡೆಯುವಂಥಾದ್ದೋ ಅದು 'ಪ್ರಗತಿಶೀಲ.' ಮುನ್ನಡೆಯುವದೆಂದರೆ ಸುಖದ ಕಡೆಗೆ ಮುನ್ನಡೆಯುವುದು, ದುಃಖದ ಕಡೆಗಲ್ಲ. ಇಂದಿನ ಸಾಹಿತ್ಯದಲ್ಲಿಯೂ, ಪ್ರಪಂಚದಲ್ಲಿಯೂ ಮುನ್ನಡೆಯುವುದೇನೋ ಕಾಣುತ್ತಿದೆ. ಕಾರಣ ಎಲ್ಲ ಕ್ರಿಯೆಗಳಲ್ಲಿಯೂ ವೇಗ (Speed)

ಹೆಚ್ಚಿದೆ. ಆದರೆ ಅದು, ಮೃತ್ಯುವಿನ ಬಾಯೊಳಕ್ಕೆ ತಾ ಮುಂದೆ, ನಾ ಮುಂದೆ ಎಂದು ಓಡುತ್ತಿರುವ ಮುನ್ನಡೆಯಾಗಿದೆ. ಪ್ರಕೃತಿಯಿಂದ ಬೇರಾಗಿ ನೋಡುತ್ತಿರುವ ಅರ್ಜುನನ ದೃಷ್ಟಿಗೆ "ವಿಶ್ವರೂಪ"ದ ಬಾಯಲ್ಲಿ ತಾನೂ ಕೌರವಾದಿಗಳೂ ಸಿಕ್ಕು ಬಿದ್ದಂತೆ ಕಂಡಿತಂತೆ ಹಾಗೆಯೇ ಸ್ಥಿರಮತಿಯಾಗಿ, ಅಲಿಪ್ತನಾಗಿ ನೋಡುವ ದೃಷ್ಟಾರನಿಗೆ ಇಂದಿನ ಪ್ರಗತಿಶೀಲವೆಂಬುವದು ಮೃತ್ಯುವಿನ ಬಾಯೊಳಗೆ ದೌಡಾಯಿಸುವ ಪ್ರಗತಿಯಾಗಿ ಕಾಣುತ್ತಿದೆ. ಯಂತ್ರೋಪಕರಣಗಳೂ ಉತ್ಪಾದನೆಯೂ ಹೆಚ್ಚುತ್ತ, ಯುದ್ಧಗಳೂ, ಕ್ಷಾಮ ಡಾಮರ (ರೋಗ)ಗಳೂ ಹಬ್ಬುತ್ತ ಹೋಗಿವೆ. ಇರಲಿ.

ಪ್ರಗತಿ ಎಂದರೆ ಸುಖದತ್ತ ಉದ್ಧಾರವಾಗುವುದೆಂದೆನಷ್ಟೆ. ಪ್ರಗತಿಶೀಲ ಸಾಹಿತ್ಯವು ಅಂತಹ ಉದ್ಧಾರಕ್ಕೆ ಹೇತುವಾಗಿಯೂ ಸಹಾಯಕವಾಗಿಯೂ ಇರಬೇಕು. ಪ್ರಗತಿ ಎಲ್ಲರಿಗೂ ದೊರೆಯಬೇಕು. "Greatest good of the greatest number"—ಆದಷ್ಟು ಹೆಚ್ಚು ಜನರಿಗೆ ಶಕ್ಯವಿದ್ದಷ್ಟು ಹೆಚ್ಚು ಸುಖವಾಗಬೇಕು. ಅರ್ಥಾತ್ ಬಹುಸಂಖ್ಯಾತರ ಆತ್ಯಂತಿಕ ಸುಖವಾಗಬೇಕು. ಸಾಹಿತ್ಯದಲ್ಲಿ ಪ್ರಗತಿ ಎಂಬುದನ್ನು ಅರ್ಥಯಿಸುವುದು ಬಹು ಬಿಕ್ಕಟ್ಟಿನ ಕೆಲಸವಾದೀತು. ಬಹುಸಂಖ್ಯಾತರಿಗೆ ತಿಳಿಯುವ ಹಾಗೂ ಬಹುಸಂಖ್ಯಾತರಿಗೆ ಜ್ಞಾನಾನಂದಗಳನ್ನು ಕೊಡಬಲ್ಲ ಸಾಹಿತ್ಯವೇ ಪ್ರಗತಿಶೀಲ ಸಾಹಿತ್ಯವೆಂದಂತಾಯಿತು. ಈ ಅರ್ಥವನ್ನೇ ಸರ್ವಶ್ರೇಷ್ಠ ಅರ್ಥವೆಂದು ಬಗೆದರೆ, ಬಹುಸಂಖ್ಯಾತರ ಅಭಿರುಚಿ ಯಾವುದೆಂದು ತಿಳಿಯಬೇಕಾಗುವುದು; ಮತ್ತು ಅವರಿಗೆ ಆನಂದವನ್ನೂ ಜ್ಞಾನವನ್ನೂ ಕೊಡಬಲ್ಲ ಸಾಹಿತ್ಯವು ಯಾವುದೆಂದು ಪರೀಕ್ಷಿಸಬೇಕಾಗುವುದು. ಇಂದಿನ ಕನ್ನಡ ನಾಡಿನ ಪ್ರಕಾಶಕರನ್ನು ಕೇಳಿದರೆ ಇದಕ್ಕೆ ಸ್ಪಷ್ಟವಾದ ಉತ್ತರವು ದೊರೆಯಬಹುದು. ಕತೆ-ಕಾದಂಬರಿಗಳೇ ಬಹುಸಂಖ್ಯಾಕರ 'ರಂಜಕ' ಸಾಹಿತ್ಯವೆನಿಸುವುದು. ಹಾಗೆ ಹೇಳಿದಲ್ಲಿ, ಉತ್ತಮ ಸಾಹಿತ್ಯವೆನಿಸುವ ಕಾವ್ಯ-ನಾಟಕಾದಿ ಗ್ರಂಥಗಳನ್ನು ಪ್ರಗತಿಶೀಲವಲ್ಲದ ಸಾಹಿತ್ಯವೆನ್ನೋಣವೆ? ಕಾಳಿದಾಸ, ಭವಭೂತಿ, ಭಾರವಿಗಳನ್ನೂ, ಪಂಪ, ಪೊನ್ನ, ರನ್ನ, ಜನ್ನರನ್ನೂ ಶೂಲಕ್ಕೇರಿಸುವುದೆ?

ಬಹುಜನ ಸಾಹಿತ್ಯ—ಜಾನಪದ ಸಾಹಿತ್ಯ

ಜಾನಪದ ಸಾಹಿತ್ಯ ಎಂಬುದಾಗಿ ಈಗಲೀಗ ಸಾಹಿತ್ಯದ ನವೀನಪ್ರಕಾರವೊಂದು ನಾಮಕರಣಗೊಂಡಿದೆ. ಹಳ್ಳಿಗಾಡಿನ (ಅ-ನಾಗರಿಕ) ಗಂಡುಹೆಣ್ಣುಗಳು ಬಾಯಲ್ಲಿ ಸೊಲ್ಲಿಸುತ್ತಿರುವ ಬಗೆಬಗೆಯ ದಾಟಿಯ ಹಾಡುಗಳನ್ನೂ, ಹೇಳುತ್ತಿರುವ ಕತೆಗಳನ್ನೂ ಜಾನಪದ ಸಾಹಿತ್ಯವೆಂಬುದಾಗಿ ಹೇಳಲಾಗುತ್ತಿದೆ. ಹಿಟ್ಟು ಬೀಸುವಾಗ, ಬತ್ತ ಕುಟ್ಟುವಾಗ, ದೋಣಿ 'ಒತ್ತು'ವಾಗ, ಗಾಡಿ ಹೊಡೆಯುವಾಗ, ಗಾಣ ಹಿಂಡುವಾಗ, ಏತ ಎಳೆಯುವಾಗ, ಹೊಲ ಕಾಯುವಾಗ, ದನ ಮೇಯಿಸುವಾಗ-ಹೀಗೆ ಎಷ್ಟೆಷ್ಟೋ ಹಳ್ಳಿಗಾಡಿನ ನಿತ್ಯಕೃತ್ಯಗಳಲ್ಲಿ ತೊಡಗಿದ ಜನರು, ಬೇಸರ ದೂಸರಿಸಿ, ಹುರುಪುಹುಟ್ಟಿಸಿ ಕೊಳ್ಳಲು ಹಾಡುವುದುಂಟು. ಈ ಜಾನಪದ ಸಾಹಿತ್ಯರಾಶಿಗೆಆಲಂಕಾರಿಕರು 'ದೇಸಿ' ಎಂದು ಕರೆದಂತೆ ತೋರುವುದು. ದೇಸಿಯಾದರೂ 'ಮಾರ್ಗ'ದಂತೆ ರಸಭಾವಲಂಕಾರಗಳಿಲ್ಲದೇ ಇಲ್ಲ. ಶೃಂಗಾರ, ಕರುಣ, ಶಾಂತ, ವೀರ, ರೌದ್ರ, ಹಾಸ್ಯ, ಭಯ ಮುಂತಾದ ನವರಸಗಳನ್ನಳವಡಿಸಿಕೊಂಡ ಕೃತಿಗಳು 'ದೇಸಿ'ಯಲ್ಲಿ ತುಂಬ ಸಿಗುವುವು, 'ದೇಸಿಯ' ಕರ್ತೃಗಳು 'ಕುರಿತೋದಿದ' 'ಕಾವ್ಯ ಪರಿಣತಮತಿ' ಗಳಲ್ಲವಾದ್ದರಿಂದಲೋ ಏನೋ, ಅವರ ಕೃತಿಗಳೆಲ್ಲ ನಮ್ಮ ಆಧುನಿಕ ಕವಿಗಳ ಕೃತಿಗಳಂತೆ, 'ತುಂಡು' ಪದ್ಯ (ಲಹರಿ-Lyric)ಗಳಾಗಿವೆ. ಕೇಳುವವರ ಹೃನ್ಮನಗಳನ್ನು ತುಂಬಿ ರಸವುಕ್ಕಿಸಿ, ಸಾಹಿತ್ಯ ಸಾಧಿಸುವ ಕಾರ್ಯವನ್ನು 'ದೇಸಿ'ಗಳು ಮಾಡುತ್ತಿವೆ.

ಉಪಯುಕ್ತತೆ

ಇದೇ ಮೇರೆಗೆ ಉಪಯುಕ್ತತೆಯನ್ನೂ (Utilitarianism) ಪ್ರಗತಿಸಾಹಿತ್ಯದ ಪ್ರಮುಖೋದ್ದೇಶವೆಂದು ವಾದಿಸುವುದನ್ನೂ ಲಕ್ಷಿಸಬೇಕು. ಉಪಯುಕ್ತತೆ ಎಂಬುದು ದೃಷ್ಟಿಗೋಚರವಾಗಿ ಬೃಹದಾಕೃತಿಯಲ್ಲಿರಬೇಕೆ? ಅಥವಾ ಅದೃಷ್ಟವಾಗಿ, ಅಂತರಿಂದ್ರಿಯ ಗೋಚರವಾಗಿ ಸೂಕ್ಷ್ಮವಾಗಿ ತೋರಬೇಕೆ? ಒಂದು ಜಡಕ್ಕೆ ಮಹತ್ವವಿತ್ತರೆ, ಮತ್ತೊಂದು ಚೇತನಕ್ಕೆ ಮಹತ್ವವೀಯುವುದು. ಸರ್ವ ಜಡತ್ವವೂ ಕಾಲಾಂತರದಲ್ಲಿ ಸಂಸ್ಕಾರ ಹೊಂದುತ್ತ ಹೊಂದುತ್ತ ಪರಿಶುದ್ಧ ಚೇತನ ಸ್ವರೂಪವಾಗಿ ಮಾರ್ಪಡುವು

ದೆಂದು ವಿಜ್ಞಾನಿಗಳೂ ವೇದಾಂತಿಗಳೂ ಏಕಾಭಿಪ್ರಾಯಕ್ಕೆ ಬಂದಿದ್ದಾರೆ. ಆದ್ದರಿಂದ ಜಡತನದಿಂದ ಜಡತನ ಅಂತಿಮಧ್ಯೇಯ (ಪ್ರಾಪ್ತಿ)ವು ಕಣ್ಣಿಗೆ ಗೋಚರವಾದ ನಿತ್ಯ ಚೇತನವೇ ಆಗಿರುವುದೆನ್ನಬಹುದು. ನಿತ್ಯ ಚೈತನ್ಯ ವನ್ನೇ ನೇರವಾಗಿ ಸಾಧಿಸುವ ಉತ್ತುಂಗ ಕೃತಿಗಳು ಉಪಯುಕ್ತತೆಯ ಪರಮೋಚ್ಚ ಸಿದ್ಧಿಯುಳ್ಳವಾಗಿವೆನ್ನಬಹುದು.

ಸಾಹಿತ್ಯವು ಕೇವಲ ಅಲಂಕಾರವೆ?

ಉಪಯುಕ್ತತಾವಾದವನ್ನು ಅಲ್ಲಗಳೆದಲ್ಲಿ ಸಾಹಿತ್ಯವು ಕೇವಲ ಅಲಂಕಾರ ವಸ್ತುವೆ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಅಲಂಕಾರವಿಲ್ಲದೆ ಬದುಕಬರುವುದೇನೋ ನಿಜ; ಆದರೂ ಅಲಂಕಾರವೆಂದರೇನೆಂಬುದನ್ನು ತಿಳಿದುಕೊಳ್ಳುವುದು ಅವಶ್ಯ. ಮೈ-ಕೈಕಾಲುಗಳಿಗೆ ಹೊಳಪಿನ ಉಡುಗೆ ತೊಡುಗೆಗಳನ್ನಿಟ್ಟುಕೊಳ್ಳುವುದು ಶರೀರಾಲಂಕಾರದ ರೀತಿ ಎಂಬುದು ಹಿಂದಿನಿಂದಲೂ ರೂಢಿಗೆ ಬಂದಿದೆ. ಸಾಹಿತ್ಯದ ಕಾರ್ಯಪ್ರಾಪ್ತಿಯಲ್ಲಿ ದೇಹವು ಮುಖ್ಯವಲ್ಲ; ದೇಹವ್ಯಾಪಾರಗಳ ಸೂತ್ರಧಾರಿಗಳಾದ ಮನೋಬುದ್ಧಿ ಗಳು ಮುಖ್ಯ. ಮನೋಬುದ್ಧಿಗಳ ವಿಕಾಸ-ಪ್ರಕಾಶ ಮತ್ತು ಶಾಂತಿಸುಖ ಗಳೇ ಸಾಹಿತ್ಯವು ಸಾಧಿಸಬಯಸುವ ಸೌಂದರ್ಯ ಅಥವಾ ಅಲಂಕಾರವಾಗಿದೆ. ಈ ಅಲಂಕಾರವೇ ಸಂಸ್ಕೃತಿಯ ಸಾರ. ಇಂತಹ ಸೌಂದರ್ಯವನ್ನು ಬಯಸದವನು ಹೆಸರಿಗೆ ಮನುಷ್ಯನಾದರೂ, ದ್ವಿಪಾದ ಪಶುವೆನಿಸುವನು. ಆಹಾರ, ನಿದ್ರಾದಿಗಳು ಸರ್ವಪ್ರಾಣಿಗಳಿಗೂ ಸಮಾನಧರ್ಮವಾಗಿರುವು ದಾದರೂ, ಸಂಸ್ಕೃತಿಯ ಸಾರವೆಂಬ ಈ ಸೌಂದರ್ಯವನ್ನು ಗ್ರಹಿಸುವ 'ವಿವೇಕ'ವು ಮನುಷ್ಯಪ್ರಾಣಿಗಷ್ಟೇ ಪ್ರದತ್ತವಾದ ಚಿಚ್ಛಕ್ತಿಯಾಗಿದೆ. ಈ ಅಲಂಕಾರವಿಲ್ಲದೇ ಬದುಕುವ ಬಾಳಿಗೆ ಪಶು ಜೀವನವೆನ್ನದೇ ಗತ್ಯಂತರವಿಲ್ಲ.

ಸಾಹಿತ್ಯ-ಜೀವನ

ಸಾಹಿತ್ಯಕ್ಕಿಂತ ಜೀವನ ದೊಡ್ಡದು. ಜೀವನವೊಂದು ಸಮುದ್ರ ವಾದರೆ, ಸಾಹಿತ್ಯವು ಅದರ ಒಂದಂಶವನ್ನಷ್ಟೇ ಪಡಿನೆಳಲಿಸುವ ಚಿಕ್ಕ ಕನ್ನಡಿಯಾಗಿದೆ. ಆದರೆ, ಈಗಲೀಗ ಎಷ್ಟೋ ಜನರು ಜೀವನಕ್ಕಿಂತ ಸಾಹಿತ್ಯವೇ ದೊಡ್ಡದೆಂದು ಭಾವಿಸುವುದೂ, ತದನುಗುಣವಾಗಿ ವರ್ತಿಸು

ವುದೂ ಕಂಡುಬರುತ್ತಿದೆ. ಬರೆವಣಿಗೆಯಿಂದ ಬದುಕಿ ಬೆಳಕಿಗೆ ಬಂದವರೇ ಬಹಳ. ಎಲ್ಲ ಬರೆಹಗಳ ಉದ್ದೇಶವೂ ಬದುಕನ್ನು ಭವ್ಯವಾಗಿಸುವು ದೆಂಬುದನ್ನು ಕಡೆಗಣಿಸಿ, ಬದುಕಿನ ಉದ್ದೇಶವೇ ಭವ್ಯವಾದ ಬರೆಹ ವನ್ನುಂಟುಮಾಡುವುದೆಂಬ ವಿಪರೀತಾರ್ಥದಿಂದ ಕೃತಾರ್ಥರಾದವರೇ ಬಹಳ. ಇದರ ಪರಿಣಾಮವಾಗಿಯೇ, ಓದುವವರಿಗಿಂತ ಬರೆಯುವವರ ಸಂಖ್ಯೆಯೇ ದೊಡ್ಡದಾಗುವುದು; ಸಲ್ಲದ ಈರ್ಷೆಯೂ ಬೆಳೆಯುವುದು. ಅಂತಹ ಸಾಹಿತ್ಯಿಕರ ಬಗೆಗೆ ನಮ್ಮ ಸರ್ವಜ್ಞನು.

"ಅರ್ಥವಿಲ್ಲದ ಹಾಡು। ವ್ಯರ್ಥಸಾಸಿರವಿದ್ದು
ಆರ್ತಿಯಿಂ ಕತ್ತೆ। ಅರಚಿದೆಡೆ ಅದರಲ್ಲಿ
ಅರ್ಥವುಂಟೆಂದ ಸರ್ವಜ್ಞ ॥"

ಎಂದು ತನ್ನ ಹರಿತವಾದ ನುಡಿಗತ್ತಿಯನ್ನೆತ್ತಿಬಿಟ್ಟಿದ್ದಾನೆ.

"ಓದಿದಾ ಓದು ತಾ ಮೇದ ಕಬ್ಬಿನಸಿಪ್ಪೆ।
ಓದಿನಾ ಒಡಲನರಿದಿಹರೆ, ಸಿಪ್ಪೆಕ।
ಬ್ಬಾದಂತೆ ಸರ್ವಜ್ಞ॥"

ಎಂದು ಆತನು ಆಚಾರರಹಿತ ಉಪದೇಶದ ಸಾಹಿತ್ಯಿಕರ ಹುರುಳನ್ನು ಹೊರಗೆಡವಿದ್ದಾನೆ. ಇದೇ ಅಭಿಪ್ರಾಯವನ್ನೇ ಸಂಸ್ಕೃತ ನಾಟಕಕಾರ ಭವಭೂತಿಯು ತನ್ನ "ಉತ್ತರ ರಾಮಚರಿತ್ರ"ದ ಆದಿಯ ಅಂಕದಲ್ಲಿಯೇ ಹೀಗೆಂದು ಧ್ವನಿಸಿರುವನು:—

"ಲೌಕಿಕಾನಾಂ ಹಿ ಸಾಧೂನಾಂ
ಅರ್ಥಂ ವಾಗನುವರ್ತತೆ"
"ಋಷೀಣಾಂ ಪುನರಾದ್ಯಾನಾಂ
ವಾಚಮರ್ಥೋಽನುಧಾವತಿ"

(ಲೌಕಿಕರಾದ ಆಧುನಿಕರಿಗೆ ಅರ್ಥವು ಮಾತಿನ ಹಿಂಬಾಲಕವಾದರೆ ಋಷಿಗಳಾದ ಪ್ರಾಚೀನರಿಗೆ ಮಾತು ಅರ್ಥವನ್ನೇ ಅನುಸರಿಸುತ್ತಿದ್ದಿತು.)

ಈಗಿನ ಕಾಯಿದೆ ಕಟ್ಟಳೆಗಳಿಗೂ ಇದು ಅನ್ವಯಿಸುವಂತಿದೆ ಎಂಬು ದನ್ನು ನಮ್ಮ ನ್ಯಾಯವಾದಿಗಳೂ (pleaders) ನ್ಯಾಯಾಲಯಗಳೂ ಸಾರಿ ಹೇಳುವ ನಿದರ್ಶನಗಳಾಗಿವೆ. ಆದ್ಯರಾದ ಸುಜ್ಞಾನಿಗಳು ಅರ್ಥಾನು

ಗುಣವಾಗಿ ಪದಪ್ರಯೋಗ ಮಾಡುತ್ತಿದ್ದರು. ಇದನ್ನೇ ಕವಿಕುಲಗುರು ಕಾಲಿದಾಸನುಃ--

"ವಾಗರ್ಥಾವಿವಸಂಪೃಕ್ತೌ
ವಾಗರ್ಥಪ್ರತಿಪತ್ತಯೇ"

ಎಂಬ ಮಾತಿನಲ್ಲಿ ಸೂಚಿಸಿದ್ದಾನೆ. ವಾಕ್ಕು ಶಿವೆ ಎಂದೂ ಅರ್ಥ ಶಿವನೆಂದೂ ಆತನು ಸಾರುವನು. ಶಿವನನ್ನು ಶಿವೆ ಹಿಂಬಾಲಿಸುವುದೂ ಶಿವ ಶಿವೆಯರು ಸರ್ವಲೋಕ ಪಾಲನಾರ್ಥವಾಗಿ ಸಂಪೃಕ್ತರಾಗಿ ಸಂಸಾರ ಸಾಗಿಸುವುದೂ ಶುಭಸೃಷ್ಟಿಯ ಸತ್ಯಸೃಷ್ಟಿಯಾಗಿದೆ. ಸ್ತ್ರೀಪುರುಷ ಸಮಾನತೆಯ ಈಗಿನ ಕಾಲದಲ್ಲಿ ಶಿವನೇ ಶಿವೆಯನ್ನು ಹಿಂಬಾಲಿಸುವುದು ವಿಪರೀತವಾಗಿ ತೋರುವುದಿಲ್ಲ. ಪದಕ್ಕೆ ಅರ್ಥ ಹಚ್ಚಿ ತಂತಮ್ಮ ಮೇಲ್ಮೆಯನ್ನು ಸಾಧಿಸುವುದೇ ವಕೀಲರ ಗುರಿಯಾಗಿದೆಯಲ್ಲವೆ? ಇದೇ ಇಂದಿನ ಅಳತೆ, ಇಂದಿನ ಜನತೆ. ಸಾಹಿತ್ಯ ಕೃಷಿಯಲ್ಲಿಯೂ ಇದೇ ಅಳತೆಗೋಲಾಗಿ ಸ್ವೀಕೃತವಾಗುತ್ತಿರುವುದನ್ನು ಮರೆಯಲಾಗದು.

ಪ್ರಗತಿ ವಿಗತಿಗಳೆಂಬುದು ಒಂದೇ ನಾಣ್ಯದ ಇಮ್ಮೊಗವಿದ್ದಂತಿದೆ. ಹಿಂದಿನ ಸಮಸ್ಯೆಗಳು ಇಂದೂ ಇವೆ; ಇಂದಿನವು ಅಂದೂ ಇದ್ದುವು. ರಾಮನಂತಹ ಧೀರೋದಾತ್ತ ನಾಯಕನಿಗೆ ರಾವಣನಂತಹ ಧೀರೋದ್ಧತ ಪ್ರತಿನಾಯಕನು ತ್ರೇತೆಯಲ್ಲಿದ್ದನು. ಅಂದೂ ಶ್ರೀಮಂತ ದರಿದ್ರರಿದ್ದರು. ಇಂದೂ ಇದ್ದಾರೆ. ಆದರೆ, ಆಗ ಎಲ್ಲವೂ ಒಂದು ಮಿತಿಯೊಳಗೆ ಇದ್ದುದರಿಂದಲೂ, ಪಾಪಪುಣ್ಯಗಳೇ ಜೀವನದ ಆಯವ್ಯಯವನ್ನು ತೂಗುವ ತಕ್ಕಡಿಯಾಗಿದ್ದುದರಿಂದಲೂ, ಅವುಗಳೊಳಗಿನ ಹೆಚ್ಚುಕಡಿಮೆ ಮತ್ತು ಭೇದಾಭೇದಗಳು ಈಗಿನಷ್ಟು ನಿಚ್ಚಳವಾಗಿ ಒಡೆದು ತೋರುತ್ತಿದ್ದಿಲ್ಲ. ಹಗಲು ರಾತ್ರಿಗಳಂತೆ, ರಾಗದ್ವೇಷಗಳು ಸೃಷ್ಟ್ಯಾದಿಯಿಂದಲೂ ಮಾನವ ಸಮಾಜವನ್ನು ಬೆಂಬಳಿಸಿಕೊಂಡು ಬಂದಿರುತ್ತವಲ್ಲವೆ? ಪುರಾಣಗಳಲ್ಲಿ ಮೂಲ ಸತ್ಯ-ಮೂಲ ತತ್ವಗಳನ್ನೇ ಮನೋಹರವಾದ ಶೈಲಿ, ವರ್ಣನೆ, ಅಲಂಕಾರಗಳನ್ನು ಯಥೇಚ್ಛವಾಗಿಯೂ ಲೀಲಾ ಜಾಲವಾಗಿಯೂ ಸ್ಫುರಿಸಿಬಿಟ್ಟರು. ಅರಸನ ಅರಮನೆ, ಆ ಸ್ಥಾನಗಳನ್ನು ಬಣ್ಣಿಸುವಾಗ ವಜ್ರ ವೈಡೂರ್ಯಗಳ ಅಖಂಡ ಭಂಡಾರವನ್ನೂ ಚಿನ್ನಬೆಳ್ಳಿಗಳ ಪರ್ವತಗಳನ್ನೂ

ಪರಿಮಳ ದ್ರವ್ಯಗಳ ಸಮುದ್ರವನ್ನೂ ಸೂರೆಗೊಂಡಂತೆ, ಅಸಮಾನವಾದ ವರ್ಣವೈಖರಿಯಿಂದ ಚಿತ್ರಿಸಿಟ್ಟರು. ಋಷಿ–ಮುನಿಗಳ ಆಶ್ರಮ–ಕುಟೀರಗಳನ್ನು ಬಣ್ಣಿಸುವಾಗ ಶಾಂತರಸದ ಮಹಾಪ್ರವಾಹದಲ್ಲಿ ಮುಳುಗಿ ತೇಂಕಾಡುವ ರಮ್ಯವಾದ ಸಾತ್ವಿಕ ಚಿತ್ರಗಳನ್ನು ಬರೆದುಬಿಟ್ಟರು. ಹಾಗೆಯೇ, ದುಃಖ, ದಾರಿದ್ರ್ಯ, ಕ್ರೋಧ, ಮದ, ಮಾತ್ಸರ್ಯಗಳ ಪಾತ್ರ ನಿರ್ಮಿತಿಯಲ್ಲಿ ತತ್ತತ್ ಪಾತ್ರಗುಣ ಕಕ್ಷೆಯೊಳಗೆ ಅಡಗಿಸಲಾಪಷ್ಟು ತತ್ತತ್ ರಸೋತ್ಪಾದಕ ವರ್ಣನೆಗಳನ್ನು ಮಾಡಿಬಿಟ್ಟರು. ಆಧುನಿಕ ಯಂತ್ರೋಪಕರಣಗಳ ಸಂಶೋಧನೆಯ ಫಲವಾಗಿಯೂ ಪುಣ್ಯ ಪಾಪ ಭೀತಿಯು ಕಡಿಮೆಯಾದುದರಿಂದಲೂ ವ್ಯಕ್ತಿ ಮತ್ತು ಸಮಾಜ ಜೀವನದಲ್ಲಿ ಪರಸ್ಪರ ಅಂತರವು ಅತಿಯಾಗಿ ಹೋಗಿದೆ. ಇದನ್ನು ಸೂಕ್ಷ್ಮವಾಗಿ ಅರಿಯುವ ಚಿತ್ತಧೃತಿ ಇಲ್ಲದೆ ನಾವು ಪ್ರಗತಿ ವಿಗತಿಯ ಅಣಕು ಮಾತುಗಳಲ್ಲಿ ಮಗ್ನರಾಗುತ್ತಿರುವೆವು.

ಅತಿ-ಮಿತಿ

ಅತಿವರ್ತನವೇ ಪಾಪ. ‘ಅತಿ’ಯನ್ನು ‘ಮಿತಿ’ಗೆ ತರುವಲ್ಲಿ ಹಿಂಸೆಯ ಉಪಯೋಗಕ್ಕೂ ಅವಕಾಶವಿದೆ. ‘ಸಾಮದಾನ ಭೇದದಂಡ’ ಎಂಬೀ ಚತುರೋಪಾಯಗಳು ಧರ್ಮನೀತಿಯಲ್ಲಿ ಉಕ್ತವಾಗಿವೆ. ಮೊದಲ ಮೂರು ಮಾರ್ಗಗಳು ನಿಷ್ಫಲವಾದ ಮೇಲೆಯೇ ರಾಮನೂ, ಧರ್ಮರಾಯನೂ, ಪರುಶುರಾಮನೂ, ನಾರಸಿಂಹನೂ, ಭೂವರಾಹನೂ, ಮತ್ಸ್ಯ ಕೂರ್ಮಾದ್ಯವತಾರಿಕರೂ ದಂಡಮಾರ್ಗ ಪ್ರವರ್ತಕರಾದರು. ಈ ದೃಷ್ಟಿಯಿಂದ ಪುರಾಣಗಳನ್ನು ಅಭ್ಯಸಿಸಬೇಕು. ಕ್ಷತ್ರಿಯರ ಅತಿವರ್ತನದಿಂದ ಬ್ರಾಹ್ಮಣ ವರ್ಗದ ‘ಸುಖ ಶಾಂತಿ’ ಗೆ ಭಂಗ ಬರುತ್ತಲೇ ದ್ವಿಜೋತ್ತಮನಾದ ಪರಶುರಾಮನು ಕೊಡಲಿಯನ್ನು ಮಸೆದು ರಕ್ತಪಾತಕ್ಕಣಿಯಾದನು. ಜನಕ, ದಶರಥನಂತಹ ರಾಜರ್ಷಿಗಳನ್ನು ಅವನೆಂದೂ ಕೆಣಕಲಿಲ್ಲ. ವರ್ಗಾವರ್ಗಾಭಿಮಾನದ ಅತಿರೇಕದಿಂದ ಕೊಬ್ಬಿದ ಕ್ಷುದ್ರ ಕ್ಷತ್ರಿಯರನ್ನಷ್ಟೇ ಆವನು ಇಪ್ಪತ್ತೊಂದು ಬಾರಿ ಕೊಡಲಿಗೆ ತುತ್ತು ಮಾಡಿದನು. ರಾಮಾವತಾರದಲ್ಲಿ ರಾಮನೂ, ಕೃಷ್ಣಾವತಾರದಲ್ಲಿ ಕೃಷ್ಣ—ಪಾಂಡವರೂ, ಅದೇ ಮೇರೆಗೆ ಉಳಿದ ಅವತಾರಗಳಲ್ಲಿ ಆಯಾ ಅವತಾರಿಕರೂ ಅನ್ಯಾಯ, ಅತ್ಯಾಚಾರಿಗಳ ಡಂಭಮಾನ ಮದಾನ್ವಿತರಾದ ಹಿಂಸ್ರಮಾನವರನ್ನು ಸಂಹರಿಸಲು ಹೋರಾಡಿದರು.

ಗೀತೆಯಲ್ಲಿ:—

ಕಾಮಮಾಶ್ರಿತ್ಯ ದುಷ್ಪೂರಂ, ದಂಭಮಾನಮದಾನ್ವಿತಾಃ। ಮೋಹಾದ್ಗೃಹಿತ್ವಾ ಸದ್ಗ್ರಹಾನ್, ಶ್ರವರ್ತಂತೇಽ ಶುಚಿವ್ರತಾ:॥ (ಅ. ೧೬–೧೦)
(ತೃಪ್ತಿಯನ್ನೇ ಅರಿಯದ ಬಯಕೆಗಳನ್ನಿಟ್ಟುಕೊಂಡು ದಂಭ, ಮಾನ, ಮಾದಗಳಿಂದ ಕೂಡಿ, ದುರುದ್ದೇಶದಿಂದಲೂ, ದುರಾಚಾರದಿಂದಲೂ ವರ್ತಿಸುವವರು ಅಸುರರು.)

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ।
ಮಾಮಾತ್ಮ ಪರದೇಹೇಷು ಪ್ರದ್ವಿಷಂತೋಽಭ್ಯ ಸೂಯಕಾಃ

ಅ. ೧೬-೧೮

(ದುರಭಿಮಾನ, ಬಲಾತ್ಕಾರ, ಸೊಕ್ಕು, ಮತ್ತು ಕಾಮ-ಕ್ರೋಧ ಈ ಐದು ಗುಣಗಳಿಂದ ತುಂಬಿ, ತನ್ನೊಳಗೂ, ಇತರರೊಳಗೂ ಯಾವ ಪರಮೇಶ್ವರನು ಇರುವನೋ ಆತನ ಮೇಲೆ ಹೊಟ್ಟೆಕಿಚ್ಚು ಮಾಡುವರು.)

ಅಸುರವೃಂದ

ಇಂತಹ ಅಸುರವೃಂದ ಎಲ್ಲ ಕಾಲಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಇದೆ. ಇದಕ್ಕೆ ಜಾತಿ—ಭೇದವಿಲ್ಲ .ದೇಶಭೇದವಿಲ್ಲ. ಆದರೆ, ಒಮ್ಮೊಮ್ಮೆ ಪುರೋಹಿತನಾಗಿ ನಿಲ್ಲುವ ಮುಖಂಡನ ಅತಿ ಪ್ರಭಾವದ ಪರಿಣಾಮವಾಗಿ, ಒಂದು ಜಾತಿಯು, ಇಲ್ಲವೆ ಒಂದು ಜನಾಂಗದ ಬಹುಸಾಂಖ್ಯರು ಪುರೋಹಿತನ ಅಸುರ ಮಾರ್ಗವನ್ನೇ ಅವಲಂಬಿಸುವುದೂ ಉಂಟು. ರಾವಣನ ದುಷ್ಕಾರ್ಯಕ್ಕೆ—ತಮಗದು ಸೇರದಿದ್ದರೂ—-ದೈತ್ಯ ಕುಲವೆಲ್ಲ ಬೆಂಬಲ ಕೊಟ್ಟು, ರಾಮನ ವಿರುದ್ಧ ಹೋರಾಡಿತಲ್ಲವೆ ? ಕೌರವನ ರೀತಿ ಅನೀತಿಯೆಂದು ಅರಿತರೂ, ಹನ್ನೊಂದು ಅಕ್ಷೌಹಿಣಿ ಸೇನೆ ಅವನನ್ನು ಎತ್ತಿ ಹಿಡಿಯಲು ಕಾಳಗ ತೊಟ್ಟಿತಲ್ಲವೆ ? ಹಿಟ್ಲರನ ಹಾದಿ ತಪ್ಪೆಂದು ತಿಳಿದಿದ್ದರೂ, ಜರ್ಮನ್ ಜನಾಂಗದ ಬಹುಮತವು ಹಿಟ್ಲರನನ್ನೇ ಹೊತ್ತಾಡಿತಲ್ಲವೆ ? ಹಾಗೆಯೇ, ನಮ್ಮ ದೇಶದಲ್ಲಿಂದು ಧರ್ಮಾಂಧತೆ, ಜಾತ್ಯಂಧತೆ, ಧ್ಯೇಯಾಧಂತೆ, ಪಕ್ಷಾಂಧತೆಗಳು ತತ್ತತ್ ಕ್ಷೇತ್ರ ಪುರೋಹಿತರ ಅತಿ ವರ್ತನದಿಂದಾಗಿ ಹಿಂಸಾಕರವಾದ ವಿಪ್ಲವಕ್ಕೆಡೆಗೊಡುತ್ತಿವೆಯಲ್ಲವೆ ?

ವಿಮರ್ಶೆ

ಜ್ಞಾನಶೂನ್ಯನ ಪಂಚೇಂದ್ರಿಯ ಪಂಚಾಗ್ನಿ
ಜ್ಞಾನಿಯಿಂದ್ರಿಯ ಪಂಚರತ್ನಾ॥
ಜ್ಞಾನವಿಲ್ಲದೆ ಭೋಗಿಸುವ ಭೋಗಿ ಭವರೋಗಿ
ಜ್ಞಾನ ವಿಡಿದ ಭೋಗಿ ಯೋಗಿ॥-

ರತ್ನಾಕರ ವರ್ಣಿಯ ಈ ಮಾತು ಪ್ರಪಂಚದ ಸರ್ವ ಭೋಗಾನಂದಗಳಿಗೂ ಅನ್ವಯಿಸುವಂತೆ ತೋರುವುದು. ಮರ ಹಣ್ಣು ಬಿಡುವುದರಿಂದಲೂ ಹಣ್ಣು ರಸದುಂಬುವುದರಿಂದಲೂ ಕೃತಾರ್ಥವೆನಿಸುವುದು. ಕೃತಾರ್ಥತೆಯೇ ಆನಂದ. ಆನಂದವೇ ಸರ್ವ ಜೀವಧ್ಯೇಯ. ಸಾಹಿತ್ಯವು ಆನಂದ ಸಾಮ್ರಾಜ್ಯ ಆ ರಾಜ್ಯದಲ್ಲಿ ಕಾವ್ಯಕ್ಕೆ ಅಗ್ರಪಟ್ಟ ಬಂದಿದೆ. ನೂರುಪುಟಗಳ ತುಂಬ ತುಸುತುಸುವಾಗಿ ಹರಡಿಕೊಂಡ ರಸಸ್ರೋತವನ್ನು ಒಂದೇ ಒಂದು ಪುಟದ ಕಾವ್ಯ ದ್ರೋಣಿಯಲ್ಲಿ ಹಿಡಿದಿಟ್ಟುಕೊಳ್ಳಬಹುದು. ಹತ್ತು ದಿನದ ಔಷಧದ ಪರಿಣಾಮವನ್ನು ಒಂದೇ ಇಂಜೆಕ್ಶನ್ ಉಂಟು ಮಾಡಿಕೊಡುವುದಲ್ಲವೆ? (ಇಂಜೆಕ್ಶನ್ ತೀವ್ರ ಪರಿಣಾಮಕಾರಿಯಾದರೂ, ಹೊಟ್ಟೆಗೆ ಔಷಧವನ್ನು ಕೊಡಲೇಬೇಕು. ಹಾಗೆಯೇ ಕಾವ್ಯವೂ, ಕಾವ್ಯವಲ್ಲದ ಸಾಹಿತ್ಯಪ್ರಕಾರಗಳೂ ಎರಡೂ ಆನಂದ ಪ್ರಾಪ್ತಿಗೆ ಬೇಕೇಬೇಕು.) ಕಾವ್ಯದಿಂದ, ಬರುವ ಆನಂದವನ್ನು ಕಾವ್ಯಾನಂದವೆಂದು ಹಿಂದಿನವರು ಹೆಸರಿಸಿದ್ದಾರೆ. ಆನಂದವನ್ನುಂಟು ಮಾಡುವ ಶಕ್ತಿಇಲ್ಲದ ಕಾವ್ಯವು, ಕಾಗದದ ಹೂವಿನಂತೆ, ಮಣ್ಣಿನ ಹಣ್ಣಿನಂತೆ ಹೆಸರಿಗೆ ಕಾವ್ಯವೇ ಹೊರತು, ನಿಜವಾದ ಕಾವ್ಯವಲ್ಲ. ಆನಂದವೆಂದರೇನೆಂದು ತಿಳಿದು ಕೊಳ್ಳುವುದು ಅತ್ಯಗತ್ಯ. ರಸದುಂಬುವುದೇ ಆನಂದ. ಪಕ್ವವಾದಾಗಲೇ ರಸಸ್ಫುರಿಸುವುದು;ರಸದುಂಬಿದಾಗಲೇ ಪಕ್ವವಾಗುವುದು. ಜೀವನದ ಫಲ(ಸಾಫಲ್ಯ) ಪಕ್ವತೆಯೇ ಆನಂದ. ಎಲ್ಲ ಜೀವಿಗಳು ಆನಂದವನ್ನೇ ಅಂತಿಮ ಧ್ಯೇಯವಾಗಿಟ್ಟುಕೊಂಡಂತೆ, ಎಲ್ಲ ಶಾಸ್ತ್ರಗಳೂ

ಸತ್ಯವನ್ನೇ ಕೊನೆಯಗುರಿಯಾಗಿ ಹೇಳುತ್ತಿವೆ. ಈ ಸತ್ಯಸ್ಥಿತಿಗೆ ಮೋಕ್ಷ ಸ್ಥಿತಿಯೆಂದೂ ಬ್ರಹ್ಮಾನಂದವೆಂದೂ ವಿಜ್ಞಾನಿಗಳೂ ವೇದಾಂತಿಗಳೂ ಹೇಳುತ್ತಾರೆ. ಕಾವ್ಯಾನಂದವು ಬ್ರಹ್ಮಾನಂದಕ್ಕಿಂತ ಸ್ವಲ್ಪ ಕೆಳಗಿನದೆಂದೂ ವಿದ್ಯಾರಣ್ಯ ಮುನಿಗಳು ಅಭಿಪ್ರಾಯ ಪಟ್ಟಿದ್ದಾಗೆ ಸತ್ಪುರುಷರು ಸಾಧಿಸತಕ್ಕ ಚತುರ್ವಿಧ ಪುರುಷಾರ್ಥಗಳಲ್ಲಿ, ಮೋಕ್ಷವೇ ಕೊನೆಯ ಪುರುಷಾರ್ಥವೆಂದೂ, ಆ ಪುರುಷಾರ್ಥವನ್ನೇ " ಪ್ರಧಾರಿತಾರ್ಥ " ವಾಗಿಟ್ಟುಕೊಂಡು ಬುಧಜನರು 'ಭುವನ ಹಿತಾರ್ಥ'ವಾಗಿ ಕಾವ್ಯರಚಿಸಿದರೆಂದೂ ನೃಪತುಂಗನು ಹೇಳಿರುವನು.ಆನಂದವು ಪಕ್ವತೆಎಂದೆನಲ್ಲವೆ? ಕಾವ್ಯವು ಕೊಡುವ ಆನಂದವು ತೃಪ್ತತೆ. ತೃಪ್ತತೆಯೇ ಪಕ್ವತೆ. ರಸದುಂಬಿದಾಗ ಉಂಟಾಗುವ ಸ್ಥಿತಿಯೇ ತೃಪ್ತಿ.

ದೃಶ್ಯರೂಪದಿಂದಲೂ ಶ್ರವ್ಯರೂಪದಿಂದಲೂ ಕಾವ್ಯವು ರಸೋತ್ಪಾದನೆ ಮಾಡಿ, ರಸದುಂಬಿದ ಆನಂದಸ್ಥಿತಿಯನ್ನು ತಂದುಕೊಡುವುದು. ಈ ಆನಂದಸ್ಥಿತಿಯನ್ನು ಅನುಭವಿಸುವವರೇ ಕಾವ್ಯ ರಸಿಕರು. ಅಂತಹ ರಸಿಕರ ಆನಂದವನ್ನು ಹೆಚ್ಚಿಸುವಂತೆ ಕಾವ್ಯತುಲನೆ ಮಾಡುವ ವಿಮರ್ಶಕರಿಗೆ ಕಾವ್ಯಮೀಮಾಂಸಕರೆಂದು ಹೇಳಲಾಗಿದೆ: ಕಾವ್ಯಮೀಮಾಂಸಾ ಚಾತುರ್ಯವು ಜ್ಞಾನಶೂನ್ಯನ ಪಂಚೇಂದ್ರಿಯಗಳಂತೆ ಆತ್ಮದಹನ ಮಾಡುವ ಪಂಚಾಗ್ನಿಯಾಗಬಾರದು; ಜ್ಞಾನಿಯ ಪಂಚೇಂದ್ರಿಯಗಳಂತೆ, ಹಿತವರ್ಧಕವಾಗಿ ಪಂಚರತ್ನವಾಗಬೇಕು. ವಿಮರ್ಶೆ ಎಂದೊಡನೆ, ದೋಷಗಳನ್ನಷ್ಟೇ ಎತ್ತಿ ತೋರುವುದೆಂದು ತಿಳಿಯಬಾರದು. ಶರೀರ ಚಿಕಿತ್ಸೆ ಮಾಡುವಾಗ, ರೋಗನಾಶಕ ಔಷಧಗಳೊಂದಿಗೆ, ಆರೋಗ್ಯ ಬಲವರ್ಧಕ ಔಷಧಗಳನ್ನೂ ಯೋಗ್ಯ ಪ್ರಮಾಣದಲ್ಲಿ ಕೂಡಿಸಿಕೊಡುವಂತೆ, ಕಾವ್ಯ ವಿಮರ್ಶೆಯಲ್ಲಿ ತೊಡಗಿದಾಗ ದೋಷೋದ್ಘಾಟನ ಮಾಡುತ್ತ, ಗುಣಪ್ರಶಂಸೆಯನ್ನೂ ಮಾಡಬೇಕು. ಇಂದ್ರಿಯ ವ್ಯಾಪಾರ ಜನ್ಯವಾದ ಯಾವುದೂ ಸಂಪೂರ್ಣ ದೋಷರಹಿತವಾಗಿರಲಾರದಲ್ಲವೆ?

ವಿಮರ್ಶೆಯು ಕೃತಿಯ ಒಳಹೊರಮೈಗಳೆರಡನ್ನೂ ತೂಗಿ ನೋಡಬೇಕು. ವಾಕ್ಕು ಹೊರಮೈಯಾದರೆ ಅರ್ಥ ಒಳಮೈ. ಹೊರಗಷ್ಟೇ ಚಂದವಾಗಿದ್ದು, ಒಳಗೆ ಕಲ್ಮಷ ತುಂಬಿದ್ದರೆ, ಅದು ನಿಜವಾದ ಸೌಂದರ್ಯವಾಗಲಾರದು. " ತೋಟಸಿಂಗಾರ, ಒಳಗೆ ಗೋಳಿ ಸೊಪ್ಪು " ಎಂಬ

ಗಾದೆಯ ಮಾತಿನಂತೆ, ಬಾಹ್ಯದಲ್ಲಿ ಮಾತ್ರವೇ ಶುಚಿಯಾಗಿದ್ದು ಅಂತ ರಂಗದಲ್ಲಿ ಅಶುಚಿಯಾಗಿರುವುದು ಎಂದಿಗೂ ಒಳ್ಳೆಯ ಬಾಳಿನಿಸಲಾರದು. ಅದೇರೀತಿ, ಒಳಗೆ ಶುಚಿಯಾಗಿದ್ದರೂ, ಹೊರಗೆ ಶುಚಿಯಾಗಿಲ್ಲದೆ ಹೋದರೆ ಕ್ರಮೇಣ ಒಳಗಣ ಶುಚಿತ್ವಕ್ಕೂ ಧಕ್ಕೆಬರುವುದು. ಸಾಮಾಜಿಕ ರಿಗಂತೂ ಅಸಹ್ಯವೆನಿಸಿ, ಬಾಹ್ಯದಲ್ಲಿ ಅಶುಚಿಯಾದ ವ್ಯಕ್ತಿಯನ್ನು ದೂರಿ ರಿಸುವ ಪ್ರಸಂಗಉಂಟಾಗುವುದು. ಅಮೇಧ್ಯ ಮೆತ್ತಿದ ಗಿಂಡಿಯಲ್ಲಿ ಹಾಲ್ದು ಬಿಸಿ ಕುಡಿಯ ಕೊಟ್ಟರೆ ಹೀಕರಿಸದೆ ಕುಡಿಯಲಾಗುವುದೆ? ಹಾಗೆಯೇ ಶುಚಿಯೂ, ರುಚಿಯೂ ಆದಸಾಹಿತ್ಯವು ಮೃದುಮಧುರವಾದ ಪದಬಂಧ ಉಳ್ಳುದಾಗಿರಬೇಕು. ಹಾಗಿರುವುದೇ ವಾಗರ್ಥಗಳ ಸಂಪೃಕ್ತಿಯೆಂದು ಕಾಲಿದಾಸನು ಸಾರಿದ್ದಾನೆ. ಹಿಂದಣವರ ಸಾಹಿತ್ಯದಲ್ಲಿ ವಾಗರ್ಥಸಂಪೃಕ್ತಿ ಓತಪ್ರೋತವಾಗಿ ತುಂಬಿಕೊಂಡಿದೆ. ತೀಕ್ಷ್ಣವಾಗಿ ವಿಮರ್ಶಿಸಿ ನೋಡಿದಲ್ಲಿ ಅರ್ಥದೋಷವೆಲ್ಲಿಯಾದರೂ ಕಂಡು ಬರಬಹುದೇ ಹೊರತು, ಪದದೋಷ ವಾಗಲೀ ಶೈಲಿ ದೋಷವಾಗಲೀ ಕಂಡು ಬರಲಾರದು. ಅದರ ಕಾರಣವಿಷ್ಟೆ. ಛಂದಸ್ಸು, ವ್ಯಾಕರಣ, ಅಲಂಕಾರಗಳನ್ನು ಚೆನ್ನಾಗಿ ಅಭ್ಯಾಸಮಾಡುತ್ತಲೂ ಪೂರ್ವ ಕಾವ್ಯಗಳನ್ನು ಪ್ರೀತಿಯಿಂದ ಓದುತ್ತಲೂ ಅವರು ಕೃತಿಕರ್ತೃತ್ವ (ಯೋಗ್ಯತೆ) ಶಕ್ತಿಯನ್ನು ಗಳಿಸಿಕೊಂಡವರಾಗಿದ್ದರು.

ಹೀಗೆಂದ ಮಾತ್ರಕ್ಕೆ ಸ್ವಾಭಾವಿಕವಾಗಿ ಸ್ಫುರಿಸುವ ಕಾವ್ಯಭಾವಗ ಳನ್ನು ಶಬ್ದಿಸಬಾರದೆಂದು ತಿಳಿಯಕೂಡದು. ಸಂಪನ್ನತೆಯಿಂದುಕ್ತವಾದ ಸ್ವಾಭಾವಿಕ ಕೃತಿಯು ಸಂಪನ್ನತೆ ಇಲ್ಲದ ಕೃತಿಗಿಂತ ಉತ್ತಮವಲ್ಲವೆ? ಸ್ವಾಭಾವಿಕ ಸ್ಫೂರ್ತಿಯಿಂದುಕ್ಕುವ ಯಾವ ವ್ಯಕ್ತಿಯ ಕೃತಿಯಾದರೂ ವಿಶಿಷ್ಟ ಅಭ್ಯಾಸ ಸಂಸ್ಕಾರ ಲೋಕಾನುಭವಗಳಿಲ್ಲದೇ ಹೋದರೆ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮಸ್ಥಾನವನ್ನು ಪಡೆಯಲಾರದು.

ಅದರಿಂ ಪರಮಾಗಮುಕೋ!
ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ||
ಮೊದಲೊಳ್ ಕಲ್ತಂಗಲ್ಲದೆ
ಪದದೊಳ್ ಜಾಣುಂ ಬೆಡಂಗುಮುಕ್ಕುಮೆಕೃತಿಯೊಳ್||

ಎಂಬುದಾಗಿ ನಮ್ಮ ಆದ್ಯ ಆಲಂಕಾರಿಕನೂ ಲಾಕ್ಷಣಿಕನೂ ಆದ ನೃಪತುಂಗನು ಹೇಳಿರುವುದು ಗಮನಾರ್ಹವಾಗಿದೆ. ಕವಿ ಕೋವಿದರೆಂದು ಕೀರ್ತಿವೆತ್ತ ಇಂದಿನ ನಮ್ಮ ನಾಡಿನಲ್ಲಿ ಅಲ್ಪಸಂಖ್ಯಾತರೇ ಆದ, ಕೃತಿಕರ್ತೃ ಗಳೆಲ್ಲ "ಪೂರ್ವ ಕಾವ್ಯರಚನೆಗಳನ್ನೆಲ್ಲ ಮೊದಲೊಳ್ ಕಲ್ತ" ವರೇ ಆಗಿರುವ ರು. ಹಾಗೆ ಕಲಿಯದೆ "ನೆಗಳ್ತೆಗಾಟಿಸಿ" ಬರೆಯುವ ಲೇಖಕ ವೃಂದದ ರಚ ನೆಗಳೆಲ್ಲ "ಮಳಲಮನೆ"ಯಂತೆ ಅನತಿಕಾಲದಲ್ಲೇ ಕುಸಿದುಬೀಳುವುವು.

ಸಾಹಿತ್ಯದಿಂದ ಅಕ್ಷರಕ್ಕೆ !

ಕೇಶಿರಾಜನು ತನ್ನ "ಶಬ್ದಮಣಿ ದರ್ಪಣ" ವೆಂಬ ವ್ಯಾಕರಣ ಗ್ರಂಥದ ಆದಿಯಲ್ಲಿ,

ಆರಯೆ ತಚ್ಛಾಸ್ತ್ರವ್ಯವ—
ಹಾರ ಜ್ಞಾನಾರ್ಥವಾಗಿ ಪೇಳಲ್ಪಡುಗುಂ ॥
ಧೀರರಿನಕ್ಷರ ಸಂಜ್ಞಾ –।
ಕಾರಂ ವ್ಯಾಕರಣದಾದಿಯೊಳ್........॥

ಎಂದಿರುವನು. ವ್ಯಾಕರಣಕ್ಕೆ 'ಅಕ್ಷರ ಸಂಜ್ಞಾಕಾರ' ವು ಮೂಲ. ಅಕ್ಷರವೆಂದರೆ 'ನಾಶವಿಲ್ಲದ್ದು;' ಅದೇ ಪರಾತ್ಪರ ಶಕ್ತಿ. ಅದರ ಸಂಜ್ಞೆ (ಚಿಹ್ನೆ) ಯ ಆಕಾರವೇ ಸ್ವರ-ವ್ಯಂಜನಾದಿ ವರ್ಣ (ಅಕ್ಷರ-ಲಿಪಿ) ಗಳು. ಅಕ್ಷರವನ್ನು ಕಲಿತಲ್ಲದೆ, ವ್ಯಾಕರಣವೇ ಮೊದಲಾದುವು ತಿಳಿಯಲಾರದು. ಆದ್ದರಿಂದ ಸಾಹಿತ್ಯದ ಹಬ್ಬುಗೆಯನ್ನೂ ಆನಂದ ರಸಾಸ್ವಾದನವನ್ನೂ ಬಯಸುವವರೆಲ್ಲ ಮೊತ್ತ ಮೊದಲು ರಾಷ್ಟ್ರವನ್ನೆಲ್ಲ ಸಾಕ್ಷರವಾಗಿ ಮಾಡಲೆತ್ನಿಸಬೇಕು.

ವ್ಯಾಕರಣದಿಂದೆ ಪದಂ ಆ।
ವ್ಯಾಕರಣದ ಪದದಿನರ್ಥಂ; ಅರ್ಥದೆತತ್ವಾ ॥
ಲೋಕಂ; ತತ್ವಾಲೋಕದಿಂ।
ಆಕಾಂಕ್ಷಿಪ ಮುಕ್ತಿಯಕ್ಕುಂ; ಅದೆ ಬುಧರ್ಗೆ ಫಲಂ ॥

ಎಂಬುದಾಗಿ ಕೇಶಿರಾಜನು ಸಾಹಿತ್ಯದ ಅಂತಿಮೋದ್ದೇಶವನ್ನು ಸಾರಿದ್ದಾನೆ ವ್ಯಾಕರಣ ಬದ್ಧವಲ್ಲದ ಪದಪ್ರಯೋಗದಿಂದ ನಿಜವಾದ ರಸಪ್ರಯೋಜನವಾಗಲಾರದು; ರಸಾನಂದವಾಗದೆ ಅಂತಃ ಸಂಸ್ಕಾರ ದೊರೆಯದು; ಅಂತಸ್ಸಂಸ್ಕಾರವಿಲ್ಲದೆ ಮೋಕ್ಷವೆಂಬ ಬ್ರಹ್ಮಾನಂದವು ಸಿದ್ಧಿಯಾಗದು. ಕನ್ನಡ ಲಾಕ್ಷಣಿಕನಾದ ನೃಪತುಂಗನು ಕೂಡಾ ತನ್ನ "ಕವಿರಾಜ ಮಾರ್ಗ" ದಲ್ಲಿ

ಅಧಿಕೃತ ಸತ್ಪುರುಷಾರ್ಥ ।
ಪ್ರಧಾನ ಧರ್ಮಾರ್ಥ ಕಾಮ ಮೋಕ್ಷಂ-ಗಳವಾ ॥
ಬುಧಜನ ವಿವಿಕ್ತ ಕಾವ್ಯ ।
ಪ್ರಧಾರಿತಾರ್ಥಂಗಳ್ ಅಖಿಲ ಭುವನ ಹಿತಂಗಳ್ ॥

ಎಂದಿರುವನು. ಸಾಹಿತ್ಯೋದ್ಯಾನದ ಮಂದಾರ ಸುಮದಂತಿರುವ ಕಾವ್ಯಗಳು ಸಾಧಿಸುವ ಉದ್ದೇಶವು ಸಮಸ್ತ ಲೋಕಕ್ಕೂ ಹಿತಪ್ರದವಾದ ಚತುರ್ವಿಧ ಪುರುಷಾರ್ಥಗಳಾಗಿವೆಯೆಂದು ಅವರ ತಾತ್ಪರ್ಯ. ಧರ್ಮ, ಅರ್ಥ, ಕಾಮ, ಮೋಕ್ಷ–ಈ ನಾಲ್ಕು ಪುರುಷಾರ್ಥಗಳಿಗೂ ಧರ್ಮವೇ ಆಧಾರ; ಅದೇ ಮೊದಲು; ಅದೇ ಮುಖಂಡ. ಅದರ ಮುಖಂಡತ್ವವಿಲ್ಲದ ಅರ್ಥ (ಹಣ) ಕಾಮ (ಬಯಕೆ, ಭೋಗ) ಗಳು ಮೋಕ್ಷದ ದಾರಿಗೆ ಒಯ್ಯಲಾರವು. ಧರ್ಮವನ್ನು ಹೃದಯದಲ್ಲಿ ಸ್ಥಾಪಿಸುವುದೇ ಸಾಹಿತ್ಯ-ಸಂಸ್ಕೃತಿಯ ಗುರಿ. ಧರ್ಮದಿಂದ ಹುಟ್ಟುವ ಆನಂದ ಭೋಗಗಳು ಹಿತ–ಮಿತವಾದ ಸಾತ್ವಿಕ ಭೋಗಾನಂದಗಳು. ಅದರಿಂದ ಇಹದಲ್ಲಿಯೂ ಸುಖ–ಶಾಂತಿ ಸಮಾಧಾನಗಳು ಉಂಟು; ಪರದಲ್ಲಿಯೂ ಉಂಟು.

ರಸವೇ ಸೌಂದರ್ಯ

ಹೃದಯವು ಕರಗುವುದೇ ರಸ. ಸೌಂದರ್ಯ ಪದಕ್ಕೆ ಸುಂದ್ ಎಂಬುದು ಧಾತುವಲ್ಲವೆ ? ರಸ ಹುಟ್ಟಿಸುವುದೆಂದೇ ಆ ಧಾತುವಿನ ಅರ್ಥ. ಸುಂದರವಾದ ವಸ್ತುವನ್ನು ನೋಡುತ್ತಲೇ ಹೃದಯದಲ್ಲಿ ಪ್ರೇಮ ಮತ್ತು ಮೋಹ ರಸಗಳು ಹುಟ್ಟುವುವು. ಅದೇ ಮೇರೆಗೆ ದುಃಖದ ದೃಶ್ಯ, ರೌದ್ರದ ದೃಶ್ಯ, ವೀರತ್ವದ ದೃಶ್ಯ–ಇವುಗಳಿಂದ ಆಯಾ ರಸಗಳು ಹುಟ್ಟುತ್ತವೆ. ವಿವಿಧ ದೃಶ್ಯಗಳನ್ನೆಲ್ಲ ಶಬ್ದಗಳ ಮುಖಾಂತರವಾಗಿ ಮನಸ್ಸಿನ ಮೇಲೆ ಅಚ್ಚೊತ್ತುವುದರಿಂದ, ಮನಸ್ಸು ರಸದಿಂದ ತುಂಬಿ ಹೋಗುವುದು. ಬಡವನ ಬಾಳಿನ ದುಃಖವನ್ನು ಕುರಿತು ಓದುವ ಶ್ರೀಮಂತನ ಮನಸ್ಸಿನಲ್ಲಿ ಬಡವರ ಬಗ್ಗೆ ಕರುಣೆ ಹುಟ್ಟುವುದು; ತನ್ನ ಹಿಡಿತವನ್ನು ಸಡಲಿಸಬೇಕೆಂಬ ಬುದ್ಧಿ ಬರುವುದು. ಅದೇ ರೀತಿ ಬೇರೆ ಬೇ– ದೃಶ್ಯ-ಶ್ರವ್ಯಗಳಿಂದ ಬೇರೆ ಬೇರೆ ರಸಗಳುಂಟಾಗಿ, ಆ ರಸಸ್ಫೂರ್ತಿಯಿಂದ ಕ್ರಿಯಾಸ್ಫೂರ್ತಿಯೂ ಉಂಟಾಗುವುದು. ಅಂತಹ ಕ್ರಿಯಾಚರಣದಿಂದ ದುಃಖ ನಿವಾರಣೆಯಾಗಿ,

ಸುಖಾನಂದವು ಎಲ್ಲರಿಗೂ ದೊರೆಯುವಂತಾಗುವುದು. ರಸವಿಲ್ಲದವರ ಹೃದಯವು ಮೃತ್ಯುವಿನ ಮರುಭೂಮಿಯೇ ಸರಿ. ಅಂತವರ ಮೈ ಕೈ ಕಟ್ಟು ಅಂದವಾಗಿ ಕಂಡರೂ ಅವರು ನಿಜವಾದ ಸೌಂದರ್ಯವಿಲ್ಲದ ಕುರೂಪಿಗಳೇ. ನಿಜವಾದ ಸೌಂದರ್ಯವನ್ನುಂಟುಮಾಡಿಕೊಡುವುದೇ ಸಾಹಿತ್ಯದ ಒಂದು ಮುಖ್ಯೋದ್ದೇಶವಾಗಿದೆ. ಆ ಸೌಂದರ್ಯವೇ ಧರ್ಮ.

ಧರ್ಮವು ಮಿತವನ್ನು ಬೋಧಿಸುವುದು. ಮಿತಾಚರಣೆಯೇ ಪುಣ್ಯ. ಅಮಿತಾಚರಣೆಯೇ ಪಾಪ. ಅದೇ ಸ್ವೈರವೃತ್ತಿ. ಇನ್ನೊಬ್ಬರ ಹೇಳಿಕೆ ಕೇಳಿಕೆಗಳನ್ನೂ, ಮಾನಾಪಮಾನಗಳನ್ನೂ ಲೆಕ್ಕಿಸದೆ ನಡೆ ನುಡಿಯುವುದು ಸ್ವೈರಾಚಾರವೆ; ಹಾಗೆಯೇ ಅನ್ಯರ ಕಷ್ಟ ನಷ್ಟ, ಸುಖ ದುಃಖಗಳನ್ನು ಗಣನೆಗೈಯದೆ ಹಣವನ್ನು ರಾಶಿ ರಾಶಿಯಾಗಿ ಗಳಿಸುವ ಧನಿಕರ ನಡತೆಯು ಸ್ವೈರಾಚಾರವೇ. ಇಂತಹ ಉಚ್ಛೃಂಖಲ ವೃತ್ತಿಯನ್ನು ತಡೆಗಟ್ಟಲು ಸಾಮಾಜಿಕ ರಾಜಕೀಯ ಕಟ್ಟು ಕಟ್ಟಳೆಗಳಿರಬೇಕು. ಅದಕ್ಕಾಗಿಯೇ ಗುರುಪೀಠಗಳೂ, ಸರಕಾರಗಳೂ ಏರ್ಪಟ್ಟಿವೆ. ಅವುಗಳ ಶಕ್ತಿ-ಸಾಮರ್ಥ್ಯಗಳು ಕುಗ್ಗುತ್ತ ಹೋದಂತೆ, ಜನತೆಯಲ್ಲಿ ಸ್ವೈರತೆ ಹೆಚ್ಚುತ್ತ ಹೋಗುವುದು.

ಸರ್ವ ಪ್ರಾಣಿಗಳಿಗೂ ಸುಖವೇ ಅಂತಿಮೋದ್ದೇಶವಲ್ಲವೆ? ಸುಖವೇ ಆನಂದ. ಸುಖದಲ್ಲಿ ದೃಶ್ಯವಾದ ನಶ್ವರ ಸುಖ ಮತ್ತು ಅದೃಶ್ಯವಾದ ಶಾಶ್ವತ ಸುಖ ಎಂಬ ಇಬ್ಬಗೆ ಇದೆ.

> " Who buys a moment's
> mirth to wail a week ?
> Who sells eternity to
> get a toy ?"

" ಅನಂತತೆಯನ್ನು ಮಾರಿ ಆಟಿಗೆ ಕೊಳ್ಳುವರಾರು ? ವಾರವೆಲ್ಲ ದು:ಖಿಸುವುದಕ್ಕಾಗಿ ನಿಮಿಷ ಮಾತ್ರದ ಸುಖವನ್ನು ಯಾರು ಕೊಳ್ಳುವರು ? "

ಎಂದು ಶೇಕ್ಸಪೀಯರೆರ ಕವಿ ಸಾರಿರುವನು ! ವಿವೇಕಿಗಳೂ, ಇಹಪರದ ಅರಿವುಳ್ಳವರೂ, ಪಾಪಭೀತರೂ ಆದವರು ಶಾಶ್ವತ ಸುಖದ ಕಡೆಗೆ

ದೃಷ್ಟಿ ಹರಿಯಿಸುವರು. ಇಲ್ಲಿಯೇ ಪ್ರಾಣಿಗಳಿಗೂ, ಮನುಷ್ಯರಿಗೂ ಇರುವ ವ್ಯತ್ಯಾಸವು ಗುರುತಿಸಲ್ಪಡಬೇಕಾಗಿದೆ. ಷಡ್ರಸದ ಸಾಹಿತ್ಯವು ಮನುಷ್ಯ-ಮನುಷ್ಯೇತರರಿಗೆಲ್ಲ ಸಮಾನವಾಗಿ ಭೋಗಿಸಬರುವ ಸಾಹಿತ್ಯವಾದರೆ, ನವರಸಗಳ ಸಾಹಿತ್ಯವು ಮನುಷ್ಯನೊಬ್ಬನಿಗೆ ಮಾತ್ರವೇ ಮೀಸಲಾಗಿರುವುದು.

ಪಾಪಮಿದು ಪುಣ್ಯಮಿದು, ಹಿತ-।
ರೂಪಮಿದು; ಅಹಿತಪ್ರಕಾರಮಿದು, ಸುಖಮಿದು, ದುಃ-॥
ಖೋಪಾತ್ತಮಿದೆಂದರಿಪುಗುಃ-।
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್ ॥

ಎಂದು ನೃಪತುಂಗನು ಸಾಹಿತ್ಯದ ಕಾರ್ಯೋದ್ದೇಶವನ್ನು ಸೂಚಿಸಿದ್ದಾನೆ. ನಾಲ್ಕು ಜನರಿಗೆ ಸಾಲುವಷ್ಟು ಅನ್ನಾಹಾರಾದಿಗಳನ್ನು ಒಬ್ಬನೇ ರಾಶಿಯೊಟ್ಟಿಕೊಳ್ಳುವುದು ಪಾಪವಲ್ಲದೆ ಮತ್ತೇನು? ಪ್ರತಿಯೊಂದು ವ್ಯಕ್ತಿಯ ಹಾಗೂ ಪ್ರತಿಯೊಂದು ವೃತ್ತಿಯ ವೇಳೆ ಮತ್ತು ದುಡಿತಕ್ಕೆ ಕ್ಲುಪ್ತವಾದ ಪ್ರತಿಫಲದ ಮಿತಿ ಇರಬೇಕು. ಹಿಂದಿನ ಕಾಲದ ವ್ಯಕ್ತಿಗಳು ತಾವಾಗಿಯೇ ಅಂತಹ ಮಿತಿಯನ್ನಿಟ್ಟುಕೊಳ್ಳುತ್ತಿದ್ದರು. ಪ್ರತಿಯೊಂದು ವ್ಯತ್ಯಾರಂಭದಲ್ಲಿಯೂ ಪಾಪ ಪುಣ್ಯದ ಆಯ ವ್ಯಯವನ್ನು ಮುಂದಿಟ್ಟುಕೊಳ್ಳುತ್ತಿದ್ದರೇ ಹೊರತು ಲೌಕಿಕ ಸಂಪದಧಿಕಾರಗಳ ಲಾಭ ನಷ್ಟವನ್ನು ಮುಖ್ಯವಾಗಿಟ್ಟುಕೊಳ್ಳುತ್ತಿದ್ದಿಲ್ಲ. ಪರರ ಸುಖ ಮತ್ತು ಹಿತಕ್ಕೆ ಹಾನಿಯುಂಟು ಮಾಡುವ ಯಾವ ವೃತ್ತಿಯನ್ನೂ ಕೈಕೊಳ್ಳುತ್ತಿದ್ದಿಲ್ಲ. ಮಿತಿಮೀರಿದ ಬೆಲೆಗೊಳ್ಳುವುದೂ, ಸಮಾಜ ಹಾನಿಕರ ವೃತ್ತಿಯನ್ನು ಸ್ವೀಕರಿಸುವುದೂ ಬಹಿಷ್ಕೃತ ವೃತ್ತಿಯಾಗಿದ್ದಿತು. ಜನರ ಹೃದಯದಲ್ಲಿ ಪಾಪಭೀತಿಯೆಂಬ ಧರ್ಮಬುದ್ಧಿಯನ್ನು ಸಾಹಿತ್ಯವು ಹುಟ್ಟಿಸುವುದು. ಕೀರ್ತಿ, ಧನ, ಅಧಿಕಾರಗಳಲ್ಲಿಯೂ ಒಂದು ಮಿತಿ ಇದ್ದಿತು. ತಮ್ಮ ಯೋಗ್ಯತೆಗೆ ಮೀರಿದ ಕೀರ್ತಿಯು ಕಳ್ಳಪೇಟೆಯಿಂದ ಗಳಿಸಿದ ಸಂಪತ್ತಿನಷ್ಟೇ ಹೀನಾಯವೆಂಬುದನ್ನು ಮರೆಯಬಾರದು.

"Let your Literary Compositions be kept from the public eye for at least nine years."

(ನಿಮ್ಮ ಸಾಹಿತ್ಯ ಕೃತಿಯನ್ನು ಕನಿಷ್ಟ ಒಂಬತ್ತು ವರ್ಷ ಕಾಲವಾದರೂ ಅಪ್ರಕಟಿತವಾಗಿಟ್ಟುಕೊಳ್ಳಿರಿ)

ಎಂಬುದಾಗಿ ಪ್ರಸಿದ್ಧ ಆಂಗ್ಲ ವಿಮರ್ಶಕ ಹೋರೇಸನು ಸೂತ್ರವೊಂದನ್ನು ಸಾರಿದ್ದಾನೆ. ಶೇಕಡಾ ೮೭ ರಷ್ಟು ಜನರು ನಿರಕ್ಷರಿಗಳಾಗಿರುವ ಹಾಗೂ ಜಾತಿ ಮತಗಳ ಅಭಿಮಾನದ ಅತಿರೇಕದಿಂದ ತುಂಬಿರುವ ಜನಾಂಗದಲ್ಲಿ ಕೀರ್ತಿ ಮತ್ತು ಸಂಪದಧಿಕಾರಗಳು ಅರ್ಹತೆಯುಳ್ಳವರಿಗೇ ದೊರೆಯುತ್ತವೆಂಬ ಭರವಸೆ ಇಲ್ಲ; ಹಾಗೂ ಅರ್ಹತೆಯ ಪ್ರಮಾಣಕ್ಕೆ ಮೀರಿದಕೀರ್ತ್ಯಧಿಕಾರಗಳು ದೊರೆಯುವುದೂ ಉಂಟು.

"The world can not do without great men, but great men are very troublesome to the world"

ಎಂಬುದಾಗಿ ಜರ್ಮನ್ ಕವಿ ಗಯಟೆಯು ಉಸುರಿದ್ದಾನೆ. ಈ ಪ್ರಪಂಚದಲ್ಲಿ ಒಳ್ಳೆಯದರ ಪ್ರಮಾಣವು ಕಡಿಮೆಯಾಗಿರುವುದರಿಂದಲೇ, ಒಳ್ಳೆಯದಕ್ಕೆ ಗೌರವ ದೊರೆಯುತ್ತಿದೆ; ಆದರೆ ನಿಜವಾಗಿಯೂ ಒಳ್ಳೆಯವಲ್ಲದ ವಸ್ತುಗಳು ಒಳ್ಳೆಯ ವಸ್ತುಗಳ ವೇಷವನ್ನು ಧರಿಸಿ, ಅಜ್ಞತೆ ಹಾಗೂ ಅರೆ ತಿಳಿವಳಿಕೆಯನ್ನು ಮುಂಕುಗೊಳಿಸುವುವು. ಇದರಿಂದ ನಿಜ ರುಚಿ ಕೆಡುವುದಲ್ಲದೆ, ಭವಿಷ್ಯಜ್ಜನಾಂಗಕ್ಕೆ ಅಶುಭವಾಗುವುದು. ಜನರಲ್ಲಿ ತುಂಬಿಕೊಂಡಿರುವ ದುರ್ಗಣ-ದುಶ್ಚಟಗಳನ್ನು ನಿರ್ಭಿಡೆಯಿಂದ ಟೀಕಿಸಿ, ಅವರನ್ನು ಸನ್ಮಾರ್ಗಕ್ಕೆ ಹಚ್ಚುವವರೇ ನಿಜವಾದ ದೊಡ್ಡವರು (Greatmen) ಅಂತಹರ ದಾರಿಗೆ ತಡೆಗಟ್ಟುವ ಸ್ವಾರ್ಥಿಗಳೂ, ದುರಹಂಕಾರಿಗಳೂ ಬಹಳ. ಈ ಮಾತು ನಮ್ಮ ಸಾಹಿತ್ಯ, ರಾಜಕಾರಣ, ಅರ್ಥ ಪ್ರಚಂಚ, ಸಮಾಜ ಜೀವನ ಇವೆಲ್ಲವುಗಳಲ್ಲಿಯೂ ಅನುಭವಕ್ಕೆ ಬರುತ್ತದೆ.

ಜನತೆಯಲ್ಲಿಯೂ, ಜನತೆಯ ಮುಖಂಡರಲ್ಲಿಯೂ ರಸಾನಂದಗಳ ನಿಜ ಜ್ಞಾನವು ಮಾಯವಾದಂತಿದೆ. ಲೌಕಿಕದ ಕೀರ್ತಿ, ಧನ, ಅಧಿಕಾರಗಳ ವಿಷಯದಲ್ಲಿ ವೈರಾಗ್ಯವು ಕಡಿಮೆಯಾಗಿ ಬಿಟ್ಟಿದೆ. ವೈರಾಗ್ಯವೆಂದರೆ ನಿಷ್ಕ್ರಿಯತೆಯಲ್ಲ; ಆಲಸ್ಯವಲ್ಲ. ತನ್ನಂತೆಯೇ ಇತರರು-ಎಂಬ ನಿಜವಾದ ಪ್ರೇಮಮಯವಾದ ಭ್ರಾತೃಭಾವನೆಯು ಹಬ್ಬಬೇಕು; ಹಾಗೂ

ಈ ಪ್ರಪಂಚದ ಸ್ವತ್ತುಗಳು ಶಾಶ್ವತವಲ್ಲವೆಂಬ ಭಾವನೆ ದೃಢಗೊಳ್ಳಬೇಕು. ಮಹಾತ್ಮಾ ಗಾಂಧಿಯರು ಸಾಯುವ ವರೆಗೂ ಇದನ್ನೇ ಬೋಧಿಸಿದರು, ಆಚರಿಸಿದರು. ನಮ್ಮ ಪ್ರಾಚೀನ ಕವಿಗಳೂ, ವೈಯ್ಯಾಕರಣಿಗಳೂ, ಲಾಕ್ಷಣಿಕರೂ ಇದನ್ನೇ ಸಾರಿದರು. ಈ ವಿರಕ್ತಿ ಇಲ್ಲದವರ ಕೈಯಲ್ಲಿ ಮುಖಂಡತ್ವದ ಸೂತ್ರ ಸಿಕ್ಕುವುದು ನಾಡಿಗೆ ಅಶುಭಕಾರಕ. ಅದರಿಂದ ನಿಜ ಸಾಹಿತ್ಯವಾಗಲೀ ರಾಜಕಾರಣವಾಗಲೀ ಎಂದಿಗೂ ಅಭಿವೃದ್ಧಿಗೊಳ್ಳದು. "ಬರೇ ಗುಲ್ಲು ನಿದ್ದೆಗೇಡು" ಎಂಬ ಗಾದೆಯಂತೆ, ನುಡಿ–ನಡೆಗಳ ಅಬ್ಬರ ಕಂಡು ಬರಬಹುದೇ ಹೊರತು ನಿಜವಾದ ಸುಖ ಪ್ರಗತಿಯ ಜ್ಞಾನಾನಂದಗಳು ಹಬ್ಬಲಾರವು.

ವೃತ್ತಪತ್ರಿಕಾ " ವೃತ್ತಿ " ಮತ್ತು " ವ್ಯವಸಾಯ "

ಸರ್ವ ಸಾಧನಗಳೂ ಮಾನವನ ಹಿತಕ್ಕಾಗಿಯೇ ಏರ್ಪಟ್ಟಿರುವಂತೆ, ವೃತ್ತಪತ್ರಗಳೂ ಏರ್ಪಟ್ಟಿವೆ. ದೇಶದೇಶಗಳ ನಡುವೆ ಸಂಬಂಧ ಸಹಕಾರಗಳು ನಿಕಟಗೊಳ್ಳುತ್ತಿರುವ ಈಗಿನ ಕಾಲದಲ್ಲಿ ವೃತ್ತಪತ್ರಿಕೆಗಳ ಅಗತ್ಯತೆ ವಿಶೇಷವಾಗಿದೆ. ಪ್ರಪಂಚದ ಒಂದು ಮೂಲೆಯಲ್ಲಿ ರೂಪುಗೊಳ್ಳುತ್ತಿರುವ ವ್ಯತ್ಯಸ್ತ ಪರಿಸ್ಥಿತಿಯಪರಿಣಾಮವು ಕ್ಷಿಪ್ರದಲ್ಲಿಯೇ ಸರ್ವ ಪ್ರಪಂಚದಮೇಲೂ ತನ್ನ ಛಾಯೆಯನ್ನು ಹರಡಿಬಿಡುವುದು. ಯುದ್ಧಕಾಲದಲ್ಲಿಯೂ ಶಾಂತಿಕಾಲದಲ್ಲಿಯೂ ಈ ಪರಿಣಾಮವು ಒಂದೇ ತೆರನ ವೇಗದಿಂದ ಕಾಣಿಸಿಕೊಳ್ಳುವುದು. ಈವಿಧವಾದ ಪರಿಸ್ಥಿತಿಗಳ ಸುದ್ದಿಯನ್ನೂ, ಪರಿಣಾಮಗಳನ್ನೂ ಆಗಿಂದಾಗಲೇ ಜನತೆಗೆ ತಿಳಿಸುವ ಕೆಲಸವನ್ನು ವೃತ್ತಪತ್ರಿಕೆಗಳು ಮಾಡುತ್ತಿವೆ.

ಪತ್ರಿಕೆಯ ಪಂಚಾಂಗ

ಸುದ್ದಿಯನ್ನು ಹರಡುವುದೊಂದೇ ಪತ್ರಿಕೆಗಳ ಮುಖ್ಯಕಾರ್ಯವಲ್ಲ. ಸುದ್ದಿಗಳ ಪರಿಣಾಮಗಳ ಹಿತಾಹಿತಗಳನ್ನು ಟೀಕಿಸಿ, ಜನಾಭಿಪ್ರಾಯವನ್ನುಂಟುಮಾಡುವುದು ಅವುಗಳ ಅತ್ಯಂತ ಮಹತ್ವದ ಕಾರ್ಯವಾಗಿರುವುದು. ಸ್ವದೇಶದ ಹಿತವನ್ನೂ, ಜನಕೋಟಿಯ ಏಳಿಗೆಯನ್ನೂ ವೃತ್ತಪತ್ರಿಕೆ ಅಹರ್ನಿಶ ಸಾಧಿಸಬೇಕು. ಪತ್ರಿಕೆಯ ಕಾರ್ಯಾಲಯವು [೧] ಜ್ಞಾನದಾನ ಮಾಡುವ ವಿಶ್ವವಿದ್ಯಾಲಯ [೨] ನ್ಯಾಯದಾನ ಮಾಡುವ ನ್ಯಾಯಾಸ್ಥಾನ [೩] ದುಷ್ಟರ ದಮನ ಮಾಡುವ ರಣರಂಗ [೪] ಸುಖಾನಂದಗಳನ್ನುಂಟು ಮಾಡುವ ಕಲಾರಂಗ [೫] ಆತ್ಮೋನ್ನತಿಗೆ ಸಹಾಯಮಾಡುವ ಗುರುಮಠ. ವೃತ್ತಪತ್ರಿಕೆಯ ಈ ಪಂಚಾಂಗ ಭದ್ರವಾಗುತ್ತ ಹೋದಂತೆ ದೇಶದ ಏಳಿಗೆಯೂ ಭದ್ರವಾಗುತ್ತ ಹೋಗುವುದು. ಈ ಐದು ಮಹತ್ಕಾರ್ಯಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವುದು ಸುಲಭವಾಗಿಲ್ಲ.

ತ್ರಿವಿಧ ಅಂಧತೆ

ಸತ್ಯನಿಷ್ಠೆ, ನಿಷ್ಪಕ್ಷಪಾತತೆ, ನಿರ್ದಾಕ್ಷಿಣ್ಯ ಧೋರಣೆ, ಸಾಹಿತ್ಯ ಕಲಾವ್ಯಾಸಂಗ, ನೈತಿಕ ಹಿತೇಚ್ಛೆ-ಈ ಪಂಚಮಹಾವ್ರತಗಳ ದೀಕ್ಷೆಗೊಂಡವರೇ ವೃತ್ತ ಪತ್ರಿಕೆಯ-ಸಂಪಾದಕ ವೃತ್ತಿಗೆ ಅರ್ಹರೆನಿಸುವರು; ಮಿಕ್ಕವರೆಲ್ಲ ಈ ಉದಾತ್ತ ವೃತ್ತಿಗೆ ವ್ಯಾಧಿಸ್ವರೂಪರು. ಸ್ವಲಾಭ, ಸ್ವಸಮಾಜ ಸ್ವಾರ್ಥ, ಸ್ವಪ್ರತಿಷ್ಠೆ, ಸ್ವಪಕ್ಷ ಸಮರ್ಥನೆ ಎಂಬೀ ಚತುರ್ವಿಧ ಸಂಕುಚಿತಾರ್ಥಗಳು ವ್ಯಕ್ತಿ ವ್ಯಕ್ತಿಗಳೊಳಗೂ ಸಮಾಜ ಸಮಾಜಗಳೊಳಗೂ ಗುಂಪು ಗುಂಪುಗಳೊಳಗೂ ದ್ವೇಷಾಸೂಯೆಗಳನ್ನು ಹೆಚ್ಚಿಸಿ ಸಾಮಾನ್ಯ ಜನತೆಯನ್ನು ದುಃಖದಾರಿದ್ರ್ಯಕ್ಕೆ ಬಲಿಕೊಡುವುವು. ಧರ್ಮಾಂಧತೆ, ಜ್ಯಾತ್ಯಂಧತೆಗಳು ರಾಷ್ಟ್ರಹಿತಕ್ಕೆ ಎಷ್ಟು ಹಾನಿಕರವೋ ಪಕ್ಷಾಂಧತೆಯೂ ಅಷ್ಟೇ ಹಾನಿಕರವಾಗುವುದು. ಪತ್ರಿಕೆಯ ಸಂಪಾದಕರು ಈ ತ್ರಿವಿದ ಅಂಧತೆಯಿಂದ ಅಲಿಪ್ತರಾಗಿರಬೇಕು. ಕಾಮ, ಕ್ರೋಧ, ಲೋಭ, ಇವು ಮೂರು ಆತ್ಮನಾಶಕರವಾದ ನರಕದ ಹೆಬ್ಬಾಗಿಲುಗಳೆಂದು ಗೀತೋಕ್ತಿ ಇದೆ. ಕಾಮವೆಂದರೆ ಆಶೆ-ಮಹತ್ವಾಕಾಂಕ್ಷೆ (ambition); ತನ್ನೊಬ್ಬನ ಹಾಗೂ ತನ್ನದೊಂದು ಸಮಾಜದ ಆಶಾಕಾಂಕ್ಷೆ ಈಡೇರಬೇಕೆಂಬ ಕಾಮ; ತನ್ನ ಆಶಾಕಾಂಕ್ಷೆಯನ್ನು ಬಲಾತ್ಕಾರದಿಂದಲಾದರೂ ತೃಪ್ತಿಪಡಿಸಿಕೊಳ್ಳಬೇಕೆಂಬ ಕ್ರೋಧ; ಎಲ್ಲವೂ ತನ್ನೊಬ್ಬನಿಗೆ, ಅಥವಾ ತನ್ನ ಗುಂಪಿಗೆ ಅಥವಾ ತನ್ನೊಂದು ಸಮಾಜಕ್ಕೇ ದೊರೆಯಬೇಕೆಂಬ ಜಿಪುಣತೆ-ಲೋಭ; ಈ ಮೂರು ದುರ್ದ್ವಾರಗಳಕಡೆ ಇಣಿಕಿಕೂಡಾ ನೋಡಬಾರದು. ಇದು ದೊಡ್ಡ ವ್ರತ. ಯಾವನು ಈ ವ್ರತನಿಯಮದಲ್ಲಿರುವನೋ, ಅವನೇ ದಾಕ್ಷಿಣ್ಯಾಪರನಲ್ಲದ, ಖಂಡಿತವಾದಿಯಾದ ಲೋಕ ವಂದ್ಯ ಶರಣನು. ವೃತ್ತಪತ್ರಿಕೆಯ ಸಂಪಾದಕನು ಇಂತಹ ಉಚ್ಚವ್ರತಿಯಾಗಿ, ಸರ್ವ ಜನಾದರಣೀಯನಾಗಿರಬೇಕು.

ವೃತ್ತಿ—ವ್ಯವಸಾಯ

ಈಗಿನ ದಿನಗಳಲ್ಲಿ ಅಂತಹ ವ್ರತಬದ್ಧ ಪತ್ರಿಕೋದ್ಯಮಿ ತೀರ ವಿರಳ. ಪಾಪ ಪುಣ್ಯ ಭೀತಿಯೂ, ಅಂತಃಸ್ಥ ವಿರಕ್ತಿಯೂ, ಆಳವಾದ ಅಭ್ಯಾಸವೂ, ಸರ್ವ ಹಿತೇಚ್ಛೆಯ ಮಧುರ ಪ್ರೇಮವೂ ಸಂಪಾದಕನ ಚತುರ್ಭುಜಗಳಾ

ಗಿರಬೇಕು. ಸತ್ವಗುಣದ ವಿಚಾರ, ಮತ್ತು ರಜೋಗುಣದ ಶೈಲಿ, ಆತನ "ತ್ರಿಗುಣ"ತೆಯಲ್ಲಿ ಮುಖ್ಯವಾಗಿದ್ದು, ತಮೋಗುಣವು ಅಚ್ಚಿನ ಮಸಿಯಲ್ಲಷ್ಟೇ ಇರಬೇಕು. ಈಗ ಅದೆಲ್ಲ ಮಾಯವಾದಂತಿದೆ. ಅದರ ಪರಿಣಾಮವಾಗಿ ಸಂಪಾದಕ ವೃತ್ತಿಯು [ಮಾನಸಿಕ ಒಲವು] ವ್ಯವಸಾಯ [ಹಣಗಳಿಸುವ] ವಾಗಿ ಬಿಟ್ಟಿದೆ. ಶೀಲ ಕೆಟ್ಟ ಸ್ತ್ರೀ ಸೂಳೆಯಾಗುವಂತೆ, ವ್ರತಭ್ರಷ್ಟ ಸಂಪಾದಕ ಪತ್ರಿಕಾ ವ್ಯವಸಾಯ [ಭಂಡವಳದಾರ] ಗಾರನಾಗುತ್ತಾನೆ. ವೃತ್ತಿ ಎಂದರೆ ಮಾನಸಿಕ ಒಲವು. ವ್ಯವಸಾಯವೆಂದರೆ ಪ್ರಯತ್ನಶೀಲತೆ.

ಜನತೆಯಲ್ಲಿ ಸಾಕ್ಷರತೆಯೂ, ವಾಚನಾಭಿರುಚಿಯೂ ಹೆಚ್ಚುತ್ತ ಬರುವುದರಿಂದ ವೃತ್ತಪತ್ರಿಕೆಗಳ ಪ್ರಸಾರವೂ ಪ್ರಭಾವವೂ ಹೆಚ್ಚುತ್ತಿರುವುದು; ಹೊಸಹೊಸ ಯಂತ್ರೋಪಕರಣಗಳ ಸಂಶೋಧನೆಯ ಫಲವಾಗಿ ಪತ್ರಿಕೆಗಳೆಲ್ಲ ಅಕ್ಕಿ ಗಿರಣಿ, ಬಟ್ಟೆ ಗಿರಣಿಗಳಂತೆ, ಭಂಡವಲದಾರರ ಸೊತ್ತಾಗತೊಡಗಿವೆ. ಪತ್ರಿಕೆಗೆಹಾಕುವ ಭಂಡವಳದ ಮೇಲೆ ಹೆಚ್ಚಿನ ದರದ ಬಡ್ಡಿ ಬರುವುದೆಂದೂ, ರಾಜಕಾರಣದಲ್ಲಿ ರಾರಾಜಿಸಬರುವುದೆಂದೂ ತಿಳಿದು ಕೇವಲ ಲೌಕಿಕರೂ ಅಶಿಕ್ಷಿತರೂ ಆದ ರೊಕ್ಕಸ್ತರು ಸಂಪಾದಕರಾಗುತ್ತಿರುವರು. ನಮ್ಮ ದೇಶದ ಹಲವಾರು ಪ್ರಸಿದ್ಧ ಹಿಂದೀ-ಆಂಗ್ಲ ಭಾಷಾ ಪತ್ರಿಕೆಗಳೇ ಇದಕ್ಕೆ ದೃಷ್ಟಾಂತವಾಗಿವೆ. ಪ್ರಜಾಸತ್ತೆಯ ತವರೂರಾದ ಹಾಗೂ ಮೊತ್ತ ಮೊದಲಿನ ಪತ್ರಿಕೆಯ ಸಂಪಾದಕ ಕ್ಯಾಕ್ಸಟನನ ಹುಟ್ಟೂರಾದ ಇಂಗ್ಲೆಂಡಿನಲ್ಲಿಯಂತೂ ಪತ್ರಿಕಾವೃತ್ತಿ ಸಂಪೂರ್ಣವಾಗಿ ಭಂಡವಳದಾರರ ಕೈವಶವಾಗಿದೆ. ಈ ಕೆಟ್ಟ ಹಿಡಿತದಿಂದ ತಿಳಿವಿನ ತಾಯಿಯಾದ ಪತ್ರಿಕಾ ವೃತ್ತಿಯನ್ನು ಬಿಡಿಸುವ ಸಲುವಾಗಿ ಪಾರ್ಲಿಮೆಂಟು ಒಂದು "ವಿಚಾರಣಾ ಸಮಿತಿ" ಯನ್ನು ಈ ಹಿಂದೆನೇಮಿಸಿರುವುದು. ಆ ಸಮಿತಿಯ ವಿಚಾರಣಾ ಕಾರ್ಯ ಭರದಿಂದ ಸಾಗಿರುವುದು.

ಸಂಪಾದಕ—ಉಪಸಂಪಾದಕ

ಸಂಪಾದಕನು ಪತ್ರಿಕೆಯೆಂಬ ವೃಕ್ಷದ ಕಾಂಡವಿದ್ದಂತೆ; ಶರೀರದ ಮುಖ್ಯ ರಕ್ತನಾಳವಿದ್ದಂತೆ. ಆತನ ಅಧೀನವರ್ತಿಗಳಾಗಿ ಕೆಲಸ ಮಾಡುವ ಉಪಸಂಪಾದಕರೂ ಸುದ್ದಿಗಾರರೂ ರೆಂಬೆ ಕೊಂಬೆಗಳಂತೆ, ಉಪರಕ್ತ

ನಾಳಗಳಂತೆ ಇರಬೇಕು. ಕಾಂಡವು ನಿರೋಗಿಯಾಗಿದ್ದರೆ ಕೊಂಬೆಗಳು ನಿರೋಗಿಯಾಗಿರುವವು. ಮುಖ್ಯ ರಕ್ತನಾಳದಲ್ಲಿ ಪರಿಶುದ್ಧ ರಕ್ತವಿದ್ದರೆ, ಉಪನಾಳಗಳಲ್ಲಿಯೂ ಶುದ್ಧ ರಕ್ತ ಸಂಚರಿಸುವುದಲ್ಲವೆ? ಆದ್ದರಿಂದ ಸಂಪಾದಕನು ಸಚ್ಚರಿತ್ರನೂ, ಸ್ನೇಹಮಯಿಯೂ ಆಗಿರುವುದವಶ್ಯಕ. ಆತನಿಗೆ ಭಾಷೆಯಮೇಲೆ ಪ್ರಭುತ್ವವೂ, ವಿವಿಧ ವಿಷಯಗಳ ಆಳವಾದ ತಿಳಿವಳಿಕೆಯೂ ಇರಬೇಕಲ್ಲದೆ, ನಿರಂತರವಾದ ವ್ಯಾಸಂಗಲಾಲಸೆಯೂ ಇರಬೇಕು. ಒಂದು ಮಾತಿನಲ್ಲೇ ನೂರು ಮಾತುಗಳ ಸಾರವನ್ನು ತೋರುವ ಕುಶಲತೆಯೂ ಆತನಲ್ಲಿರಬೇಕು. ಈ ಗುಣಗಳೆಲ್ಲ ಕೇವಲ ಅಭ್ಯಾಸವೊಂದರಿಂದಲೇ ದೊರೆಯಲಾರವು. ತಕ್ಕ ಆತ್ಮಸ್ಫೂರ್ತಿಬೇಕು. ಪ್ರಪಂಚವನ್ನೆಲ್ಲ ತಾದಾತ್ಮ್ಯದಿಂದ ನೋಡುವ ವಿಶಾಲಬುದ್ಧಿ ಬೇಕು. ಅಭ್ಯಾಸವು ಹಿಂಬಲ-ಮುಂಬಲವಾಗಿ ನಿಂತು ಮೂಲಶಕ್ತಿಯು ಪೂರ್ಣ ವಿಕಾಸಕ್ಕೆ ನೆರವಾಗುವುದಷ್ಟೆ.

ಆತ್ಮಸ್ಫೂರ್ತಿ

ಯಂತ್ರೋಪಕರಣಗಳ ಸಹಾಯದಿಂದ ಪತ್ರಿಕೆಯ ಪ್ರಸಾರ-ಪ್ರಭಾವವನ್ನೂ, ಪ್ರಸಾರ-ಪ್ರಭಾವಗಳಿಂದ ಉತ್ಪನ್ನವನ್ನೂ ಹೆಚ್ಚಿಸಿಕೊಳ್ಳಬೇಕೇ ಹೊರತು, ಯಂತ್ರೋಪಕರಣಗಳೇ ಪತ್ರಿಕೆಯ ಧ್ಯೇಯ ಧೋರಣೆಗಳಾಗಿ, ಪತ್ರಿಕೆಯನ್ನಾಳುವಂತಾಗಬಾರದು. ಇದು ಸಾರಸ್ವತ ವೃತ್ತಿ; ಶಬ್ದ ಬ್ರಹ್ಮ ಪ್ರಪಂಚ; ಇದರಲ್ಲಿ ಬೌದ್ಧಿಕ ಪ್ರಧಾನ; ಭೌತಿಕ ಗೌಣ. ಟೈಪಿಷ್ಟನು ವೇಗವಾಗಿ ಟೈಪು ಮಾಡಬಲ್ಲನೇ ಹೊರತು ಟೈಪಿನ ಮೂಲಪ್ರತಿಯನ್ನು ಮಾಡುವ ಬುದ್ಧಿ ಶಕ್ತಿ ಅವನಲ್ಲಿರಲಾರದಲ್ಲವೆ? ಹಾಗೆಯೇ ಇಂಗ್ಲೆಂಡ—ಅಮೇರಿಕೆಗಳಂತಹ ಪರರಾಷ್ಟ್ರಗಳಿಗೆ ಯಾತ್ರೆ ಹೋಗಿ, ಯಂತ್ರ ದುಡಿದಂತೆ ದುಡಿಯುವುದನ್ನು ಕಲಿತು ಬರಬಹುದೇ ಹೊರತು ಬುದ್ಧಿಮತ್ತೆಯನ್ನಾಗಲೀ, ಆತ್ಮಸ್ಫೂರ್ತಿಯನ್ನಾಸಲೀ ಗಳಿಸಿಕೊಂಡು ಬರಲಿಕ್ಕೆ ಶಕ್ಯವಾಗದು. ನಮ್ಮ ದೇಶದ ಸುಪ್ರಸಿದ್ಧ ಪತ್ರಿಕಾಕರ್ತರಾಗಿದ್ದ ಶ್ರೀ॥ ಚಿಂತಾಮಣಿ, ಶ್ರೀ॥ ನಟರಾಜನ್, ಶ್ರೀ॥ ರಂಗಯ್ಯಂಗಾರ್, ಶ್ರೀ॥ ಕಾಳಿನಾಥ ರೇ, ಶ್ರೀ॥ ರಮಾನಂದ ಚಟರ್ಜಿ, ಶ್ರೀ॥ ಮೋತಿಲಾಲ ಘೋಷರೂ, ಸುಪ್ರಸಿದ್ಧ ವಿಜ್ಞಾನಿಗಳಾದ ಸರ್. ಪಿ, ಸಿ,ರೇ. ಸರ್. ಜ. ಸಿ. ಬೋಸ್, ಸರ್ ಸಿ. ವಿ. ರಾಮನ್, ಸರ್. ಜೆ. ಸಿ. ಘೋಷ, ಡಾ॥ ಮೇಘನಾಥ ಶಹಾ ಡಾ॥ ಬಾಟನಗರ್ ಇವರೇ ಮೊದಲಾದವರೂ, ಪ್ರಸಿದ್ಧ ವಕೀಲರಾದ ಮೋತಿಲಾಲ ನೆಹ್ರು, ಭೂಲಾಬಾಯಿ ದೇಸಾಯಿ, ಸರ್ ಚಿಮಣಲಾಲ ಸೆಟಲವಾಡ, ಸರ್. ರಾಸಬಿಹಾರಿ ಘೋಷ್, ಸರ್. ತೇಜಬಹದ್ದೂರ್

ಸಪ್ರು, ಸರ್ ಶಿವಸ್ವಾಮಿ ಅಯ್ಯರ್, ಸರ್ ಭಾಷ್ಯಂ, ಸರ್ ಅಲ್ಲಾಡಿ, ಸರ್ ಸಿ. ಪಿ. ರಾಮಸ್ವಾಮಿ ಮೊದಲಾದವರೂ ಸಾಗರೋತ್ತರ ದೇಶಗಳಿಗೆ ಹೋಗಿ ಕಲಿತು ಬಂದವರಲ್ಲ.

ದುಷ್ಪರಿಣಾಮಗಳು

ಪತ್ರಿಕಾ ವೃತ್ತಿಯು 'ವ್ಯವಸಾಯ'ವಾಗಿ ಮಾರ್ಪಡುವುದರಿಂದ ದುಷ್ಪರಿಣಾಮಗಳು ತಲೆದೋರತೊಡಗಿವೆ. ಆ ವೃತ್ತಿಯನ್ನು ಕೂಲಂಕಷವಾಗಿ ಅಭ್ಯಸಿಸಿ, ಅದರಲ್ಲಿಯೇ ನಿರತರಾಗಿ ನುರಿತ ಸುಶಿಕ್ಷಿತರು, ಹೊಟ್ಟೆಯ ಪಾಡಿಗಾಗಿಯೂ, to make the best of a bad job- ಎಂಬ ಆಂಗ್ಲೋಕ್ತಿಯಂತೆ-ಸಿಕ್ಕಿದಷ್ಟೇ ಸವಲತ್ತಿನಿಂದಾದರೂ ತಮ್ಮ ಸೇವೆ ಸಲ್ಲಿಸುವ ಉತ್ಕಟೇಚ್ಛೆಯಿಂದಲೂ ಈ ಭಂಡವಳದಾರ ಸಂಪಾದಕರ ಚೌಕಟ್ಟಿನೊಳಗೇ ತಮ್ಮ ಅಭಿಪ್ರಾಯಗಳನ್ನು ಚಿತ್ರಿಸುತ್ತಿರುವರು! Half truth is more dangerous than falsehood- ಅರ್ಧಮರ್ಧ ಸತ್ಯವು ಪೂರ್ಣ ಸುಳ್ಳಿಗಿಂತ ಹೆಚ್ಚು ಹಾನಿಕರ—ಎಂಬಂತೆ ಅವರ ಈ ಒತ್ತಾಯದ ಅಭಿಪ್ರಾಯಗಳು ಪ್ರಾಮಾಣಿಕತೆಯ ಕತ್ತನ್ನೇ ಹಿಸುಕುತ್ತಿವೆ. ಇದರ ಪರಿಣಾಮವಾಗಿ, ವಿವೇಕಭರಿತವಾದ ವಿಮರ್ಶೆಗಳಿಲ್ಲದೆ, ಕಡಿವಾಣ ಕಡಿದ ಕುದುರೆಯಂತೆ, ಜನಾಭಿಪ್ರಾಯ ಸಿಕ್ಕ ಸಿಕ್ಕಂತೆ ರೂಪುಗೊಳ್ಳುತ್ತಿದೆ; ತೂಗುಯ್ಯಾಲೆಯಂತೆ ಒಮ್ಮೆ ಅವಿಭಕ್ತ ಅಖಂಡ ಭಾರತದತ್ತೂ, ಇನ್ನೊಮ್ಮೆ ವಿಭಕ್ತ ವಿತಂಡಾ ಭಾರತದತ್ತೂ; ಒಮ್ಮೆ ಹಿಂಸೆಗೆ ಅಹಿಂಸೆ ಎಂದರೆ ಮತ್ತೊಮ್ಮೆ ಹಿಂಸೆಗೆ ಪ್ರತಿ ಹಿಂಸೆ ಎಂದೂ ಹಿಂದಕ್ಕೆ ಮುಂದಕ್ಕೆ ಒಲೆದಾಡುತ್ತಿದೆ. ಜನತೆಯನ್ನು ಇಂತಹ ಭೀಕರ ಸ್ಥಿತಿಯಿಂದ ಪಾರುಗಾಣಿಸಿ, ಸತ್ಯ, ನ್ಯಾಯ, ನೀತಿಗಳ ನೆಲೆವೀಡಿಗೆ ಒಯ್ಯುವ ಮಹತ್ಕಾರ್ಯವನ್ನು ನಮ್ಮ ಪತ್ರಿಕೆಗಳು ಮಾಡಬೇಕು. ಅವು "ವ್ಯವಸಾಯ"ದ ಬದಲು ವೃತ್ತಿಯಾಗಬೇಕು. ಅಚ್ಚಿನ ಹಾಗೂ ಸುದ್ದಿಯ ಯಂತ್ರೋಪಕರಣಗಳ ಪಂಡಿತರ ಹಿಡಿತದಿಂದಲೂ, 'ವ್ಯವಸಾಯ' ಮಾಡಿಕೊಂಡ ಭಂಡವಳದಾರರ ಕೈಯಿಂದಲೂ ನಮ್ಮ ಪತ್ರಿಕೆಗಳು ತಪ್ಪಿಸಿಕೊಳ್ಳಬೇಕು. ನಿಜವಾದ ಸಂಪಾದಕನೇ ಆನೆಯ ಮಾವುತನಂತೆ, ಯಂತ್ರೋಪಕರಣ ಹಾಗೂ 'ಭಂಡವಳ'ದ ಆನೆಯನ್ನು ತನ್ನ ಅಂಕುಶದಿಂದ ಅಂಕಿತದಲ್ಲಿಟ್ಟುಕೊಳ್ಳಬೇಕು. ಮುಳುಗಿದ ಸೂರ್ಯನು ಮೂಡದೇ ಇರುವನೆ? ಆ ಸುದಿನ ಸಮೀಪಿಸುತ್ತಿದೆ ಎಂದು ಆಶಿಸೋಣ.

ಚೆಂಗಲವೆ (ಕವನ ಸಂಗ್ರಹ)

ಪಾಂಡೇಶ್ವರ ಕೃತ

ಪುಟ ೪೦

ಪ್ರಕಾಶಕರು : ಬಾಳಿಗಾ ಎಂಡ್ ಸನ್ಸ್ ಪುಸ್ತಕ ವ್ಯಾಪಾರಂಗಳು
ಕಾರ್‌ಸ್ಟ್ರೀಟ್ ಮಂಗಳೂರು ದ. ಕ.

ಕೆಲವು ಅಭಿಪ್ರಾಯಗಳು

‘...... ಕನ್ನಡದಲ್ಲಿ ಹೀಗೆ ಹೃದಯವನ್ನು ತೋಡಿ, ಹಾಡಿನ ಹೊನಲು ಹರಿಸಿದ ಕವಿಗಳು ಕಡಿಮೆ......ಹೀಗೆ ಶ್ರೀ|| ಪಾಂಡೇಶ್ವರರು ಹಲವಿಧದ ಭಾವನೆಗಳನ್ನು ತುಂಬಿಸಿ, ರಸಾವೇಶದಿಂದ ಹಾಡಿದ ಹಾಡುಗಳ ಸಂಗ್ರಹವಾದ ಈ “ ಚೆಂಗಲವೆ ” ಕನ್ನಡ ಸಾಹಿತ್ಯದಲ್ಲಿ ಚಿರಂತನವಾಗಿ ಬೆಳಗತಕ್ಕ ಒಂದು ಕಾವ್ಯವಾಗಿದೆ. ಶ್ರೀ||ಪಾಂಡೇಶ್ವರರಿಗೆ ವಿಧ ವಿಧದ ಛಂದಸ್ಸುಗಳ ಹಿಡಿತವಿದೆ; ನವನವೋನ್ಮೇಷವಿದೆ; ಅಂತರಂಗವನ್ನೇ ತೆರೆದು ಹಾಡುವ ಅಂತರಾಳವಿದೆ......”

— “ ಸ್ವದೇಶಾಭಿಮಾನಿ ”ಮಂಗಳೂರು
(ತಾ. ೨೫—೧೦—೪೦)

“......ಪಾಂಡೇಶ್ವರರು ಬಲು ದಿನಗಳಿಂದಲೂ ಕಾವ್ಯ ಕೃಷಿಯಲ್ಲಿ ನುರಿತವರು. ಅದರ ಪರಿಣಾಮವಾಗಿ ಅವರ ಕೃತಿ(ಚೆಂಗಲವೆ) ಜಾಣಿನ ಭಾರದಿಂದಲೂ, ಅಭ್ಯಾಸ-ಮನನ-ಧ್ಯಾನಗಳ ನಿರಂತರ ಸಾಧನದಿಂದಲೂ ಸರ್ವಾಂಗ ಸುಂದರವಾಗಿದೆ. ಎಲ್ಲ ಕವಿತೆಗಳೂ ಭಾವನೆಯ ಭಾರದಿಂದ, ಭಾಷೆಯ ಓಜಸ್ಸಿನಿಂದ, ತಾರೆ ಮಿಣುಕಿದಂತೆ ಮಿಣುಕುತ್ತಿವೆ; ಅಲ್ಲಿ ಜೀವನಕ್ಕೆ, ಜನತೆಗೆ, ಜೀವನದಿಂದ ನೆಗೆದು ಚಿಮ್ಮಿಬಂದ ಸಂದೇಶವಿದೆ. ಬರಿಯ ಆವೇಶಕ್ಕೆ ಶರಣುಹೋಗಿ ಪದಗಳನ್ನು ವರ್ಣಿಸಿದಂತಿಲ್ಲ. ಬಾಳಿನ ಸತ್ವವನ್ನೇ ಹಿಂಡಿ ಹಿಪ್ಪೆಮಾಡಿದ ಭಾವನೆಗಳು ನೆತ್ತರು ಪೂಸಿಕೊಂಡು ಸಾಲು ಸಾಲಾಗಿ ನಿಂತಿವೆ...ಭಾವಕ್ಕೆ ತಕ್ಕ ಉಕ್ತಿ ! ಉಕ್ತಿಗೆ ತಕ್ಕ ಪದದ ನಡಿಗೆ! ಹದಗೊಂಡ ಮಾತುಗಳು. ಅವುಗಳ ಹೊಂದಿಕೆ ಅಷ್ಟು ಚಂದ. ಕವನ ಕವನವೂ ವ್ಯಕ್ತಿತ್ವ ದರ್ಶನದ ಪ್ರತೀಕದಂತಿದೆ. ಅನುಕರಣ,-ಅದರ ನೆರಳು ಈ ಕವನಗಳ ಅಂಚನ್ನು ತಾಗಿಲ್ಲ. ಕಾಡಸುಮಗಳು ಯಾರ ಹಂಗೂ ಇಲ್ಲದೆ, ಎಲ್ಲಿಯೋ ಅರಳಿ, ಸುರಭಿಯನ್ನು ಗಾಳಿಗುಂಟ ತೇಲಿ ಬಿಡುವಂತಿದೆ ಈ ಕವಿತೆಗಳ ಸಂಗ್ರಹ.

“ ಜಯಕರ್ನಾಟಕ ”
(ನವೆಂಬರ್ ೧೯೪೦)ಧಾರವಾಡ.

"......ಈ ಕವನ ಸಂಗ್ರಹವು ಕನ್ನಡ ಸರಸತಿಯ ಕೊರಳ ಹೂಮಾಲೆಯಲ್ಲಿ ಶ್ರೀ ಪಾಂಡೇಶ್ವರ ರಾಯರು ಹೊಸದಾಗಿ ಪೋಣಿಸಿದ ಒಂದು ಪುಷ್ಪ; ಅದೂ ಚೆಂಗಲವೆ! ಇದರಿಂದ ಕನ್ನಡ ವಾಣಿಯ ಸೊಬಗು ಹೆಚ್ಚಿದೆ. ಪ್ರತಿಯೊಂದು ಕವಿತೆಯಲ್ಲೂ ಸೊಗಸಿದೆ, ಭಾವವಿದೆ! ಸೊಗಸೂ, ಭಾವವೂ ಸಮತೂಕದಲ್ಲಿ ಕೂಡಿಕೊಂಡಿವೆ. ಎಲ್ಲೂ ಪಾಂಡಿತ್ಯದ ಕೃತಕ ಯತ್ನ ತೋರುವುದಿಲ್ಲ."

" ಕರ್ಮವೀರ "

೧೬—೧೨—೧೯೪೦ ಹುಬ್ಬಳ್ಳಿ

" ಐವತ್ತೆರಡು ಕವನಗಳನ್ನೊಳಗೊಂಡ ಸಂಗ್ರಹವಿದು. ಇವುಗಳಲ್ಲಿ ಜೀವನದ ನೋವುಗಳ ವೇದನೆ ಇದೆ; ವೇದನೆಯಿಂದ ಹೊಮ್ಮಿದ ವೈರಾಗ್ಯವಿದೆ; ವೈರಾಗ್ಯದಲ್ಲಿ ನೆಲಸಿ ನಿಂತ ನಿರಾಶೆಯಿದೆ; ನಿರಾಶೆಯಲ್ಲಿಯೂ ದೇವನ ಅನ್ವೇಷಣೆ ಇದೆ; ಉಕ್ಕುವ ಭಕ್ತಿ ಇದೆ. ಸನ್ಯಾಸಿಯ ವೀರೋದ್ವೇಗವಿದೆ, ಉಪದೇಶವಿದೆ, ನಾಡ ಪ್ರೇಮ-ರಾಷ್ಟ್ರ ಪ್ರೇಮಗಳಿವೆ. ಕವಿತೆಗಳಲ್ಲಿ ಕವಿಹೃದಯದ ವೇದನಾನುಭೂತಿ ತುಂಬ ಕರುಣಾಜನಕವಾಗಿ ಮೂಡಿದೆ. ವರ್ಣನಾತ್ಮಕ ಕವಿತೆಗಳೂ ರಮ್ಯವಾಗಿವೆ; ಅವುಗಳಲ್ಲೆಲ್ಲ ಸುಂದರವಾದ ಕಲ್ಪನೆಗಳ ವೈವಿಧ್ಯವೂ ಸಾಕಷ್ಟಿದೆ... ಭಾವನೆಗಳನ್ನರಳಿಸುವುದರೊಂದಿಗೆ ವಿಚಾರವನ್ನು ಪ್ರಚೋದಿಸುವ ಕುತೂಹಲ ಕವಿವಾಣಿಗೆ ಇದೆ. " ನೀತಿ " " ಮಾಯೆ " " ಮೌನ-ಮಾತು " ಇವುಗಳಲ್ಲಿ ಆ ಕುತೂಹಲ ಸಾರ್ಥಕವಾಗಿದೆ. ಎಲ್ಲಕ್ಕೂ ಹೆಚ್ಚಾಗಿ " ಸನ್ಯಾಸಿ " " ಶ್ರೀರಂಗ ಪಟ್ಟಣ " " ಮಹಾತ್ಮಾ ಗಾಂಧಿಗೆ " ಎಂಬ ಕವನಗಳಲ್ಲಿ ತುಂಬಿದ ಉದ್ವೇಗದ, ಜ್ವಲಿಸುವ ಸಂತಾಪದ, ಪುಟನೆಗೆಯುವ ವೀರದ ಭಾವನೆಗಳು ಒಳ್ಳೇ ಸ್ಫೂರ್ತಿದಾಯಕವಾಗಿವೆ. ಈ ಭಾವನೆಗಳಿಗನುಗುಣವಾದ ' ಆರಭಟೇ ' ಪದ ಯೋಜನೆಗಳಲ್ಲಿ ಕವಿಯ ಲೇಖನಿ ಅಸಾಧಾರಣವಾದ ಸಾಮರ್ಥ್ಯವನ್ನು ತೋರಿದೆ. ಇಂತಹ ಕವನಗಳಿಂದಲೇ ನಮ್ಮ ನಾಡಿನಲ್ಲಿಂದು ಹೊಸ ಚೈತನ್ಯ ಬರಬೇಕಾಗಿದೆ.

ಕನ್ನಡ ಕಾವ್ಯವನದ ಪಂಡಿತವಕ್ಕಿಗಳಾದ ಶ್ರೀ ಗೋವಿಂದ ಪೈರವರು ಈ ಸಂಗ್ರಹದ ಮುನ್ನುಡಿಯಲ್ಲಿ.—" ಪ್ರತಿಯೊಂದು ಕವಿತೆಯಲ್ಲಿ ಜೀವವಿದೆ, ಭಾವವಿದೆ, ಮಾಧುರ್ಯವೂ ಇದೆ, ಸೌಂದರ್ಯವೂ ಇದೆ " ಎಂದಿದ್ದಾರೆ. ಇವುಗಳಲ್ಲಿ ಒಂದಾದರೂ ಇಲ್ಲವೆನ್ನುವಂತಿಲ್ಲ; ಇಷ್ಟೇ ಅಲ್ಲ, ಇನ್ನು ಕೆಲವು " ಇವೆ " ಗಳನ್ನು ವಿಮರ್ಶಕನಾದವನು ಹೇಳದಿರಲಾಗುವದಿಲ್ಲ......"

—" ನಂದಿನೀ "

(೧೦—೧೨—೧೯೪೦) ಶಿರಸಿ

"......ಕವಿತೆಗಳು ಹೇರಳವಾಗಿ ಸೃಷ್ಟಿಯಾಗುತ್ತಿರುವ ಈ ಕಾಲದಲ್ಲಿ, ಕವಿತೆಗಳ ಸೂಕ್ಷ್ಮ ಪರೀಕ್ಷೆ ನಡೆಸಿ ಅವುಗಳೊಳಗೆ ಅಡಗಿರುವ ಸೌಂದರ್ಯ, ಮಾಧುರ್ಯ,

ವೈಶಿಷ್ಟ್ಯಗಳನ್ನು ಹುಡುಕಿ ಅನುಭವಿಸಲು ಸಾವಧಾನವೇ ಇಲ್ಲದ ಈ ಕಾಲದಲ್ಲಿ, ಒಮ್ಮೆ ಬೇಸರದಿಂದ ತಿರುವಿ ಹಾಕಿದರೂ, ನಮ್ಮ ಗಮನವನ್ನು ಹಿಡಿದು ನಿಲ್ಲಿಸಿ, ನಮ್ಮಿಂದ ಮೆಚ್ಚಿಗೆಯನ್ನು ಪಡೆಯುವ ಕವಿತೆಗಳು ವಿರಳ. ನಮ್ಮ ಹೃದಯವನ್ನು ಹೊಗುವ ಅಂತಹ ವಿರಳ, ಕವಿತಾಗುಚ್ಛವೇ "ಚೆಂಗಲವೆ"......ಶ್ರೀ ಪಾಂಡೇಶ್ವರ ಗಣಪತಿ ರಾಯರು ತಮ್ಮ ಭಾವುಕ ಹೃದಯದ ನಿಜಗೀತಗಳನ್ನು ಆಡಂಬರವಿಲ್ಲದೆ, ಆನಂದವಾಗಿ ಹಾಡುತ್ತಾರೆ......"

—ತಿ. ತಾ. ಶರ್ಮ,

"ವಿಶ್ವ ಕರ್ನಾಟಕ"

(೨೬—೧—೧೯೪೧)ಬೆಂಗಳೂರು

"ತಮ್ಮ "ಹೂಗೊಂಚಲಿ"ನಿಂದ ಕನ್ನಡಿಗರಿಗೆ ಪರಿಮಳವಿತ್ತು ಪರಿಚಿತರಾದ ಶ್ರೀಮಾನ್ ಪಾಂಡೇಶ್ವರ ಗಣಪತಿರಾಯರು ಇಂದು "ಚೆಂಗಲವೆ"ಯನ್ನು ಕನ್ನಡ ರಸಿಕರಿಗರ್ಪಿಸಿದ್ದಾರೆ. ಶ್ರೀಯುತರು 'ತುಳುನಾಡಿನ ಹಾಡುಹಕ್ಕಿ, ಹಾರುಹಕ್ಕಿ.' ಅವರ ಕಾವ್ಯವು ಜೀವನದ ವಿವಿಧ ಅನುಭವಗಳಿಂದ ಎದ್ದು ನಿಂತು ವಿವಿಧ ರೀತಿಯಲ್ಲಿ ಹೊರಹೊಮ್ಮಿದೆ. ಅಂತೆಯೇ ಅದರಲ್ಲಿ ಸ್ವಾರಸ್ಯವಿದೆ, ಸ್ಪಷ್ಟತೆ ಇದೆ. ಶ್ರೀಯುತರ ಕನ್ನಡ ನಾಡಿನ ಸುತ್ತಾಟ ಅವರ ಕಾವ್ಯಕ್ಕೆ ಅನೇಕ ಕಡೆ ಮೆರಗು ಕೊಟ್ಟಿದೆ. ನಾಡ ಅನುಭವ ನುಡಿಗೆ ಜೀವ ಕೊಟ್ಟಿರುವುದನ್ನು ಇವರ ಕವನಗಳಲ್ಲಿ ಅನೇಕ ಕಡೆ ನೋಡ ಬಹುದಾಗಿದೆ. ಮುಕ್ಕಾಲುಪಾಲು ಗೀತೆಗಳಲ್ಲಿ ಇವರ ಜೀವನದ ಕಹಿ, ಕಟು ಅನುಭವ, ಆಘಾತ, ಸ್ನೇಹದುರ್ವಿಪಾಕ, ವಿಷಾದ ಸ್ಮರಣೆ ಮೊದಲಾದವುಗಳು ಕವನ ಸಾಮಗ್ರಿಗಳಾಗಿ ನಿಂತಿವೆ. "ಹಾಳೂರ ಕತೆ" "ಒಡಹುಟ್ಟಿದವರ ಸ್ಮೃತಿ" "ಅಕಾಲ ಮೃತ್ಯು" ಇವು ಆಘಾತದಿಂದೆದ್ದ ಕರುಣಾಮಯ ಸುಂದರ ಚಿತ್ರಗಳಾಗಿವೆ. ಅನೇಕ ಭಾವಗೀತೆಗಳ ಭಾಷೆ ಭಾವದೊಡನೆ ಬೆರೆತು, ಪೂರ್ಣತ್ವವನ್ನು ಹೊಂದಿ, ಸಾಮರಸ್ಯದ ಸವಿ ರಸವನ್ನು ಬೀರುತ್ತದೆ. "ಪಂಡಿತನಕ್ಕಿ" "ಅನ್ವೇಷಣ" "ಮಧುಮಾಸದುದಯ" "ಸಂಜೆ ಬಂತು" "ಒಂದು ಭಾವ" "ಪಡಿನುಡಿ" ಮೊದಲಾದ ಕವನಗಳು ಈ ಮಾತಿಗೆ ಸಾಕ್ಷಿಗಳಾಗಿ ನಿಂತಿವೆ......ಒಟ್ಟಾರೆ, ಶ್ರೀ ಪಾಂಡೇಶ್ವರರ ಕವಿತೆಗಳಲ್ಲಿ ಬಾಳಿನ ಗೋಳುಗಳು, ಜೀವನದ ಕಹಿ ಸಿಹಿಗಳು, ಮಾನವನ ಸೋಲು ಗೆಲವುಗಳು ಪ್ರತಿಭಾಮಯವಾಗಿ ಮೂಡಿವೆ......"

—ಕೃಷ್ಣಮೂರ್ತಿ ಪುರಾಣಿಕ

(ಪ್ರಬುದ್ಧ ಕರ್ನಾಟಕ)ಬೆಂಗಳೂರು

—ಮಾರ್ಚ ೧೯೪೧

"......CHENGALAVE (The Red Lily) is the second book of poems from the pen of Mr.Ganapathy Rao of South Kanara. There is more experience of life and writing here and the tone is more serious. Light and shade born of a wider experience in joy and sorrow, success and failure, play on the subjects... If his effects are more conscious and deliberate, his hand is surer; and his mind ranges with confidence over fields of reflection. Usha (Morning) The evening came, The birth of Spring, O, Night–are some of the pieces whieh can please......"

—ವಿ. ಸೀತಾರಾಮಯ್ಯ

Hindu(2 0—1—1941) (ಮದ್ರಾಸ)

" ಆಗಾಗ ನಿಮ್ಮ ಲೇಖನಗಳನ್ನು ಓದಿ ಸಂತೋಷಿಸಿದ್ದೇನೆ. ಈಗ ನಿಮ್ಮ ಕವಿತೆಗಳನ್ನು ಈ ರೂಪದಲ್ಲಿ ಸಂಗ್ರಹ ಮಾಡಿರುವುದು ಬಲು ಚೆನ್ನಾಗಿದೆ. ಮಧುರವಾದ ಭಾವಗಳು, ಮನಸ್ಸನ್ನು ಹಿಡಿದು ನಿಲ್ಲಿಸುವಂಥ ಸನ್ನಿವೇಶ ಕಲ್ಪನೆಗಳು, ಆಳವಾದ ಚಿಂತಾತರಂಗಗಳು; ಇವುಗಳಿಗೆ ಉಚಿತವಾಗಿ, ಸುಲಭವೂ, ಲಲಿತವೂ ಆದ ಪದ ಶೈಲಿ—ಇವುಗಳಿಂದ ನಿಮ್ಮ ಕವಿತೆಗಳು ಮನೋಹರವಾಗಿವೆ. ಶ್ರೀಮಾನ್ ಗೋವಿಂದ ಪೈಗಳವರ ಹಾರೈಕೆಯಲ್ಲಿ ನಾನೂ ಸೇರಲಪೇಕ್ಷಿಸುತ್ತೇನೆ..."

—ಡಿ. ವಿ. ಗುಂಡಪ್ಪ.

(೨೨—೧೨—೪೦) ಬೆಂಗಳೂರು.

ಇವರ ಇತರ ಪ್ರಕಟಿತ ಕೃತಿಗಳು:—

ವಿವೇಕಾನಂದ ಚರಿತಂ (೧೯೨೬) ಕೊಳಲ ಕೃಷ್ಣ (೧೯೨೭)

ಹೂಗೊಂಚಲು (೧೯೨೮) Fragrant Buds (೧೯೨೯)

ಸದ್ಯದಲ್ಲಿಯೇ ಪ್ರಕಟವಾಗಲಿರುವವು:—

(೧) ಇಂದಿನ ಕನ್ನಡ ಸಾಹಿತ್ಯ ಮತ್ತು ವ್ಯಕ್ತಿ ಚಿತ್ರಗಳು

(೨) ಕವನ ಸಂಗ್ರಹ.